

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 5 ಭಾನುವಾರ 2025

ಸಂಪುಟ: 45 | ಸಂಚಿಕೆ: 259 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಚೀನಾದಲ್ಲಿ ವೈರಸ್ ಆತಂಕ

ಕರ್ನಾಟಕಕ್ಕೆ ಕೇಂದ್ರ ಆರೋಗ್ಯ ಇಲಾಖೆ ಕಟ್ಟುನಿಟ್ಟಿನ ಸೂಚನೆ



ಬೆಂಗಳೂರು: ಕೊರೊನಾ ಹೆಮ್ಮಾರಿ ಇಡೀ ಜಗತ್ತನ್ನೇ ಬೆಚ್ಚಿಬೀಳಿಸಿತ್ತು. ವೈರಸ್‌ನ ಅಟ್ಟಹಾಸ ಇನ್ನೂ ಮಾಸಿಲ್ಲ. ಹೀಗಿರುವಾಗಲೇ ಮತ್ತೊಂದು ಹೆಮ್ಮಾರಿ ಲಗ್ಗೆ ಇಟ್ಟಿದೆ. ಚೀನಾದಲ್ಲಿ ಇದೀಗ ಹೊಸ ವೈರಸ್ ಮತ್ತೆ ಪತ್ತೆಯಾಗಿದ್ದು, ಎಲ್ಲರೂ ಶಾಕ್ ಆಗುವಂತೆ ಮಾಡಿದೆ. ನೆರೆಯ ಚೀನಾ ದೇಶದಲ್ಲಿ ಹೊಸ ವೈರಸ್ ಆತಂಕ ಬೆನ್ನಲ್ಲೇ ಸದ್ಯ ಕೇಂದ್ರ ಆರೋಗ್ಯ ಇಲಾಖೆ ಅಲರ್ಟ್ ಆಗಿದ್ದು, ಕರ್ನಾಟಕ ಸೇರಿ ಎಲ್ಲಾ ರಾಜ್ಯಗಳಿಗೆ ಐಎಲ್‌ಐ, ಸಾರಿ ಕೇಸ್‌ಗಳು ಕಂಡುಬಂದರೆ ಟೆಸ್ಟಿಂಗ್ ಮಾಡುವಂತೆ ಸಲಹೆ ನೀಡಿದೆ.

ಚೀನಾ ದೇಶದಲ್ಲಿ ಹೊಸ ವೈರಸ್ ಆತಂಕ ಸೃಷ್ಟಿಸಿದೆ. ಇದರ ಬೆನ್ನಲ್ಲೇ ಕೇಂದ್ರ ಆರೋಗ್ಯ ಇಲಾಖೆ ಅಧಿಕಾರಿಗಳು ಸಭೆ ಮಾಡಿದ್ದಾರೆ. ಈ ಬಗ್ಗೆ ಸುದ್ದಿ ವಾಹಿನಿಗೆ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತಾ ಪ್ರತಿಕ್ರಿಯಿಸಿದ್ದು, ಐಎಲ್‌ಐ, ಸಾರಿ ಕೇಸ್‌ಗಳು ಕಂಡುಬಂದರೆ ಟೆಸ್ಟಿಂಗ್ ಮಾಡುವಂತೆ ಕರ್ನಾಟಕ ಸೇರಿ ಎಲ್ಲಾ ರಾಜ್ಯಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ಆತಂಕ ಪಡುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಈ ಸೀಸನ್‌ನಲ್ಲಿ ವೈರಸ್ ಹೆಚ್ಚಾಗಿ ಬರುತ್ತದೆ. ವೈರಸ್ ಹೆಚ್ಚಾಗುವುದರಿಂದ ಉಸಿರಾಟದ ಸಮಸ್ಯೆ ಆಗುತ್ತೆ. ಜ್ವರ, ಕೆಮ್ಮಿನಿಂದ ಬಳಲುವವರು ಮಾಸ್ಕ್ ಹಾಕುವಂತೆ ಸಲಹೆ ನೀಡಿದ್ದಾರೆ.

ಗಾಬರಿಬೀಳುವ ಅಗತ್ಯವೇನು ಇಲ್ಲ: ಆರೋಗ್ಯ ಸೇವೆಗಳ ಮಹಾ ನಿರ್ದೇಶನಾಲಯದ ಡಾ. ಅತುಲ್ ಗೋಯೆಲ್ ಮಾತನಾಡಿದ್ದು, ಮೆಟಾಪ್ನ್ಯೂಮೋವೈರಸ್ ಸಾಮಾನ್ಯ ಶೀತವನ್ನು ಉಂಟುಮಾಡುವ ವೈರಸ್. ತುಂಬಾ ವಯಸ್ಸಾದ ಮತ್ತು ಚಿಕ್ಕವರಲ್ಲಿ ■ 6ನೇ ಪುಟಕ್ಕೆ





ಮಧ್ಯರಾತ್ರಿಯಿಂದಲೇ ಬಸ್ ದರ ಏರಿಕೆ

- ಶೇ.15ರಿಂದ 20ರವರೆಗೆ ದರ ಹೆಚ್ಚಳ
- ವಾರ್ಷಿಕ 1800 ಕೋಟಿಗೂ ಅಧಿಕ ಆದಾಯ ಸಂಗ್ರಹ
- ಮಹಿಳೆಯರಿಗೆ ಉಡುಗೊರೆ; ಪುರುಷರಿಗೆ ಬರೆ ಹಾಕಿದ ಸರ್ಕಾರ

ಬೆಂಗಳೂರು,ಜ.4(ಕೆಎಂಶಿ)–ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಪ್ರಯಾಣ ದರ ಹೆಚ್ಚಳ ಮಧ್ಯರಾತ್ರಿಯಿಂದಲೇ ಜಾರಿಗೊಂಡಿದ್ದು, ಗಂಡಸರ ಜೇಬಿಗೆ ಕತ್ತರಿ ಬಿದ್ದಿದೆ.

ನಾಲ್ಕು ವರ್ಷಗಳ ನಂತರ ದರ ಹೆಚ್ಚಳ ಮಾಡಲು ಸರ್ಕಾರ ಅನುಮತಿ ನೀಡಿದ ಬೆನ್ನಲ್ಲೇ ಸಾರಿಗೆ ಸಂಸ್ಥೆ ನಿಗಮಗಳು ಶೇಕಡ 15 ರಿಂದ 20 ರಷ್ಟು ಪ್ರಯಾಣ ದರ ಹೆಚ್ಚಿಸಿ ಜಾರಿ ಮಾಡಿವೆ. ಹೆಚ್ಚಳದಿಂದ ವಾರ್ಷಿಕ 1,800 ಕೋಟಿ ರೂ. ಸಂಗ್ರಹ ಗುರಿ ಇಟ್ಟುಕೊಂಡಿದ್ದು, ಮಹಿಳೆಯರಿಗೆ ಸಾಮಾನ್ಯ ಬಸ್‌ಗಳಲ್ಲಿ ಎಂದಿನಂತೆ ಉಚಿತ ಪ್ರಯಾಣ ಸೇವೆ ಮುಂದುವರೆಯಲಿದೆ.

ಮಹಿಳೆಯರಿಗೆ ಉಚಿತ ಕೊಟ್ಟು ಅದರ ಹೊರೆಯನ್ನು ನಮ್ಮ ಮೇಲೆ ಹೇರುತ್ತಿದ್ದಾರೆಂದು ಪುರುಷರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದರೂ ಸರ್ಕಾರ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಮಾಡಿಕೊಂಡಿಲ್ಲ.


ದೂರದ ಊರುಗಳಿಗೆ ಸಂಚರಿಸುವ ಐಷಾರಾಮಿ ಮತ್ತು ವೇಗದೂತ ಬಸ್‌ಗಳ ದರ ಹೆಚ್ಚಳ ಶೇಕಡ 15ಕ್ಕಿಂತ ಹೆಚ್ಚಾಗಿದೆ. ಈ ದರಗಳು ಖಾಸಗಿ ಬಸ್ ದರಗಳಿಗೆ ಹೋಲಿಸಿದರೆ, 300 ರೂ.ನಿಂದ 500 ರೂ.ಗಳವರೆಗೆ ಹೆಚ್ಚಿದೆ. ಮುಂದಿನ ಆರು ತಿಂಗಳಲ್ಲಿ 2,000 ಹೊಸ ಬಸ್‌ಗಳು ನಿಗಮಗಳಿಗೆ ಸೇರ್ಪಡೆಗೊಳ್ಳುತ್ತಿದ್ದು, ಅವುಗಳಲ್ಲಿ ■ 6ನೇ ಪುಟಕ್ಕೆ

ಎಲ್ಲಿಗೆ ಎಷ್ಟು ದರ

ಬೆಂಗಳೂರಿನಿಂದ ಹುಬ್ಬಳ್ಳಿಗೆ	501 – 576 ರೂ.
ಬೆಂಗಳೂರಿನಿಂದ ಬೆಳಗಾವಿಗೆ	631 – 725 ರೂ.
ಕಲಬುರಗಿಗೆ	706 – 811 ರೂ.
ಮೈಸೂರಿಗೆ	185 – 213 ರೂ.
ಮಡಿಕೇರಿಗೆ	358 – 411 ರೂ.
ಚಿಕ್ಕಮಗಳೂರಿಗೆ	285 – 328 ರೂ.
ಬೆಂಗಳೂರಿನಿಂದ ಹಾಸನಕ್ಕೆ	246 – 282 ರೂ.
ಮಂಗಳೂರಿಗೆ	424 – 477 ರೂ.
ರಾಯಚೂರಿಗೆ	556 – 639 ರೂ.
ಬಳ್ಳಾರಿಗೆ	376 – 432 ರೂ.

ಬೆಂಗಳೂರು ಮಹಾನಗರ ಸಾರಿಗೆ ನಿಗಮ (ಬಿಎಂಟಿಸಿ) ಸಹಾ ತನ್ನ ಬಸ್‌ಗಳ ಪುರುಷ ಪ್ರಯಾಣಿಕರಿಗೆ ದರ ಹೆಚ್ಚಳದ ಬಿಸಿ ಮುಟ್ಟಿಸಿದ್ದು, ರಾಜಧಾನಿಯ ಪ್ರಮುಖ ಬಸ್ ನಿಲ್ದಾಣವಾದ ಕೆಂಪೇಗೌಡ ಬಸ್ ನಿಲ್ದಾಣದಿಂದ ಜಯನಗರಕ್ಕೆ ಸದ್ಯದ ದರ 20 ರೂ. ಇದ್ದು, ಏರಿಕೆ ನಂತರ **23 ರೂ.** ಆಗಲಿದೆ. ಅಂತೆಯೇ, ಕೆಂಪೇಗೌಡ ಬಸ್ ನಿಲ್ದಾಣದಿಂದ ಸರ್ಜಾಪುರಕ್ಕೆ 25 ರೂ.ನಿಂದ **28 ರೂ.**, ಅತ್ತಿಬೆಲೆಗೆ 25 ರೂ.ನಿಂದ **28 ರೂ.**, ಹಾರೋಹಳ್ಳಿಗೆ 25 ರೂ.ನಿಂದ **28.75 ರೂ.**, ಬನಶಂಕರಿಗೆ 20 ರೂ.ನಿಂದ **23 ರೂ.**, ವಿಮಾನ ನಿಲ್ದಾಣಕ್ಕೆ 235 ರೂ.ನಿಂದ **270 ರೂ.** ಆಗಲಿದೆ.

ಭಾರತದ ನ್ಯೂಕ್ಲಿಯರ್ ವಿಜ್ಞಾನಿ ಆರ್.ಚಿದಂಬರಂ ಇನ್ನಿಲ್ಲ



ಡಾ.ಆರ್.ಚಿದಂಬರಂ

ಮುಂಬಯಿ, ಜ.4– ಭಾರತದ ಅಣು ಪರೀಕ್ಷೆಗಳಲ್ಲಿ ಮಹತ್ವದ ಪಾತ್ರ ವಹಿಸಿದ್ದ ದಿಗ್ಗಜ ನ್ಯೂಕ್ಲಿಯರ್ ವಿಜ್ಞಾನಿ ಡಾ.ಆರ್. ಚಿದಂಬರಂ(88) ಅವರು ಶನಿವಾರ ಬೆಳಗ್ಗೆ ನಿಧನರಾದರು. ಪೋಖ್ರಾನ್‌ನಲ್ಲಿ 1974 ಹಾಗೂ 1998ರಲ್ಲಿ ನಡೆಸಲಾದ ಭಾರತದ ಪರಮಾಣು ಸ್ಫೋಟ ಪರೀಕ್ಷೆಗಳಲ್ಲಿ ಚಿದಂಬರಂ ಅವರು ಪ್ರಧಾನ ಪಾತ್ರ ವಹಿಸಿದ್ದರು. ಮುಂಬಯಿಯ ಜಸ್ಲೋಕ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು ಎಂದು ಆಟೋಮಿಕ್ ಎನರ್ಜಿ ಇಲಾಖೆ (ಡಿಎಇ) ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭಾರತದ ಆಟೋಮಿಕ್ ಎನರ್ಜಿ ಕಮಿಷನ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಅವರು, ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರರೂ ಆಗಿದ್ದರು. ಭಾರತವನ್ನು ಅಣ್ವಸ್ತ್ರ ದೇಶವನ್ನಾಗಿಸುವಲ್ಲಿ ಗಣನೀಯ ಕೊಡುಗೆ ನೀಡಿದ ಅವರಿಗೆ 'ಪದ್ಮ ವಿಭೂಷಣ' ಪುರಸ್ಕಾರ ಒಲಿದಿತ್ತು. ಭಾರತದ ವೈಜ್ಞಾನಿಕ ಹಾಗೂ ವ್ಯೂಹಾತ್ಮಕ ಸಾಮರ್ಥ್ಯಗಳಿಗೆ ಡಾ. ಚಿದಂಬರಂ ಅವರ ಅಸಾಧಾರಣ ಕೊಡುಗೆ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿನ ದೂರದೃಷ್ಟಿಯ ನಾಯಕತ್ವವನ್ನು ಸದಾ ಸ್ಮರಿಸಲಾಗುತ್ತದೆ ಎಂದು ಡಿಎಇ ಹೇಳಿಕೆ ಬಿಡುಗಡೆ ಮಾಡಿದೆ.

ವಿವಿಧ ಹುದ್ದೆಗಳಲ್ಲಿ ಸೇವೆ: 1936ರಲ್ಲಿ ಜನಿಸಿದ ಚಿದಂಬರಂ, ಚೆನ್ನೈನ ಪ್ರೆಸಿಡೆನ್ಸಿ ಕಾಲೇಜ್ ಹಾಗೂ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಹಳೆಯ ವಿದ್ಯಾರ್ಥಿಯಾಗಿದ್ದರು. ತಮ್ಮ ವೃತ್ತಿ ಬದುಕಿನಲ್ಲಿ ಚಿದಂಬರಂ ಅವರು ಅನೇಕ ಪ್ರತಿಷ್ಠಿತ ಹುದ್ದೆಗಳನ್ನು ಅಲಂಕರಿಸಿದ್ದರು. ಭಾರತ ಸರ್ಕಾರದ ಪ್ರಧಾನ ವೈಜ್ಞಾನಿಕ ಸಲಹೆಗಾರ (2001– 2018), ಬಾಬಾ ಆಟೋಮಿಕ್ ಸಂಶೋಧನಾ ಕೇಂದ್ರದ ನಿರ್ದೇಶಕ (1990– 1993), ಅಣುಶಕ್ತಿ ಆಯೋಗದ ಅಧ್ಯಕ್ಷ ಮತ್ತು ಭಾರತದ ಸರ್ಕಾರದ ಡಿಎಇ ಕಾರ್ಯದರ್ಶಿಯಾಗಿ (1993–2000), 1994– 95ರಲ್ಲಿ ಅಂತಾರಾಷ್ಟ್ರೀಯ ಅಣುಶಕ್ತಿ ಸಂಸ್ಥೆ (ಐಎಇಎ) ಗವರ್ನರ್‌ಗಳ ಮಂಡಳಿಯ ಅಧ್ಯಕ್ಷರಾಗಿ ಕೂಡ ಸೇವೆ ಸಲ್ಲಿಸಿದ್ದರು. ■ 3ನೇ ಪುಟಕ್ಕೆ

ವರುಣದಿಂದ ನಾನು ಸ್ಪರ್ಧೆ ಮಾಡಿದ್ದರೆ ನಿಮ್ಮ ಸಿದ್ದರಾಮಯ್ಯ ಸ್ಥಿತಿ ಏನಾಗೋದು?

ಕಾಂಗ್ರೆಸ್ ವಿರುದ್ಧ ವಿಜಯೇಂದ್ರ ವಾಗ್ದಾಳಿ



ವಿಜಯೇಂದ್ರ

ಶಿವಮೊಗ್ಗ, ಜ.4– ಕಳೆದ ಬಾರಿ ವರುಣಾದಿಂದ ನಾನು ಸ್ಪರ್ಧೆ ಮಾಡಿದ್ದರೆ ನಿಮ್ಮ ಸಿದ್ದರಾಮಯ್ಯ ಅವರ ಸ್ಥಿತಿ ಏನಾಗೋದು ಯೋಚಿಸಿ ಎಂದು ಕಾಂಗ್ರೆಸ್ಸಿಗರ ವಿರುದ್ಧ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಾಗ್ದಾಳಿ ನಡೆಸಿದ್ದಾರೆ. ಶಿವಮೊಗ್ಗದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ನಾನು ಮೊದಲ ಬಾರಿ ಶಾಸಕ ಆಗಿರಬಹುದು. ಆದರೆ ಕೆ.ಆರ್. ಪೇಟೆ, ಶಿರಾ ಕ್ಷೇತ್ರದಲ್ಲಿ ಗೆಲುವಿಗೆ ಶ್ರಮಿಸಿದ್ದೇನೆ. ಕಳೆದ ಬಾರಿ ವರುಣದಿಂದ ಸ್ಪರ್ಧೆ ಮಾಡಿದ್ದರೆ ನಿಮ್ಮ ಸಿದ್ದರಾಮಯ್ಯ ಸ್ಥಿತಿ ಏನು ಎಂಬುದನ್ನು ಯೋಚಿಸಿ ಎಂದು ಕಾಂಗ್ರೆಸ್ ವಿರುದ್ಧ ಕಿಡಿಕಾರಿದ್ದಾರೆ.

ಸಚಿನ್ ಪಾಂಚಾಳ ಆತ್ಮಹತ್ಯೆ ಕೇಸ್ ವಿಚಾರವಾಗಿ ಈಶ್ವರಪ್ಪ ಪ್ರಕರಣದಲ್ಲಿ ಇದೇ ಪ್ರಿಯಾಂಕ್ ಖರ್ಗೆ ರಾಜೀನಾಮೆಗೆ ಆಗ್ರಹಿಸಿದ್ದರು. ತನಿಖೆ ಎದುರಿಸಿ ಎಂದಿದ್ದರು. ಈಗ ಅವರು ಸಹ ಅದೇ ರೀತಿ ರಾಜೀನಾಮೆ ಕೊಟ್ಟು ತನಿಖೆ ಎದುರಿಸಲಿ ಎಂದು ಆಗ್ರಹಿಸಿದ್ದಾರೆ.


ಪ್ರಿಯಾಂಕ್ ಖರ್ಗೆ ಅವರ ಎಡಗೈ ಭಂಟನಿಂದ ಸಚಿನ್ ಪಾಂಚಾಳ ಆತ್ಮಹತ್ಯೆ ಆಗಿದೆ. ಇದನ್ನು ವಿರೋಧಿಸಿ ಕಲಬುರಗಿಯಲ್ಲಿ ದೊಡ್ಡ ಮಟ್ಟದಲ್ಲಿ ಹೋರಾಟ ಆಯೋಜನೆ ಮಾಡಿದ್ದೇವೆ. ಶಿಕಾರಿಪುರದಲ್ಲಿ ನಮ್ಮ ಮುಖಂಡರು ಮೃತಪಟ್ಟಿದ್ದರು, ಹೀಗಾಗಿ ಭಾಗವಹಿಸಲು ಸಾಧ್ಯವಾಗಿಲ್ಲ. ನಮ್ಮ ಮುಖಂಡರು ಹೋರಾಟದಲ್ಲಿ ಭಾಗವಹಿಸಿದ್ದಾರೆ. ನಮಗೆ ಪೊಲೀಸರಿಂದ ನ್ಯಾಯ ಸಿಗುವ ವಿಶ್ವಾಸ ಇಲ್ಲ. ಸಚಿನ್ ಸಹೋದರಿ ಅವರ ಕುಟುಂಬ ಸಿಬಿಐ ತನಿಖೆಗೆ ಆಗ್ರಹಿಸಿದ್ದಾರೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ. ಮಹಾರಾಷ್ಟ್ರದ ಸುಪಾರಿ ಕಿಲ್ಲರ್ ಬಳಸಿಕೊಂಡು ಶಾಸಕ ಮತ್ತಿಮೋಡ್, ಹಿಂದೂ ಮುಖಂಡರ ಹತ್ಯೆಗೆ ಸಂಚು ಮಾಡಿದ್ದಾರೆ. ವಿಪಕ್ಷ ನಾಯಕರು ಬೆಳೆದರೆ ಗುಲ್ಬರ್ಗಾದಲ್ಲಿ ಇವರ ಬೇಳೆ ಬೇಯಿಸಲು ಸಾಧ್ಯವಿಲ್ಲ ಎಂದು ಹತ್ಯೆ ಮಾಡಲು ಹೊರಟಿದ್ದಾರೆ. ಪ್ರಿಯಾಂಕ್ ಖರ್ಗೆಯವರೇ, ನಿಮಗೆ ಸಲಹೆ ಕೊಡ್ತೇನೆ. ನೀವು ಪ್ರಾಮಾಣಿಕರಾಗಿದ್ದರೆ ಸಿಬಿಐ ತನಿಖೆಗೆ ವಹಿಸಿ. ಸಿದ್ದರಾಮಯ್ಯ ಅವರನ್ನು ನಂಬಬೇಡಿ. ನಿಮ್ಮ ಪಕ್ಷದಲ್ಲಿ ಹಲವು ಷಡ್ಯಂತ್ರ ನಡೆಯುತ್ತಿದೆ. ನಿಮಗೆ ಸಿದ್ದರಾಮಯ್ಯ ಅವರಿಂದ ನ್ಯಾಯ ಸಿಗಲ್ಲ. ನಿಮಗೆ ಮುಖ್ಯಮಂತ್ರಿ ಆಗುವ ಆಸೆ ಇದ್ದರೆ ಸಿಬಿಐ ತನಿಖೆಗೆ ವಹಿಸಿ ಎಂದಿದ್ದಾರೆ. ಕಾಂಗ್ರೆಸ್ ಸರ್ಕಾರ ಎರಡು ವರ್ಷದಲ್ಲಿ ಏನು ಸಾಧನೆ ಮಾಡಿದೆ ಎಂದು ಸಿದ್ದರಾಮಯ್ಯ ಅವರ ಮಂತ್ರಿಗಳು ಹೇಳಬೇಕು. ಎರಡು ವರ್ಷದಲ್ಲಿ ಅವರ ಸಾಧನೆ ಶೂನ್ಯ. ಈ ಅವಧಿಯಲ್ಲಿ ಯಾವೊಬ್ಬ ಶಾಸಕ ಶಂಕುಸ್ಥಾಪನೆ, ಗುದ್ದಲಿ ಪೂಜೆ ಮಾಡಿಲ್ಲ. ನಾವು ಹೇಳಿದರೆ ವಿಪಕ್ಷ ಶಾಸಕರ ಟೀಕೆ ಅಂತಾರೆ. ಕಾಂಗ್ರೆಸ್ ಶಾಸಕರು ಆಡಳಿತ ಪಕ್ಷದ ಶಾಸಕರು ಆರೋಪ ಮಾಡ್ತಿದ್ದಾರೆ. ಕಾಗವಾಡ ಶಾಸಕ, ಆರ್.ವಿ.ದೇಶಪಾಂಡೆ ಆರೋಪ ಮಾಡಿದ್ದಾರೆ. ಕ್ಷೇತ್ರಕ್ಕೆ ಅನುದಾನ ತರಲು ಪರದಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ವಿಶ್ವದಲ್ಲಿಯೇ ಗರಿಷ್ಠ ವೇತನ ಪಡೆಯುವ ಭಾರತೀಯ; ದಿನದ ಸಂಬಳ 48 ಕೋಟಿ!

ಬೆಂಗಳೂರು: ಇಂದು ಜಗತ್ತಿನಲ್ಲಿ ಒಂದಲ್ಲಾ ಒಂದು ದೇಶದಲ್ಲಿ ಪ್ರತಿದಿನ ಎನ್ನುವಂತೆ ಹೊಸ ಕಂಪನಿಗಳು ಆರಂಭವಾಗುತ್ತಿದ್ದು, ಅವು ವೇಗವಾಗಿ ಬೆಳೆಯುತ್ತಿವೆ. ಇದೇ ವೇಳೆ ಹೆಚ್ಚಿನ ಸಂಬಳ ಪಡೆಯುವ ಉದ್ಯೋಗಿಗಳ ಸಂಖ್ಯೆಯೂ ಹೆಚ್ಚುತ್ತಿದೆ. ಹೀಗಿರುವಾಗ ಜಗತ್ತಿನಲ್ಲೇ ಅತಿ ಹೆಚ್ಚು ಸಂಬಳ ಪಡೆಯುವ ಭಾರತೀಯರೊಬ್ಬರ ಹೆಸರು ಮುನ್ನೆಲೆಗೆ ಬಂದಿದೆ. ಭಾರತೀಯ ಮೂಲದ ಜಗದೀಪ್ ಸಿಂಗ್ ಇಂದು ವಿಶ್ವದಲ್ಲೇ ಅತೀ ಹೆಚ್ಚು ಸಂಬಳ ಪಡೆಯುವ ಉದ್ಯೋಗಿ ಎನ್ನುವ ಶ್ರೇಯಕ್ಕೆ ಪಾತ್ರರಾಗಿದ್ದಾರೆ. ಅವರ ವಾರ್ಷಿಕ ಆದಾಯ 2.1 ಶತಕೋಟಿ ಡಾಲರ್ ಅಂದರೆ, 17,500 ಕೋಟಿ. ಇದರರ್ಥ ಅವರ ಪ್ರತಿದಿನದ ಸಂಬಳವೇ 48 ಕೋಟಿ ರೂಪಾಯಿ ಆಗಿದೆ.

ಜಗದೀಪ್ ಸಿಂಗ್ ಕೆಲಸವೇನು: ಜಗದೀಪ್‌ಸಿಂಗ್ ಅವರು ಕ್ವಾಂಟಮ್‌ಸ್ಕೇಪ್‌ನ ಸಿಇಒ. ತಂತ್ರಜ್ಞಾನ ಮತ್ತು ಶುದ್ಧ ಶಕ್ತಿಯ ಉದಯೋನ್ಮುಖ ■ 6ನೇ ಪುಟಕ್ಕೆ

ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಮುಜಾಫರ್ ಅಸ್ಸಾದಿ ನಿಧನ



ಪ್ರೊ.ಮುಜಾಫರ್ ಅಸ್ಸಾದಿ

ಮೈಸೂರು, ಜ.4(ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಮುಜಾಫರ್ ಅಸ್ಸಾದಿ(64) ಅವರು ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಮಧ್ಯರಾತ್ರಿ ನಿಧನರಾದರು.

ಶುಕ್ರವಾರ ರಾತ್ರಿ ತೆರೆದ ಹೃದಯ ಶಸ್ತ್ರ ಚಿಕಿತ್ಸೆಗೊಳಗಾಗಿದ್ದ ಅವರು, ಶನಿವಾರ ಸರಿರಾತ್ರಿ 12.30 ಗಂಟೆಗೆ ಕೊನೆಯುಸಿರೆಳೆದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೈಸೂರಿನ ನ್ಯೂ ಕಾಂತರಾಜ ಅರಸು ರಸ್ತೆ 3ನೇ ಮೇನ್‌ನಲ್ಲಿ ವಾಸವಾಗಿದ್ದ ಪ್ರೊ. ಅಸ್ಸಾದಿ, ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಅಪಾರ ಬಂಧು–ಬಳಗದವರನ್ನು ಅಗಲಿದ್ದಾರೆ. ಇಂದು ಬೆಳಗ್ಗೆ ಪಾರ್ಥಿವ ಶರೀರವನ್ನು ಮೈಸೂರಿಗೆ ತರಲಾಯಿತು. ಮಧ್ಯಾಹ್ನ ಸರಸ್ವತಿಪುರಂನ ಅಗ್ನಿಶಾಮಕ ಠಾಣೆ ಎದುರಿನ ಮುಸ್ಲಿಂ ವಿದ್ಯಾರ್ಥಿನಿಲಯದಲ್ಲಿ ಪ್ರಾರ್ಥನೆ ಸಲ್ಲಿಸಿದ ಬಳಿಕ ಸಂಜೆ ಟಿಪ್ಪು ಸರ್ಕಲ್ ಬಳಿ ಇರುವ ಕಬರಸ್ತಾನ್‌ನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೈಸೂರು ವಿಶ್ವವಿದ್ಯಾನಿಲಯದ ■ 6ನೇ ಪುಟಕ್ಕೆ

ಮೈಸೂರು ವಿಮಾನ ನಿಲ್ದಾಣ ಮೇಲ್ದರ್ಜೆಗೇರಿಸಲು ಭೂಮಿ ಕೊಡಿ

ಕೆಐಎಡಿಬಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಾಕೀತು

- ಮೈಸೂರು ವಿಮಾನ ನಿಲ್ದಾಣಕ್ಕೆ 150 ಎಕರೆ ವಶಕ್ಕೆ; ಉದ್ಯೋಗವಿಲ್ಲದೆ ದಾರಿ ತಪ್ಪುತ್ತಿರುವ ಯುವಕರು
- ಅರ್ಹರನ್ನು ಗುರುತಿಸಿ, ಸಾಲ ಸೌಲಭ್ಯ ನೀಡಿ; ಕರ್ನಾಟಕದಲ್ಲಿ ಅರಣ್ಯ ಪ್ರದೇಶ ವ್ಯಾಪ್ತಿ ಕ್ಷೀಣಿಸುತ್ತಿದೆ

ಮೈಸೂರು, ಜ.4(ಬಿಎಲ್‌ಯು)– ಮೈಸೂರು ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲು ಕೆಐಎಡಿಬಿಯವರು ಅಗತ್ಯ ಭೂಮಿಯನ್ನು ಕೇಂದ್ರ ಸರ್ಕಾರಕ್ಕೆ ನೀಡಬೇಕು ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಇಂದು ನಡೆದ ದಿಶಾ (2024–25ನೇ ಸಾಲಿನ ತ್ರೈಮಾಸಿಕ ಜಿಲ್ಲಾ ಅಭಿವೃದ್ಧಿ ಸಮನ್ವಯ ಹಾಗೂ ಉಸ್ತುವಾರಿ ಸಮಿತಿ) ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಗತ್ಯ ಭೂಮಿಯನ್ನು ಕೇಂದ್ರ ಸರ್ಕಾರಕ್ಕೆ ನೀಡಿದರೆ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಕಾಮಗಾರಿ ಆರಂಭವಾಗಲಿದೆ ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಮೈಸೂರು ವಿಮಾನ ನಿಲ್ದಾಣದ ಬಳಿ ಬೈಪಾಸ್ ರಸ್ತೆ ನಿರ್ಮಿಸಲು ಏರ್‌ಪೋರ್ಟ್ ಅಥಾರಿಟಿಯವರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಈಗಾಗಲೇ 500 ಕೋಟಿ ರೂ. ನೀಡಿದ್ದಾರೆ. ಆದರೆ ಬೈಪಾಸ್ ನಿರ್ಮಿಸುವ ಕಾಮಗಾರಿಗೆ 800 ಕೋಟಿ ವೆಚ್ಚವಾಗುತ್ತದೆ ಎಂಬ ವರದಿ ನೀಡಲಾಗಿದೆ ಎಂದರು.

ಏರ್‌ಪೋರ್ಟ್ ಅಥಾರಿಟಿಗೆ ಅಗತ್ಯವಿರುವ ಭೂಮಿ ನೀಡಲು ಈಗಾಗಲೇ 150 ಎಕರೆಯನ್ನು ಕೆಐಎಡಿಬಿ ವಶಕ್ಕೆ ಪಡೆದಿದೆ. ಉಳಿದ 40 ಎಕರೆಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಲಕ್ಷ್ಮೀಕಾಂತ ರೆಡ್ಡಿ ಸ್ಪಷ್ಟನೆ ನೀಡಿದರು. ನಂತರ ಮಾತನಾಡಿದ ಕುಮಾರಸ್ವಾಮಿ, ಉದ್ಯೋಗವಿಲ್ಲದೆ ಯುವಕರು ದಾರಿ ತಪ್ಪುತ್ತಿದ್ದು, ಅವರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಯೋಜನೆಗಳನ್ನು ಸಾಕಾರಗೊಳಿಸಬೇಕು. ಈ ಮೂಲಕ ಉದ್ಯೋಗವಿಲ್ಲದ ಯುವಕರ ಮನಸು ಬೇರೆ ಕಡೆ ಹೋಗದಂತೆ ಮುತುವರ್ಜಿ ವಹಿಸಬೇಕು ಎಂದು ಸಲಹೆ ನೀಡಿದರು.

ಯುವಕರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಬಹಳಷ್ಟು ಯೋಜನೆಗಳಿದ್ದು, ಅದನ್ನು ಅನುಷ್ಠಾನ ಮಾಡಿದರೆ ಯುವಕರು ಸ್ವಾವಲಂಬಿಗಳಾಗಬಹುದು. ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಯೋಜನೆ ಅನುಷ್ಠಾನ ಮಾಡಬೇಕು ಎಂದು ■ 3ನೇ ಪುಟಕ್ಕೆ



ಮೈಸೂರು ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಶನಿವಾರ ನಡೆದ ದಿಶಾ ಸಭೆಯಲ್ಲಿ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು. ಶಾಸಕ ಜಿ.ಡಿ.ಹರೀಶ್‌ಗೌಡ, ಸಂಸದರಾದ ಯದುವೀರ್, ಸುನೀಲ್‌ಬೋಸ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಅವರನ್ನು ಚಿತ್ರದಲ್ಲಿ ಕಾಣಬಹುದು.

ಫಲಾನುಭವಿ ಆಯ್ಕೆಯಾದರೂ ಸಾಲ ನೀಡುತ್ತಿಲ್ಲ

ಸರ್ಕಾರದ ವಿವಿಧ ಇಲಾಖೆಗಳಲ್ಲಿ ಫಲಾನುಭವಿಗಳು ಆಯ್ಕೆಯಾಗಿ ಅನುಮೋದನೆಗೊಂಡಿದ್ದರೂ ಬ್ಯಾಂಕ್‌ಗಳು ಸಾಲ ನೀಡುತ್ತಿಲ್ಲ ಎಂದು ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅಸಮಾಧಾನ ವ್ಯಕ್ತಪಡಿಸಿದರು. ಜನರು ಸಂಕಷ್ಟದಲ್ಲಿರುತ್ತಾರೆ. ಈ ಹಿನ್ನೆಲೆಯಲ್ಲಿ ಅವರ ಆರ್ಥಿಕ ಬವಣೆ ಅರ್ಥ ಮಾಡಿಕೊಂಡು ಸಾಲ ನೀಡುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ಹರೀಶ್‌ಗೌಡ ಸಲಹೆ ನೀಡಿದರು. ಈ ವೇಳೆ ಮಾತನಾಡಿದ ಚಾಮರಾಜನಗರ ಸಂಸದ ಸುನೀಲ್‌ಬೋಸ್, ಚಾಮರಾಜನಗರದಿಂದ ಮೈಸೂರಿನ ರೈಲ್ವೆ ಮಾರ್ಗವನ್ನು ವಿದ್ಯುದೀಕರಣ ಮಾಡಲು ಅಗತ್ಯ ಎನ್‌ಒಸಿ ಪಡೆದು ಕಾಮಗಾರಿ ಆರಂಭಿಸಬೇಕು. ಹೆಚ್.ಡಿ.ಕೋಟೆಯಿಂದ ಬಾವಲಿಗೆ ಹೋಗುವ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿರುವ ಹಿನ್ನೆಲೆ ಮೇಲ್ದರ್ಜೆಗೇರಿಸಲು ಪ್ರಸ್ತಾವನೆ ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬಿಜೆಪಿ ಜೊತೆಗೂಡಿ ಜೆಡಿಎಸ್ 2028ಕ್ಕೆ ಸರ್ಕಾರ ರಚಿಸುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ

- ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಖಚಿತ ನುಡಿ
- ಸಂಕ್ರಾಂತಿಯಿಂದ ಸದಸ್ಯತ್ವ ಅಭಿಯಾನಕ್ಕೆ ಚಾಲನೆ
- ಮೈಸೂರಲ್ಲಿ ಸ್ಥಳೀಯ ಸಂಸ್ಥೆಗಳ, ಸಹಕಾರ ಕ್ಷೇತ್ರದ ಚುನಾವಣಾ ಹಿನ್ನೆಲೆಯಲ್ಲಿ ಪಕ್ಷದ ಸಭೆ
- ಬಿಜೆಪಿ ಜೊತೆ ಐದು ವರ್ಷ ಸರ್ಕಾರ ನಡೆಸಿದರೆ ರಾಮರಾಜ್ಯ ಮಾದರಿ ಆಳ್ವಿಕೆ ವಿಶ್ವಾಸ



ಮೈಸೂರಿನಲ್ಲಿ ನಡೆದ ಜೆಡಿಎಸ್ ಮುಖಂಡರ ಸಭೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿದರು.

ಮೈಸೂರು,ಜ.4(ಎಸ್‌ಬಿಡಿ)– ರಾಜ್ಯದಲ್ಲಿ ಮುಂದೆ ಬಿಜೆಪಿ ಜೊತೆಗೂಡಿ ಸರ್ಕಾರ ರಚಿಸುವುದನ್ನು ಯಾರಿಂದಲೂ ತಪ್ಪಿಸಲು ಸಾಧ್ಯವಿಲ್ಲ ಎಂಬ ವಿಶ್ವಾಸದ ನುಡಿಗಳೊಂದಿಗೆ ಜೆಡಿಎಸ್ ಸದಸ್ಯತ್ವ ನೋಂದಣಿ ಅಭಿಯಾನಕ್ಕೆ ಜೆಡಿಎಸ್ ರಾಜ್ಯಾಧ್ಯಕ್ಷರೂ ಆದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮೈಸೂರಿನಲ್ಲಿ ಕರೆ ನೀಡಿದರು. ಮುಂಬರುವ ಸ್ಥಳೀಯ ಸಂಸ್ಥೆಗಳ ಹಾಗೂ ಸಹಕಾರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಮೈಸೂರಿನ ಸಾ.ರಾ.ಕನ್ವೆನ್ಷನ್ ಹಾಲ್ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಮೈಸೂರು ನಗರ ಹಾಗೂ ಗ್ರಾಮಾಂತರ ಜೆಡಿಎಸ್ ಮುಖಂಡರು ಹಾಗೂ ಪ್ರಮುಖರ ಸಭೆಯಲ್ಲಿ ಮಾತನಾಡಿದ ಅವರು, ಉಪ ಚುನಾವಣೆಗಳು ಹಾಗೂ ಸಾರ್ವತ್ರಿಕ ಚುನಾವಣೆ ನಡುವೆ ವ್ಯತ್ಯಾಸವಿದೆ. ಅದಕ್ಕೆ ಉದಾಹರಣೆಗಳೂ ಸಾಕ್ಷಿವೆ. ಆದರೂ 2028ಕ್ಕೂ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ಕಾಂಗ್ರೆಸ್‌ನವರು ಹೇಳುತ್ತಿದ್ದಾರೆ. ಆದರೆ ಕಾಂಗ್ರೆಸ್‌ನ ಗ್ಯಾರಂಟಿ ರಹಸ್ಯ, ಕೆಟ್ಟ ಆಡಳಿತ ಜನರಿಗೆ ಅರ್ಥವಾಗುತ್ತದೆ. ಬಿಜೆಪಿ ಜೊತೆ ಸೇರಿ ಜೆಡಿಎಸ್ ಸರ್ಕಾರ ರಚಿಸುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಅದಕ್ಕೆ ಕಾಂಗ್ರೆಸ್ ಪಕ್ಷವೇ ■ 3ನೇ ಪುಟಕ್ಕೆ

ಮೈಸೂರು ಮಿತ್ರ

ಭಾನುವಾರ 5 ಜನವರಿ 2025

ಅಮೆರಿಕಾ ಆಸ್ಪತ್ರೆಯಿಂದ ನಟ ಶಿವರಾಜ್‌ಕುಮಾರ್ ಡಿಸ್ಚಾರ್ಜ್



ಅಮೆರಿಕದ ಆಸ್ಪತ್ರೆಯ ಆವರಣದಲ್ಲಿ ಕುಟುಂಬ ಸಮೇತ ಶಿವರಾಜ್‌ಕುಮಾರ್.

ಅಮೆರಿಕಾ,ಜ.4–ನಟ ಶಿವರಾಜ್ ಕುಮಾರ್ ಅವರು ಸರ್ಜರಿ ಬಳಿಕ ಅಮೆರಿಕಾ ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದಾರೆ. ಕಳೆದ ಡಿ.22ರಂದು ಫ್ಲೋರಿಡಾದ ಮಿಯಾಮಿ ಕ್ಯಾನ್ಸರ್ ಇನ್ಸ್‌ಸ್ಟಿಟ್ಯೂಟ್‌ಗೆ ದಾಖಲಾಗಿದ್ದ ಶಿವಣ್ಣ ಡಿ.24ರಂದು ಸರ್ಜರಿ ಮಾಡಿಸಿಕೊಂಡಿದ್ದರು.

ಈಗ 14 ದಿನಗಳ ನಂತರ ಅವರು ಡಿಸ್ಚಾರ್ಜ್ ಆಗಿದ್ದಾರೆ. ಪ್ರತಿದಿನ ಜನರಲ್ ಚೆಕಪ್ ಜೊತೆ ವಾಕಿಂಗ್ ಮಾಡಲು ಶಿವರಾಜ್‌ಕುಮಾರ್‌ಗೆ ವೈದ್ಯರು ಹೇಳಿದ್ದಾರೆ ಎನ್ನಲಾಗಿದೆ. ಆಸ್ಪತ್ರೆಯ ಬಳಿ ಇರುವ ಖಾಸಗಿ ಹೋಟೆಲ್ ಒಂದರಲ್ಲಿ ಶಿವರಾಜ್‌ಕುಮಾರ್ ಕುಟುಂಬ ಉಳಿದುಕೊಂಡಿದೆ. ಸರ್ಜರಿ ಬಳಿಕ ಇನ್ನೂ ಎರಡು ಚೆಕಪ್ ಬಾಕಿ ಇದೆ. ಅದನ್ನು ಮುಗಿಸಿಕೊಂಡು ಜ.24ರ ರಾತ್ರಿ ಶಿವಣ್ಣ ಬೆಂಗಳೂರಿಗೆ ಹೊರಡಲಿದ್ದಾರೆ. ಜ.26 ರಂದು ಶಿವಣ್ಣ ಅವರು ಬೆಂಗಳೂರು ತಲುಪಲಿದ್ದಾರೆ ಎನ್ನಲಾಗಿದೆ. ಸದ್ಯ ಅಮೆರಿಕದ ಆಸ್ಪತ್ರೆಯ ಆವರಣದಲ್ಲಿ ತಾವು ಕುಟುಂಬ ಸಮೇತ ಇರುವ ಫೋಟೋವನ್ನು ಶಿವಣ್ಣ ತಮ್ಮ ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ.

ಫೆಬ್ರವರಿಯಲ್ಲಿ ಎಂದಿನಂತೆ ತಮ್ಮ ಸಿನಿಮಾ ನಟನೆ ಮುಂದುವರಿಸಲಿದ್ದಾರೆ ಎನ್ನಲಾಗಿದೆ. ಈಗಾಗಲೇ ಸಾಕಷ್ಟು ಸಿನಿಮಾಗಳು ಶಿವಣ್ಣ ಅವರ ಕೈನಲ್ಲಿದ್ದು, ಎಲ್ಲವನ್ನೂ ಮುಗಿಸಿಕೊಡುವತ್ತ ಶಿವಣ್ಣ ತಮ್ಮ ದೃಷ್ಟಿ ಹರಿಸಲಿದ್ದಾರೆ.

ಡಿಸಿಸಿ ಬ್ಯಾಂಕ್‌ನ ಅವ್ಯವಹಾರ ಮತ್ತೆ ಮುಂದುವರೆಯಲು ಆಸ್ಪದ

● ಶಾಸಕ ಜಿ.ಡಿ.ಹರೀಶ್‌ಗೌಡ ಆಕ್ರೋಶ ● ಸಹಕಾರಿ ಸಂಸ್ಥೆಗಳ ಹಣವೂ ಲೂಟಿ ಆಗಿದೆ; ಅದರಿಂದಲೇ ಚುನಾವಣೆ ನಡೆಸುವ ಪ್ರಯತ್ನ ● ಗ್ಯಾರಂಟಿಗಳಿಗೆ ಹಣಕ್ಕಾಗಿ ಎಲ್ಲಾ ಬೆಲೆ ಏರಿಕೆ ಮಾಡಲಾಗಿದೆ: ಸಾರಾ

ಮೈಸೂರು, ಜ.4(ಎಸ್‌ಬಿಡಿ)– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ಜೆಡಿಎಸ್ ಮುಖಂಡರು ಹಾಗೂ ಪ್ರಮುಖರ ಸಭೆಯಲ್ಲಿ ಮಾತನಾಡಿದ ಹಲವು ಮುಖಂಡರು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ಮಾತನಾಡಿ, ಇತಿಹಾಸದಲ್ಲೇ ಸರ್ಕಾರದ ಹಣದಲ್ಲಿ ಚುನಾವಣೆ ನಡೆಸಿದ ಅಪಕೀರ್ತಿ ಕಾಂಗ್ರೆಸ್‌ಗೆ ಸಲ್ಲುತ್ತದೆ. ಸರ್ಕಾರದ ಬಗ್ಗೆ ಮಾತನಾಡಿದರೆ ಕೇಸ್ ಹಾಕುವಂತಹ ನೀಚ ಸ್ಥಿತಿಗೆ ಇಳಿದಿದ್ದಾರೆ. ಎಸ್‌ಎಸ್‌ಐಟಿ ಎಂದರೆ ಶಿವಕುಮಾರ್, ಸಿದ್ದರಾಮಯ್ಯ ಇನ್ವೆಸ್ಟಿಗೇಷನ್ ಟೀಂ ಮೂಲಕ ತನಿಖೆ ನಡೆಸುತ್ತಾರೆ. ಗ್ಯಾರಂಟಿ ಕಾರ್ಯಕ್ರಮಗಳನ್ನು ನೀಡುವ ಸಲುವಾಗಿ ಎಲ್ಲಾ ಬೆಲೆ ಏರಿಕೆ ಮಾಡುತ್ತಿದ್ದಾರೆ. ಈಗ ಪ್ರಿನ್ಸೆಸ್ ರಸ್ತೆಗೆ ಸಿದ್ದರಾಮಯ್ಯನವರ ಹೆಸರಿಡಬೇಕೆಂದು ಹೇಳುತ್ತಿದ್ದಾರೆ. ರಾಜಮನೆತನದವರು ನೀಡಿರುವಷ್ಟು ಕೊಡುಗೆಯನ್ನು ಮತ್ತ್ಯಾರೂ ನೀಡಿಲ್ಲ. ಇದನ್ನು ಜನ ತೀರ್ಮಾನ ಮಾಡಬೇಕಲ್ಲವೇ? ಎಂದು ಪ್ರಶ್ನಿಸಿದರು.

ಜೆಡಿಎಸ್ ಒಂದು ಕುಟುಂಬ. ಮನೆ ಎಂದ ಮೇಲೆ ಸಣ್ಣಪುಟ್ಟ ಸಮಸ್ಯೆ ಇದ್ದೇ ಇರುತ್ತದೆ. ಅದನ್ನು ನಾವು ಸರಿ ಮಾಡಿಕೊಳ್ಳುತ್ತೇವೆ. ಎಲ್ಲರೂ ಒಟ್ಟಾಗಿದ್ದೇವೆ. ಬಿಜೆಪಿ–ಜೆಡಿಎಸ್ ಮೈತ್ರಿಯಲ್ಲಿ ಕುಮಾರಸ್ವಾಮಿ ಅವರು ಮತ್ತೆ ಮುಖ್ಯಮಂತ್ರಿಯಾಗಬೇಕು ಎಂಬುದು ನಮ್ಮೆಲ್ಲರ ಆಶಯವಾಗಿದೆ. ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ನಮ್ಮೆಲ್ಲರ ಆಶಾಕಿರಣ ನಿಖಿಲ್ ಕುಮಾರಸ್ವಾಮಿ, ನಾವೆಲ್ಲಾ ಒಟ್ಟಾಗಿ ಪಕ್ಷವನ್ನು ಬಲಪಡಿಸೋಣ ಎಂದರು.



ಮೈಸೂರಿನ ಸಾ.ರಾ.ಕನ್ವೆನ್ಷನಲ್ ಹಾಲ್ ಆವರಣದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ನಗರ ಮತ್ತು ಗ್ರಾಮಾಂತರ ಜೆಡಿಎಸ್ ಮುಖಂಡರು ಹಾಗೂ ಪ್ರಮುಖರ ಸಭೆಯಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿದರು. ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ವಿವೇಕಾನಂದ, ಮಾಜಿ ಶಾಸಕರಾದ ಚಿಕ್ಕಣ್ಣ, ಕೆ.ಮಹದೇವು, ಅಶ್ವಿನ್‌ಕುಮಾರ್ ಮತ್ತಿತರರಿದ್ದರು.


ಸಹಕಾರ ಕ್ಷೇತ್ರಕ್ಕೆ ಅಪಾಯ: ಉಪಚುನಾವಣೆಗಳನ್ನು ಕಾಂಗ್ರೆಸ್ ಗೆದ್ದಿದ್ದು ಹೇಗೆ ಎನ್ನುವುದು ಜನರಿಗೆ ಗೊತ್ತಿದೆ. ಸರ್ಕಾರದ ಹಣದಲ್ಲಿ ಚುನಾವಣೆ ನಡೆಸುತ್ತಿದ್ದಾರೆ. ಐದು ವರ್ಷಗಳ ಹಿಂದೆ ಮೈಸೂರಿನ ಡಿಸಿಸಿ ಬ್ಯಾಂಕ್‌ನಲ್ಲಿ ನಡೆದಿದ್ದ ಅವ್ಯವಹಾರ ಮರುಕಳಿಸುತ್ತಿದೆ. ವರ್ಷದಿಂದ ಚುನಾವಣೆ ಮಾಡಿಲ್ಲ. ಹುಣಸೂರಿನ ಎರಡು ಸಹಕಾರ ಸಂಘಗಳಲ್ಲಿ ಸುಮಾರು 5 ಕೋಟಿ ಹಣವಿಲ್ಲ. ಆ ಹಣದಲ್ಲೇ ಸಹಕಾರ ಸಂಘಗಳ ಚುನಾವಣೆ ನಡೆಸುತ್ತಾರೆ. ಜೆಡಿಎಸ್ ಹಾಗೂ ಬಿಜೆಪಿಯವರು ಚುನಾವಣೆಯಲ್ಲಿ ಸ್ಪರ್ಧಿಸಲೇಬಾರದು ಎನ್ನುವಂತಹ ಸನ್ನಿವೇಶ ಸೃಷ್ಟಿಸಲಾಗುತ್ತಿದೆ. ಗ್ಯಾರಂಟಿ ಕಾರ್ಯಕ್ರಮದಡಿ 2 ಸಾವಿರ ಹಣ ನೀಡುವುದಾಗಿ ಹೇಳುತ್ತಾರೆ. ಆದರೆ ಕುಮಾರಸ್ವಾಮಿಯವರು ರೈತರ ಸಾಲಮನ್ನಾ ಮಾಡಿದಾಗ ಒಂದೊಂದು ಕುಟುಂಬಕ್ಕೂ ಮೂರು ಲಕ್ಷದವರೆಗೆ ಉಳಿತಾಯವಾಯಿತು. ತಂಬಾಕು ಬೆಳೆಗಾರರ ಸಮಸ್ಯೆಯನ್ನು ಪರಿಹರಿಸಿದರು. ಕುಮಾರಸ್ವಾಮಿ ಅವರ ಜನಪರ ಕಾರ್ಯಗಳನ್ನು ಜನರಿಗೆ ತಿಳಿಸುವ ಮೂಲಕ ಮುಂದಿನ ಚುನಾವಣೆಗೆ ಸಿದ್ಧರಾಗಬೇಕಿದೆ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ರಾಜ್ಯದಲ್ಲಿ ಲೂಟಿ: ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮಾತನಾಡಿ, ಬಾಕಿ ಇದ್ದ ನಾಲ್ಕೈದು ತಿಂಗಳ ಗೃಹಲಕ್ಷ್ಮೀ ಹಣವನ್ನು ಚನ್ನಪಟ್ಟಣ ಉಪಚುನಾವಣೆ ಹಿಂದಿನ ದಿನ ಒಟ್ಟಿಗೆ ಬಿಡುಗಡೆ ಮಾಡಿದರು. ಐದಾರು ತಿಂಗಳ ಹಾಲಿನ ಪ್ರೋತ್ಸಾಹ ಧನವನ್ನೂ ಒಟ್ಟಿಗೇ ಸಂದಾಯ ಮಾಡಿ, ವಾಮಮಾರ್ಗದಲ್ಲಿ ಚುನಾವಣೆ ಗೆದ್ದರು. ಕುಮಾರಸ್ವಾಮಿ ಅವರು ಎರಡು ಬಾರಿ ಸಿಎಂ ಆದಾಗಲೂ ರೈತರ ಸಾಲ ಮನ್ನಾ ಮಾಡಿದರು. ಲಾಟರಿ, ಸಾರಾಯಿ ನಿಷೇದ ಮಾಡಿದರು. ಆದರೆ ಈಗಿನ ಕಾಂಗ್ರೆಸ್ ಸರ್ಕಾರ ಮದ್ಯದ ಹಣದಲ್ಲೇ ಆಡಳಿತ ನಡೆಸುತ್ತಿದೆ. ಇದರಿಂದ ಕುಟುಂಬಗಳು ಬೀದಿಪಾಲಾಗುತ್ತಿವೆ. ಉಚಿತ ಯೋಜನೆಗಳಿಗಾಗಿ ಒಂದೆಡೆ ಬೆಲೆ ಏರಿಕೆ ಮತ್ತೊಂದೆಡೆ ಲೂಟಿ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಶಿಕ್ಷಕರಿಗೆ ತೊಂದರೆ: ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಬೇಕು. ಗ್ಯಾರಂಟಿ ನೀಡಿ ರಾಜ್ಯದಲ್ಲಿ ಸಮಸ್ಯೆಗಳನ್ನು ಸೃಷ್ಟಿಸಿದ್ದಾರೆ. ಬಸ್‌ಗಳಲ್ಲಿ ಶಾಲೆಗೆ ಹೋಗಿ ಬರುವ ಶಿಕ್ಷಕರು ಮೂರ್‍ನಾಲ್ಕು ಗಂಟೆ ನಿಂತೇ ಪ್ರಯಾಣಿಸಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. 65 ಸಾವಿರ ಶಿಕ್ಷಕರ ಹುದ್ದೆ ಖಾಲಿ ಇದ್ದರೂ ನೇಮಕಾತಿ ನಡೆಸುತ್ತಿಲ್ಲ. ಅತಿಥಿ ಶಿಕ್ಷಕರಿಗೆ ಬರೀ 12 ಸಾವಿರ ವೇತನ ನೀಡುತ್ತಾರೆ. ಅದೂ ಏಳೆಂಟು ತಿಂಗಳಿಗೊಮ್ಮೆ ಕೊಡುತ್ತಿದ್ದಾರೆ. ಸರ್ಕಾರ ಹಗಲು ದರೋಡೆಯಲ್ಲಿ ಮುಳುಗಿದೆ ಎಂದರು.

ಮಾಜಿ ಶಾಸಕರಾದ ಕೆ.ಮಹದೇವು, ಅಶ್ವಿನ್ ಕುಮಾರ್, ನಗರ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಪ್ರೇಮಾ ಶಂಕರೇಗೌಡ ಮಾತನಾಡಿದರು.

2025ರ ಕ್ಯಾಲೆಂಡರ್ ಬಿಡುಗಡೆ



ಮೈಸೂರು ವಕೀಲರ ವಿವಿಧೋದ್ದೇಶ ಸಹಕಾರ ಸಂಘದ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಬಿಡುಗಡೆ ಮಾಡಲಾಯಿತು. ಈ ವೇಳೆ ವಿವಿಧೋದ್ದೇಶ ಸಹಕಾರ ಸಂಘದ ಅಧ್ಯಕ್ಷ ಬಿ.ಎಸ್.ಚಂದ್ರಶೇಖರ್, ಉಪಾಧ್ಯಕ್ಷ ಸಿ.ಚನ್ನನಾಯಕ, ನಿರ್ದೇಶಕರಾದ ಕೆ.ಎಚ್.ರಮೇಶ್, ರಘು, ಶ್ರೀಮತಿ ಎಂ.ನಾಗರತ್ನ, ಮೈಸೂರು ವಕೀಲರ ಸಂಘದ ಮಾಜಿ ಕಾರ್ಯದರ್ಶಿ ಡಾ.ಬಿ.ಶಿವಣ್ಣ, ಹಿರಿಯ ವಕೀಲರಾದ ಪಿ.ಎಸ್.ನಾಗೇಂದ್ರ, ಎಚ್.ಡಿ.ಭಗವಾನ್, ಅನಿಲ್‌ಕುಮಾರ್, ಜೆ.ಸುರೇಶ್ ಇನ್ನಿತರರು ಉಪಸ್ಥಿತರಿದ್ದರು.

ಜ.8ರಂದು ಸಾರ್ವಜನಿಕ ಸಮಾಲೋಚನಾ ಸಭೆ

ಮೈಸೂರು,ಜ.4–ಹೂಟಗಳ್ಳಿ ನಗರಸಭಾ ಕಾರ್ಯಾಲಯದ ವತಿಯಿಂದ 2025–26ನೇ ಸಾಲಿನ ಆಯವ್ಯಯ ತಯಾರಿಸಲು ನಗರಸಭಾ ವ್ಯಾಪ್ತಿಯ ಅಭಿವೃದ್ಧಿ ದೃಷ್ಟಿಯಿಂದ ಸದರಿ ಆಯವ್ಯಯ ಬಗ್ಗೆ ತಮ್ಮ ಅಭಿಪ್ರಾಯ ಮತ್ತು ಸಲಹೆಗಳನ್ನು ಪಡೆಯಲು ಜ.8ರಂದು ಮಧ್ಯಾಹ್ನ 3 ಗಂಟೆಗೆ ನಗರಸಭೆಯಲ್ಲಿ ಜಿಲ್ಲಾಧಿಕಾರಿ, ನಗರಸಭೆ ಆಡಳಿತಾಧಿಕಾರಿ ಜಿ.ಲಕ್ಷ್ಮಿ ಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ಮೊದಲನೇ ಸುತ್ತಿನ ಸಾರ್ವಜನಿಕ ಸಮಾಲೋಚನಾ ಸಭೆ ಹಮ್ಮಿಕೊಳ್ಳಲಾಗಿದೆ.

ಲಿಂಗಾಂಬುದಿ ಸಸ್ಯ ಶಾಸ್ತ್ರೀಯ ತೋಟಕ್ಕೆ ವಿಶೇಷ ದೃಷ್ಟಿ ವಿಕಲಚೇತನ ಮಕ್ಕಳ ಭೇಟಿ

ಮೈಸೂರು,ಜ.4– ಶ್ರೀ ರಂಗರಾವ್ ಸ್ಮಾರಕ ವಿಶೇಷ ದೃಷ್ಟಿ ವಿಕಲಚೇತನ ಶಾಲೆಯ 8ರಿಂದ 10 ನೇ ತರಗತಿಯ 40 ವಿದ್ಯಾರ್ಥಿನಿಯರು ಹಾಗೂ ಶಿಕ್ಷಕರು ಮೈಸೂರಿನಲ್ಲಿ ತೋಟಗಾರಿಕೆ ಇಲಾಖೆ ಅಭಿವೃದ್ಧಿಪಡಿಸಿದ ಲಿಂಗಾಂಬುದಿ ಸಸ್ಯ ಶಾಸ್ತ್ರೀಯ ತೋಟಕ್ಕೆ ಭೇಟಿ ನೀಡಿದ್ದರು.

ನಂತರ ಮಕ್ಕಳು ತೆಂಗು ಸಸಿಯನ್ನು ನೆಟ್ಟು, ನೀರುಣಿಸಿ ಆನಂದಿಸಿದರು. ಮಕ್ಕಳು ದೃಷ್ಟಿ ಹೀನತೆಯಿದ್ದರೂ ಕೂಡ ಸಸ್ಯ ಪ್ರಭೇದಗಳು, ಹೂಗಳು ಹಾಗೂ ಮರ–ಗಿಡಗಳನ್ನು ಸ್ಪರ್ಶಿಸಿ, ಸುಗಂಧವನ್ನು ಆಸ್ವಾದಿಸಿದರು. ಅನೇಕ ಸಸ್ಯ ಪ್ರದೇಶಗಳ ಬ್ಲಾಕ್‌ಗಳಾದ ರೋಸ್ ಗಾರ್ಡನ್, ಚಿಟ್ಟೆ ಪಾರ್ಕ್ ಹಾಗೂ ಟೋಪಿಯಂ ಪಾರ್ಕಿಗೂ ಭೇಟಿ ನೀಡಿ, ಆನಂದಿಸಿದರು. ಈ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆ ವಿಭಾಗೀಯ ಜಂಟಿ ನಿರ್ದೇಶಕ ಹೆಚ್.ಎಂ. ನಾಗರಾಜ, ತೋಟಗಾರಿಕೆ ಉಪನಿರ್ದೇಶಕ ಮಂಜುನಾಥ್ ಅಂಗಡಿ, ಎ.ಡಿ.ಹೆಚ್‌ಗಳಾದ ಹೆಚ್.ನವೀನ್‌ಕುಮಾರ್ ಹಾಗೂ ಮಂಜುನಾಥ್ ಉಪಸ್ಥಿತರಿದ್ದರು.



ಶ್ರೀ ರಂಗರಾವ್ ಸ್ಮಾರಕ ವಿಶೇಷ ದೃಷ್ಟಿ ವಿಕಲಚೇತನ ಶಾಲೆಯ ವಿದ್ಯಾರ್ಥಿನಿಯರು ಹಾಗೂ ಶಿಕ್ಷಕರು ಲಿಂಗಾಂಬುದಿ ಸಸ್ಯ ಶಾಸ್ತ್ರೀಯ ತೋಟಕ್ಕೆ ಭೇಟಿ ನೀಡಿದ್ದರು.

ಇಂದು ವಿಶೇಷ ಉಪನ್ಯಾಸ

ಮೈಸೂರು, ಜ.4–ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಸಂಸ್ಥೆ ತನ್ನ ವಾರ್ಷಿಕ ಕಾರ್ಯಕ್ರಮಗಳ ಅಡಿಯಲ್ಲಿ ಜ.5ರಂದು ಸಂಜೆ 6 ಗಂಟೆಗೆ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕಗ್ಗದ ಭಟ್ಟರು ಖ್ಯಾತಿಗೆ ಭಾಜನರಾಗಿರುವ ಬೆಂಗಳೂರಿನ ಪ್ರೊ.ಎಚ್.ಎಸ್.ಲಕ್ಷ್ಮೀನಾರಾಯಣ ಭಟ್ಟ ಅವರಿಂದ ಡಾ.ಡಿವಿಜಿ ವಿರಚಿತ ಮಂಕುತಿಮ್ಮನ ಕಗ್ಗ ಮುಕ್ತಕ ಕೃತಿ ಆಧಾರಿತ ಜೀವನದಿ ವಿಷಯವಾಗಿ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಕಾಡೆಮಿ ಅಧ್ಯಕ್ಷ ಡಾ.ಎಚ್.ವಿ.ನಾಗರಾಜರಾವ್ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ತಂದೆಯನ್ನೇ ಹತ್ಯೆಗೈದು ಹೃದಯಾಘಾತದ ಕತೆಕಟ್ಟಿದ್ದ ಮಗ ಅರೆಸ್ಟ್

ಹಾಸನ: ತಂದೆಯನ್ನೇ ಹತ್ಯೆಗೈದು ಹೃದಯಾಘಾತ ಎಂದು ಬಿಂಬಿಸಿದ್ದ ಆರೋಪಿಯನ್ನು ಪೊಲೀಸರು ಸಕಲೇಶಪುರದ ಲಿಂಗಾಪುರ ಗ್ರಾಮದಲ್ಲಿ ಬಂಧಿಸಿದ್ದಾರೆ.

ಬಂಧಿತ ಆರೋಪಿ ದಿನೇಶ್(34) ಎಂದು ಗುರುತಿಸಿದ್ದು, ತನ್ನ ತಂದೆ ಶಶಿಧರ್(58)ನ್ನು ಹತ್ಯೆ ಮಾಡಿದ್ದ. ಆರೋಪಿ ಕಂಠಪೂರ್ತಿ ಕುಡಿದು ಬಂದು ತಂದೆ ಜೊತೆ ಜಗಳವಾಡಿದ್ದ. ಬಳಿಕ ತಂದೆಗೆ ಕಾಲಿನಿಂದ ಒದ್ದಿದ್ದ. ಈ ವೇಳೆ ಶಶಿಧರ್ ಕುಸಿದು ಬಿದ್ದಿದ್ದರು. ಇದನ್ನು ಕಂಡು ದಿನೇಶ್ ತಾಯಿ ಗಾಬರಿಗೊಂಡು ಸಹೋದರನ ಮನೆಗೆ ತೆರಳಿದ್ದರು. ನಂತರ ದಿನೇಶ್, ತಂದೆಗೆ ಹೃದಯಾಘಾತವಾಗಿದೆ ಎಂದು ಅರೇಹಳ್ಳಿ ಆಸ್ಪತ್ರೆಗೆ ದಾಖಲಿಸಿದ್ದ.

ಆಸ್ಪತ್ರೆಯಲ್ಲಿ ಶಶಿಧರ್ ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದ್ದರು. ಬಳಿಕ ಮೃತದೇಹವನ್ನು ಅಂತ್ಯ ಸಂಸ್ಕಾರಕ್ಕೆ ತಂದಿದ್ದಾಗ ತಂದೆ ಜೊತೆ ಜಗಳವಾಡುವುದನ್ನು ನೋಡಿದ್ದ ಗ್ರಾಮಸ್ಥರು ಸಾವಿನ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದರು. ಬಳಿಕ ದಿನೇಶ್ ವಿರುದ್ಧ ಆತನ ತಾಯಿ ಅರೇಹಳ್ಳಿ ಪೊಲೀಸರಿಗೆ ದೂರು ನೀಡಿದ್ದರು. ಈ ಸಂಬಂಧ ಅರೇಹಳ್ಳಿ ಪೊಲೀಸರು ಆರೋಪಿಯನ್ನು ಹೆಚ್ಚಿನ ವಿಚಾರಣೆಗೆ ಒಳಪಡಿಸಿದ್ದಾರೆ.

ಗಂಗೂಲಿ ಪುತ್ರಿ ಸನಾ ಪ್ರಯಾಣಿಸುತ್ತಿದ್ದ ಕಾರಿಗೆ ಬಸ್ ಡಿಕ್ಕಿ: ಚಾಲಕ ಪರಾರಿ

ಕೋಲ್ಕೊತ್ತಾ: ಟೀಂ ಇಂಡಿಯಾ ಮಾಜಿ ಕ್ರಿಕೆಟಿಗ ಮತ್ತು ಬಿಸಿಸಿಐ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ಪುತ್ರಿ ಸನಾ ಪ್ರಯಾಣಿಸುತ್ತಿದ್ದ ಕಾರಿಗೆ ಬಸ್ ಡಿಕ್ಕಿ ಹೊಡೆದ ಘಟನೆ ಕೋಲ್ಕತ್ತಾದ ಡೈಮಂಡ್ ಹಾರ್ಬರ್‌ನಲ್ಲಿ ನಡೆದಿದೆ.




ಕೋಲ್ಕತ್ತಾದಿಂದ ರಾಯಚಕ್‌ಗೆ ಹೋಗುತ್ತಿದ್ದಾಗ ಅಪಘಾತ ಸಂಭವಿಸಿದೆ. ಸನಾ ಪ್ರಯಾಣಿಸುತ್ತಿದ್ದ ಕಾರಿಗೆ ಹಿಂದಿನಿಂದ ಬಸ್ ಗುದ್ದಿಕೊಂಡು ಹೋಗಿದೆ. ಸನಾ ಅವರು ಕಾರು ಚಲಾಯಿಸುತ್ತಿರಲಿಲ್ಲ. ಬದಲಾಗಿ ಡ್ರೈವರ್ ಕಾರು ಚಲಾಯಿಸುತ್ತಿದ್ದರು. ಕೊನೆಗೆ ಕಾರಿನ ಡ್ರೈವರ್, ಬಸ್ ಚೇಸ್ ಮಾಡಿ ಬಸ್ ನಿಲ್ಲಿಸಿದ್ದಾನೆ.

ಬಳಿಕ ಸನಾ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ದುರ್ಘಟನೆಯಲ್ಲಿ ಸನಾ ಗಂಗೂಲಿ ಕಾರಿಗೆ ಹಾನಿಯಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಅವರಿಗೆ ಯಾವುದೇ ಗಾಯವಾಗಿಲ್ಲ. ಆದರೆ ಅಪಘಾತ ವಿರುದ್ಧ ಸನಾ ಗಂಗೂಲಿ ಕೇಸ್ ದಾಖಲಿಸಿಲ್ಲ. ಆದರೆ ಭಯಗೊಂಡ ಬಸ್ ಚಾಲಕ ಪರಾರಿಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿಧನ


ಗೋಕುಲಂನ ಶಂಕರ್



ಮೈಸೂರು, ಜ.4–ಮೈಸೂರಿನ ಗೋಕುಲಂ ನಿವಾಸಿ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ನಿವೃತ್ತ ಆಡಳಿತಾಧಿಕಾರಿ ಶಂಕರ್(82) ಅವರು ಜ.1ರಂದು ನಿಧನರಾದರು.

ಇವರ ನಿಧನಕ್ಕೆ ಆಯಿಶ್ ನಿವೃತ್ತ ಮುಖ್ಯ ಲೆಕ್ಕಾಧಿಕಾರಿ ಕೆ.ಪುರುಷೋತ್ತಮ್ ಸಂತಾಪ ಸೂಚಿಸಿದ್ದಾರೆ. ಸಂಸ್ಥೆಯ ಸಿಬ್ಬಂದಿಯ ಪಿಂಚಣಿ ಯೋಜನೆಗೆ ಶ್ರೀಯುತರೇ ಕಾರಣಕರ್ತರಾಗಿದ್ದು, ಪರಿಶಿಷ್ಟ ಜಾತಿ, ಹಾಗೂ ಪರಿಶಿಷ್ಟ ಪಂಗಡದ ಸಿಬ್ಬಂದಿ ರೋಸ್ಟರ್ ಪದ್ಧತಿ ಜಾರಿ ಸೇರಿದಂತೆ ನೌಕರರ ಹಿತರಕ್ಷಣೆಯ ಹಲವು ಯೋಜನೆಗಳನ್ನು ಜಾರಿಗೊಳಿಸುವಲ್ಲಿ ಇವರು ಯಶಸ್ವಿಯಾಗಿದ್ದರು.

ಪಿ.ಮಹದೇವು



ಮೈಸೂರು: ಮೈಸೂರಿನ ಪಡುವಾರಹಳ್ಳಿ ಎ.ಕೆ.ಕಾಲೋನಿಯ ಮರಿಯಮ್ಮ ಹಾಗೂ ಪುಟ್ಟಣ್ಣನವರ ಪುತ್ರ ಪಿ.ಮಹದೇವು(50) ನಿಧನರಾದರು.

ಇವರು ಪತ್ನಿ ಸರೋಜ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸಹಕಾರ ಜನಹಿತ ಸಂಘದ ನಿರ್ದೇಶಕ ಸುರೇಶ್ ಕೃಷ್ಣ, ಪತ್ರಿಕಾ ವಿತರಕ ಶಂಕರ್ ಸೇರಿದಂತೆ ಹಲವು ಮುಖಂಡರು ಮಹದೇವು ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.01.2025 ಭಾನುವಾರ, ಮಳೆ ನಕ್ಷತ್ರ: ಪೂಷಾ, 29.12.2024 ರಿಂದ 16.01.2025 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಷಷ್ಠಿ, ನಕ್ಷತ್ರ: ಪೂಭಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ಕುಂಭಾಭಿಷೇಕ ಪೂಜಾ ಮಹೋತ್ಸವ, ಬೆಳಗ್ಗೆಯಿಂದ ಮಹತೋಬಾರ ಶ್ರೀ ಧರ್ಮ ಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಘವೇಂದ್ರನಗರ.

■ **ಕಲ್ಪವೃಕ್ಷ ಸಾಂಸ್ಕೃತಿಕ ಪರಿಷತ್ :** ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಪುಟ್ಟರಾಜ ಗವಾಯಿ ಮೈದಾನ, ಜೆ.ಪಿ.ನಗರ, ಬೆಳಗ್ಗೆ 9ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಶ್ರೀ ಕನಕದಾಸ ನೌಕರರ ಸಂಘ :** ಶ್ರೀ ಕನಕದಾಸರ 537ನೇ ಜಯಂತ್ಯುತ್ಸವ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಶಾಸಕ ಯತೀಂದ್ರ, ಉಪಸ್ಥಿತರು : ಶಾಸಕರಾದ ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಕೆ. ಮರೀಗೌಡ, ಸ್ಥಳ: ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ, ಕುವೆಂಪುನಗರ, ಬೆಳಗ್ಗೆ 10ಕ್ಕೆ.

■ **ಶ್ರೀ ಚೌಡೇಶ್ವರಿ ಸಾಂಸ್ಕೃತಿಕ ವೇದಿಕೆ :** ರಂಗ ಸೌರಭ ಪುಸ್ತಕ ಬಿಡುಗಡೆ ಸಮಾರಂಭ, ಕೆರೆಹಳ್ಳಿ ಮಹದೇವಸ್ವಾಮಿ, ಕೆರೆಹಳ್ಳಿ ನಂಜುಂಡಸ್ವಾಮಿ ಅವರಿಗೆ ಗುರುವಂದನೆ ಕಾರ್ಯಕ್ರಮ, ಸ್ಥಳ: ಪುರಭವನ, ಬೆಳಗ್ಗೆ 10ಕ್ಕೆ.

■ **ರಂಗಾಯಣ :** ಆದಿವಾಸಿ ಅಲೆಮಾರಿ ಕಲಾವಿದರಾದ ಹೆಳವರ ಮಲ್ಲಯ್ಯ ಮತ್ತು ಸಂಗಡಿಗರೊಂದಿಗೆ ತಿಂಗಳ ಮಾತುಕತೆ ಕಾರ್ಯಕ್ರಮ, ಅತಿಥಿಗಳು : ಕಥೆಗಾರ ಅಬ್ದುಲ್ ರಶೀದ್, ಸಾಹಿತಿ ಬಂಜಗೆರೆ ಜಯಪ್ರಕಾಶ್, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ಉಪ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಸ್ಥಳ: ಭೂಮಿಗೀತ ರಂಗ ಮಂದಿರ, ಬೆಳಗ್ಗೆ 10.30ಕ್ಕೆ.

■ **ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ :** ಸವಿಗನ್ನಡ ಪತ್ರಿಕೆ ರಜತ ಮಹೋತ್ಸವ ಮತ್ತು ಹೊಯ್ಸಳ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ನಾಡೋಜ ಡಾ. ಭಾಷ್ಯಂ ಸ್ವಾಮೀಜಿ, ಉದ್ಘಾಟನೆ : ಡಾ. ತುಳಸಿ ರಾಮಚಂದ್ರ, ಅಧ್ಯಕ್ಷತೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಾ. ಯು.ಜಿ. ಶೆಣೈ, ಡಾ. ರಘುರಾಂ ರಾಜಪೇಯಿ, ಸ್ಥಳ: ಗಾನಭಾರತೀ ವೀಣೆ ಶೇಷಣ್ಣ ಭವನ, ಬೆಳಗ್ಗೆ 10.30ಕ್ಕೆ.

■ **ಬಸವ ಸಮಿತಿ :** ಶರಣ ಸಂಗಮ, ಸಾನ್ನಿಧ್ಯ: ಶ್ರೀ ಶಿವಪ್ರಭು ಸ್ವಾಮೀಜಿ, ಅಧ್ಯಕ್ಷತೆ : ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಡಾ. ಪಿ.ಎ. ನಾಗರಾಜ ಅವರಿಂದ ವಚನ ಸಾಹಿತ್ಯದಲ್ಲಿ ಶರಣ ಪರಂಪರೆಯ ಸತ್ವ ಮತ್ತು ತತ್ವ ಕುರಿತು ಉಪನ್ಯಾಸ, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ಜನಸ್ಪಂದನ ಟ್ರಸ್ಟ್ :** ಕುವೆಂಪು ಜಯಂತ್ಯೋತ್ಸವ, ಪ್ರಾಸ್ತಾವಿಕ ನುಡಿ : ಟ್ರಸ್ಟ್ ಅಧ್ಯಕ್ಷ ಎಂ.ಕೆ. ಸೋಮಶೇಖರ್, ಪುಷ್ಪಾರ್ಚನೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ : ಸಾಹಿತಿ ಡಾ. ಬಂಜಗೆರೆ ಜಯಪ್ರಕಾಶ್, ಉಪಸ್ಥಿತರು : ಪ್ರೊ.ಎನ್. ಬೋರಲಿಂಗಯ್ಯ, ಪ್ರೊ. ಕಾಳೇಗೌಡ ನಾಗವಾರ, ಜನಾರ್ಧನ್, ಎಚ್.ಎ. ವೆಂಕಟೇಶ್, ಕಮಲ್ ಗೋಪಿನಾಥ್, ಡಾ. ಅಮ್ಮಸಂದ್ರ ಸುರೇಶ್, ಪ್ರೊ. ಭದ್ರಪ್ಪ ಹೆನ್ಲಿ, ಎಸ್.ಜಿ. ರಮೇಶ್, ಆರ್. ಸ್ವಾಮಿ ಆನಂದ್, ಈ. ಧನಂಜಯ ಎಲಿಯೂರು, ಡಾ. ಕೃಷ್ಣ ಜನಮನ, ಸ್ಥಳ: ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ, ಕುವೆಂಪುನಗರ, ಸಂಜೆ 4ಕ್ಕೆ.

■ **ತಿಬ್ಬಾಸ್ ಗ್ರೂಪ್ ಮಾಡೆಲ್ಲಿಂಗ್ ಅಕಾಡೆಮಿ :** ಫ್ಯಾಷನ್ ಶೋ, ಮುಖ್ಯ ಅತಿಥಿಗಳು : ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಸಿಇಓ ರುದ್ರೇಶ್, ರಘುರಾಜ್ ಅರಸ್, ಸ್ಥಳ: ಪಿ.ಕಾಳಿಂಗರಾವ್ ಗಾನ ಮಂಟಪ, ಸಂಜೆ 5 ರಿಂದ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ಶ್ರೀ ಮದ್ಭಾಗವತ ಸಪ್ತಾಹ, ವಿದುಷಿ ಡಾ.ಜ್ಯೋತಿ ಶಂಕರ್ ಅವರಿಂದ ರುಕ್ಮಿಣಿ ವಿವಾಹ ಕುರಿತು ಪ್ರವಚನ, ಕುವೆಂಪುನಗರದ ಶಾರದಾ ಕಲಾ ಕೇಂದ್ರದಿಂದ ಹಾಡುಗಾರಿಕೆ, ವಿದ್ವಾನ್ ಡಾ. ಎಚ್.ಎಸ್. ತಾಂಡವಮೂರ್ತಿ–ಪಿಟೀಲು, ಸುಮುಖ–ಮೃದಂಗ, ಸ್ಥಳ: ರಜತ ಸಭಾ ಮಂಟಪ, ಗಣಪತಿ ದೇವಸ್ಥಾನ, ಐ–ಬ್ಲಾಕ್, ರಾಮಕೃಷ್ಣನಗರ, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಮುಕ್ತಿದಾನಂದ ಅವರಿಂದ ದೈವ ಪ್ರಜ್ಞಾ ಜಪ ಕರ್ಮ ಯಜ್ಞ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮೈಸೂರು ಮಹಾರಾಣಿ ಕಲಾ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿ, ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ವಿದ್ವನ್ಮಣಿ, ದರ್ಶನ ವಾರಿಧಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಂಜೆ 6.30ಕ್ಕೆ

■ **ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಟ್ರಸ್ಟ್ :** ಡಾ. ಡಿ.ವಿ. ಗುಂಡಪ್ಪ ವಿರಚಿತ ಮುಕ್ತಕ ಕೃತಿ ಮಂಕುತಿಮ್ಮನ ಕಗ್ಗ ಆಧಾರಿತ ಉಪನ್ಯಾಸ, ವಿಷಯ : ಜೀವನದಿ, ಉಪನ್ಯಾಸಕರು : ಪ್ರೊ. ಎಚ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಅಧ್ಯಕ್ಷತೆ : ವಿಶ್ರಾಂತ ಸಂಶೋಧಕ ಡಾ. ಎಚ್.ವಿ. ನಾಗರಾಜರಾವ್, ಸ್ಥಳ: ರೋಟರಿ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಮುದ್ದುರಾಮ ಪ್ರತಿಷ್ಠಾನ :** ಶ್ರೀ ಸಿದ್ದೇಶ್ವರ ಸ್ಮಾರಕ ಉಪನ್ಯಾಸ, ನಿವೃತ್ತ ಮುಖ್ಯ ಅಭಿಯಂತರ ಶಂಕರ ದೇವನೂರು ಅವರಿಂದ ಪ್ರತಿಸ್ಪಂದನ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಸಂಜೆ 6ಕ್ಕೆ.

■ **ಕರ್ನಾಟಕ ಸೇನಾ ಪಡೆ :** ರಸ ಮಂಜರಿ ಕಾರ್ಯಕ್ರಮ, ಸಾನ್ನಿಧ್ಯ : ಪ್ರೊ. ಭಾಷ್ಯಂ ಸ್ವಾಮೀಜಿ, ಉಪಸ್ಥಿತರು : ಅರ್ಜುನ್ ಅವಧೂತ ಗುರೂಜಿ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಉಪಸ್ಥಿತರು : ಎಂಎಲ್‌ಸಿ ಕೆ. ವಿವೇಕಾನಂದ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ವಿವೇಕಾನಂದ ವೃತ್ತ, ವಿವೇಕಾನಂದನಗರ, ಸಂಜೆ 7.30ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ (ಬೆಂಗಳೂರು), ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ :** ಬೆಂಗಳೂರು ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್. ಶ್ರೀಧರನ್ ಅವರಿಂದ ತಿರುಪ್ಪಾವೈ ಕಾಲಕ್ಷೇಪ, ಸ್ಥಳ: ಸನಾತನ ಸಭಾ, ಜಯನಗರ, ಸಂಜೆ 6.15 ರಿಂದ.


■ **ರಂಗಾಯಣ :** ರಂಗಾಯಣ ರೆಪರ್ಟರಿ ತಂಡದಿಂದ ಮೈ ಫ್ಯಾಮಿಲಿ ನಾಟಕ ಪ್ರದರ್ಶನ, ನಿರ್ದೇಶನ : ಗಣೇಶ್ ಮಂದಾರ್ತಿ, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ

■ **ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ :** ವಿದ್ವಾನ್ ರಾ. ಗಣಪತಿ ಭಟ್ ಅವರಿಂದ ಯಾವುದು ಧನ ಕುರಿತು ಪ್ರವಚನ, ಸ್ಥಳ : ಅಷ್ಟಾಂಗ ಯೋಗ ವಿಜ್ಞಾನ ಮಂದಿರಂ, ಲಕ್ಷ್ಮೀಪುರಂ, ಸಂಜೆ 6.45ಕ್ಕೆ.

■ **ಅಭಿಯಂತರರು :** ಸಾಹಿತಿ ಅನಿಕೇತ ಬೊಲೆ ರಚಿಸಿರುವ ಪ್ರಕಾಶ ಪರ್ವತೀಕ ಅವರು ಅನುವಾದ ಮಾಡಿರುವ ಕಳಸೂತ್ರ ನಾಟಕ ಪ್ರದರ್ಶನ, ನಿರ್ದೇಶನ : ರಂಗ ನಿರ್ದೇಶಕ ಸುರೇಶ್ ಬಾಬು, ಸ್ಥಳ: ಕಿರು ರಂಗಮಂದಿರ, ಸಂಜೆ 7ಕ್ಕೆ.

■ **ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ :** ಪೇಜಾವರ ಶ್ರೀ ವಿಶ್ವೇಶತೀರ್ಥ ಶ್ರೀಪಾದರ ಸಂಸ್ಮರಣೆ ಪ್ರಯುಕ್ತ ಹಣ್ಣು, ಹಂಪಲು, ಓದುವ ಸಾಮಾಗ್ರಿ ವಿತರಣೆ, ಸ್ಥಳ: ಶಾರದಾನೆಲೆ ವಿದ್ಯಾರ್ಥಿನಿಯರ ನಿಲಯ, ಕೃಷ್ಣಮೂರ್ತಿಪುರಂ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ ಗಾಯನ–ಎಂ. ರಾಘವೇಂದ್ರ , ಎಂ.ಎ. ಶೋಭಾ, ವ್ಯಾಖ್ಯಾನ –ಕೆ.ಎಲ್.ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕರುನಾಡ ಕಲ್ಪವೃಕ್ಷ– ಪ್ರಾಯೋಜಿತ ಕಾರ್ಯಕ್ರಮ, ತೆಂಗು ಅಭಿವೃದ್ಧಿ ಮಂಡಳಿಯ ವಿವಿಧ ಯೋಜನೆಗಳು ಹಾಗೂ ಧ್ಯೇಯೋದ್ದೇಶಗಳು ಕುರಿತು ಭಾರತ ಸರ್ಕಾರ ತೆಂಗು ಅಭಿವೃದ್ಧಿ ಮಂಡಳಿಯ ಮುಖ್ಯ ತೆಂಗು ಅಭಿವೃದ್ಧಿ ಅಧಿಕಾರಿ ಡಾ. ಬಿ. ಹನುಮಂತೇಗೌಡ ಅವರೊಂದಿಗೆ ಸಂದರ್ಶನ, ಸಂದರ್ಶಕರು – ಕೃಷ್ಣಪ್ಪ. ಕೆ.ವಿ., 9.40 ನಮ್ಮ ಆರೋಗ್ಯ–'ಚಳಿಗಾಲದಲ್ಲಿ ಮಕ್ಕಳ ಆರೈಕೆ' ಕುರಿತು ಮೈಸೂರಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವಿಭಾಗೀಯ ಸಹನಿರ್ದೇಶಕರ ಕಛೇರಿಯಲ್ಲಿ ಉಪ ನಿರ್ದೇಶಕರಾಗಿರುವ ಡಾ. ಮಲ್ಲಿಕಾ. ಬಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH-TRISH and Balty boy-ನಾವು ಭಾರತೀಯರು 'ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ', 11.15 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ–ಪುಷ್ಪಾ. ವಿ. ಶಂಕರ್, 12.45 ಜನಪದ ಸಂಗೀತ–ರಾಜಮ್ಮ ಮತ್ತು ಸಂಗಡಿಗರಿಂದ ತಾಯಮ್ಮನ ಹಾಡು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಒಂದಾದ ಕೃಷಿ ಮೂಲಭೂತ ಸೌಕರ್ಯ ನಿಧಿ ಈ ವಿಷಯ ಕುರಿತು ಮಾಹಿತಿ ನೀಡುತ್ತಾರೆ ಹೆಚ್. ಐ. ಗೋವರ್ಧನ್, ಪ್ರಸ್ತುತಿ : ತಿಮ್ಮಪ್ಪ. ಹೆಚ್.ಗೌಡ, 1.20 ಭಾವಗೀತೆಗಳು– ಎ.ಜೆ.ದಿವ್ಯಾ, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಬೆಂಗಳೂರು ರಾತ್ರಿಯಲ್ಲಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.45 ಯಕ್ಷಗಾನ– ತಾಳಮದ್ದಲೆ, ಪ್ರಸಂಗ–ಪಾರಿಜಾತಾಪಹರಣ, ಪ್ರಸ್ತುತಿ– ಮಂಗಳೂರು ಊರ್ವದ ಯಕ್ಷಾರಾಧನ ಕಲಾ ಕೇಂದ್ರದ ಸದಸ್ಯರು, 4.45 ಚಿತ್ರಗೀತೆಗಳು, 6.51 ಕೃಷಿರಂಗ : ತೋರಣ ಹೂರಣ– ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಹರಿಕಥೆದಾಸ, ವೇಷಧಾರಿ ಜಂಗಮ ಮಹಂತೇಶ ಬಸವರಾಜ್ ಅವರೊಂದಿಗೆ ಸಂವಾದ. ಪ್ರಸ್ತುತಿ: ಅಬ್ದುಲ್ ರಶೀದ್, 9.15 ರಂಗಗೀತೆಗಳು– ಸ್ವಾಮಿಗೌಡ. ಬಿ.ಎಸ್., 9.30 ಸವಿನೆನಪು–ಹಳೆಯ ಕನ್ನಡ ಚಿತ್ರಗೀತೆಗಳು, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಪಂಡಿತ್. ಮನೋಜಿತ್ ಮಲ್ಲಿಕ್ – ಹಾಡುಗಾರಿಕೆ

ಮೈಸೂರು ಮಿತ್ರ
ಭಾನುವಾರ 5 ಜನವರಿ 2025

ಸರ್ಕಾರ ರಚಿಸುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ

ಒಂದನೇ ಪುಟದಿಂದ

ವಾತಾವರಣ ನಿರ್ಮಾಣ ಮಾಡಿಕೊಡಲಿದೆ. ಬಿಜೆಪಿ ಜೊತೆಗೂಡಿ ಐದು ವರ್ಷ ಸರ್ಕಾರ ನಡೆಸಿದರೆ ರಾಮರಾಜ್ಯ ಮಾದರಿ ಸಾಧ್ಯವಿದೆ. ಅದನ್ನು ಸಾಬೀತು ಮಾಡದಿದ್ದರೆ ನಾನು ರಾಜಕಾರಣದಲ್ಲೇ ಇರುವುದಿಲ್ಲ ಎಂದರು.

ನಿರ್ಭಯವಾಗಿ ಬೀದಿಗಿಳಿಯಿರಿ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಹಗಲು ದರೋಡೆ ನಡೆಸುತ್ತಿದೆ. ಹೀಗೆಯೇ ಮುಂದುವರಿದರೆ ಬಹಳ ಕಷ್ಟದ ದಿನಗಳನ್ನು ಎದುರಿಸಬೇಕಾಗುತ್ತದೆ. ಈ ಪರಿಸ್ಥಿತಿಯಲ್ಲಿ ರಾಜ್ಯ ಉಳಿಸುವ ಜವಾಬ್ದಾರಿ ಜೆಡಿಎಸ್ ಮೇಲಿದೆ. ಸತ್ಯಮೇವ ಜಯತೆ ಎಂದು ಹೇಳಿಕೊಂಡು ಸರ್ಕಾರ ಏನೆಲ್ಲಾ ಮಾಡುತ್ತಿದೆ ಎಂದು ತಿಳಿದಿದೆ. ಕೇಂದ್ರ ಸಚಿವನಾದ ನನ್ನ ಮೇಲೆಯೇ ಕೇಸ್ ಹಾಕಿದ್ದಾರೆ. ಆದರೆ ಜೆಡಿಎಸ್ ಕಾರ್ಯಕರ್ತರು ರಾಜ್ಯಕ್ಕಾಗಿ ಯಾವುದೇ ಭಯವಿಲ್ಲದೆ ಬೀದಿಗಿಳಿದು ಪಕ್ಷ ಸಂಘಟಿಸಬೇಕಿದೆ. ಚಾಮುಂಡೇಶ್ವರಿ ತಾಯಿಯ ಪುಣ್ಯಭೂಮಿಯಲ್ಲಿ ಸಂಕ್ರಾಂತಿ ದಿನವೇ ಸದಸ್ಯತ್ವ ನೋಂದಣಿ ಆರಂಭಿಸಿ, ನಾನೇ ಚಾಲನೆ ನೀಡುತ್ತೇನೆ. ತಿಂಗಳಲ್ಲಿ ಜಿಲ್ಲೆಯಲ್ಲಿ 1 ಲಕ್ಷ ಸದಸ್ಯತ್ವ ನೋಂದಣಿ ಮಾಡಿಸುವ ಮೂಲಕ ರಾಜ್ಯದಲ್ಲಿ 50 ಲಕ್ಷ ನೋಂದಣಿಗೆ ಪ್ರೇರಣೆ ನೀಡಿ. ನಿಮ್ಮ ಪರಿಶ್ರಮದ ಋಣವನ್ನು ಪ್ರಾಮಾಣಿಕವಾಗಿ ತೀರಿಸುತ್ತೇನೆ ಎಂದು ಉತ್ಸಾಹ ತುಂಬಿದರು.

ಜೆಡಿಎಸ್ ಜನರ ಪಕ್ಷ: ಜೆಡಿಎಸ್ ಯಾವುದೇ ವ್ಯಕ್ತಿ ಆಧಾರಿತ ಪಕ್ಷವಲ್ಲ. ಕಾರ್ಯಕರ್ತರು, ರೈತರು ಕಟ್ಟಿ ಬೆಳೆಸಿರುವ ಪಕ್ಷ ಎಲ್ಲ ಧರ್ಮ ಹಾಗೂ ಸಮುದಾಯಗಳಿಗೂ ವರಿಷ್ಠರಾದ ಹೆಚ್.ಡಿ.ದೇವೇಗೌಡರು ನಾಯಕತ್ವ ನೀಡಿದರು. ಪಕ್ಷೇತರ ಅಭ್ಯರ್ಥಿಯಾಗಿ ಮೊದಲಿಂದಲೂ ಬಾರಿ ಆಯ್ಕೆಯಾದ ದೇವೇಗೌಡರು, ಧರ್ಮಾತೀತ ಹಾಗೂ ಜಾತ್ಯಾತೀತವಾಗಿ ಹಲವು ನಾಯಕರನ್ನು ಬೆಳೆಸಿದ್ದಾರೆ. ಆದರೆ ಅದನ್ನು ಸ್ಮರಿಸುವ ಹೃದಯ ವೈಶಾಲ್ಯತೆ ಕೆಲವರಿಗಿಲ್ಲ. ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಈಗಿನ ನಾಯಕರು ಮಾತನಾಡುತ್ತಾರಷ್ಟೇ. ದೇವೇಗೌಡರು ಸಂವಿಧಾನದ ಆಶಯದಂತೆ ರಾಜಕಾರಣ ಮಾಡಿದ್ದಾರೆ. ನಾಯಕ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವಲ್ಲಿ ದೇವೆಗೌಡರ ಪಾತ್ರ ಪ್ರಧಾನವಾಗಿದೆ. ಮಂತ್ರಿ ಸ್ಥಾನ ಬೇಡ ಬದಲಿಗೆ ನಾಯಕ ಸಮಾಜವನ್ನು ಪರಿಶಿಷ್ಟ ಪ್ರವರ್ಗಕ್ಕೆ ಸೇರಿಸಿ ಎಂದು ಕೇಳಿದ್ದರು ಎಂದು ತಿಳಿಸಿದರು.

ಸರ್ಕಾರದಿಂದ ದರೋಡೆ: ರಾಜ್ಯದಲ್ಲಿರುವಂತಹ ಕೆಟ್ಟ ಸರ್ಕಾರ ಬೇರೆಲ್ಲೂ ಇಲ್ಲ. ಗ್ಯಾರಂಟಿಗಳಿಂದ ಏನು ಉದ್ಧಾರ ಮಾಡಿದ್ದಾರೆ. 2 ಸಾವಿರ ಹಣದಿಂದ ಸಂತೃಪ್ತಿ ಜೀವನ ಸಾಧ್ಯವೇ?. ಗ್ಯಾರಂಟಿ ನೆಪದಲ್ಲಿ ರಾಜ್ಯ ಸರ್ಕಾರ ಹಗಲು ದರೋಡೆ ನಡೆಸುತ್ತಿದೆ. ಮಧ್ಯರಾತ್ರಿ ಎಂದರೆ ಕಾಂಗ್ರೆಸ್‌ಗೆ ಬಹಳ ಇಷ್ಟ. ಆದ್ದರಿಂದಲೇ ಮಧ್ಯರಾತ್ರಿಯಿಂದಲೇ ಬಸ್ ಪ್ರಯಾಣ ದರವನ್ನೂ ಶೇ.15ರಷ್ಟು ಏರಿಕೆ ಮಾಡುತ್ತಿದೆ. ವಾಹನಗಳ ಇಂಧನದ ಸೆಸ್ ಜೊತೆಗೆ ಮದ್ಯದ ಬೆಲೆಯನ್ನೂ ಜಾಸ್ತಿ ಮಾಡಿದ್ದಾರೆ. ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ ಹೆಚ್ಚಿಸಿದ್ದಾರೆ. ಹಾಲಿನ ದರ ಹೆಚ್ಚಿಸುತ್ತಿದ್ದಾರೆ. ಹೀಗೆ ಹಗಲು ದರೋಡೆ ಮಾಡಿ ಗೃಹಿಣಿಯರಿಗೆ ಮಾಸಿಕ 2 ಸಾವಿರ ಅಲ್ಲ 5 ಸಾವಿರ ಕೊಡಬಹುದು. ಮುಸ್ಲಿಮರಿಗೂ ಅನ್ಯಾಯ ಮಾಡುತ್ತಿದೆ. ಮುಸ್ಲಿಂ ಗುತ್ತಿಗೆದಾರನೊಬ್ಬ ದಯಾ ಮರಣ ಕೋರಿ ಎಂದು ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರೆ. ವಾಲ್ಮೀಕಿ ನಿಗಮದ ಅಕ್ರಮ ಅಧಿಕಾರಿ ಚಂದ್ರಶೇಖರ್ ಆತ್ಮಹತ್ಯೆಯಿಂದ ಬಯಲಾಯಿತು. ಬಾಣಂತಿಯರ ಸರಣಿ ಸಾವು ಸಂಭವಿಸುತ್ತಿದೆ. ಸಿದ್ದರಾಮಯ್ಯನವರಿಗೆ ಕಿಂಚಿತ್ತಾದರೂ ದುಃಖ ಬೇಡವೇ? ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಸಭಿಕರೊಬ್ಬರ ಮನವಿ ಪತ್ರಕ್ಕೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ನಿರುದ್ಯೋಗ ಸಮಸ್ಯೆ ನಿವಾರಣೆ ಬಗ್ಗೆ ಚಿಂತನೆ ಇದೆ. ಆದರೆ ಅದಕ್ಕೆ ರಾಜ್ಯ ಸರ್ಕಾರದ ಸಹಕಾರವಿಲ್ಲ. ಆದರೆ ಯಾವ ಕಾರಣಕ್ಕೂ ರಾಜ್ಯವನ್ನು ಕಡೆಗಣಿಸುವ ಪ್ರಶ್ನೆಯೇ ಇಲ್ಲ ಎಂದು ತಿಳಿಸಿದರು.

ಸಭೆಯಲ್ಲಿ ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್, ಶಾಸಕ ಜಿ.ಡಿ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ವಿವೇಕಾನಂದ, ಮಾಜಿ ಶಾಸಕರಾದ ಕೆ.ಮಹದೇವು, ಚಿಕ್ಕಣ್ಣ, ಅಶ್ವಿನ್‌ಕುಮಾರ್, ಮುಖಂಡರಾದ ಕೆ.ಟಿ.ಚೆಲುವೇಗೌಡ, ಎಸ್‌ಬಿಎಂ ಮಂಜು, ಪ್ರೇಮಾಶಂಕರೇಗೌಡ, ರವಿಚಂದ್ರೇಗೌಡ, ಎಂ.ಜೆ.ರವಿಕುಮಾರ್, ಆರ್.ಲಿಂಗಪ್ಪ, ಭಾಗ್ಯವತಿ, ಅಶ್ವಿನಿ ಅನಂತು, ಶೋಭಾ, ಭಾಗ್ಯ ಮಾದೇಶ್, ಅಮಿತ್ ದೇವರಹಟ್ಟಿ, ಸವಿತಾ ಸುರೇಶ್, ಉಮಾಶಂಕರ್, ಬೋರೇಗೌಡ ಮತ್ತಿತರರ ಮುಖಂಡರು, ಪಕ್ಷದ ಪದಾಧಿಕಾರಿಗಳು ಭಾಗವಹಿಸಿದ್ದರು.

ಜಿ.ಟಿ.ದೇವೇಗೌಡರ ಮನಸ್ಸೆಲ್ಲಾ ಇಲ್ಲೇ ಇದೆ!

ಮೈಸೂರು: ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷರೂ ಆದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸಭೆಗೆ ಗೈರಾಗಿದ್ದರೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸಭೆಯಲ್ಲಿ ಪ್ರಸ್ತಾಪಿಸಿದರು.

ಜಿ.ಟಿ.ದೇವೇಗೌಡರು ಮಡುಕಿ ಕೆಲ ಮಾತುಗಳನ್ನಾಡಬಹುದು. ಅವರು ಇಲ್ಲಿಗೆ ಬರದಿದ್ದರೂ ಅವರ ಮನಸ್ಸೆಲ್ಲಾ ಇಲ್ಲೇ ಇದೆ. ಸ್ವಲ್ಪ ಭಿನ್ನಾಭಿಪ್ರಾಯವಿದೆ. ಆದರೆ ಅದು ಸರಿಪಡಿಸಿಕೊಳ್ಳಲಾಗದ ವಿಚಾರವೇನಲ್ಲ. ಎಲ್ಲವೂ ಸರಿಯಾಗುತ್ತದೆ. 2005ರಲ್ಲಿ ಕಲಾಮಂದಿರದಲ್ಲಿ ನಡೆದ ಸಭೆಯಲ್ಲಿ ಜಿ.ಟಿ.ದೇವೇಗೌಡರು ಮುಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಎಂದು ಹೇಳಿದರು. ಆದಾಗಿ ನಾಲ್ಕು ತಿಂಗಳಲ್ಲಿ ಸಿಎಂ ಆಗುವ ಯೋಗ ಬಂದಿತು ಎಂದು ಸ್ಮರಿಸಿಕೊಂಡರು.

ಕಾಂಗ್ರೆಸ್‌ನವರು ತಿರಸ್ಕರಿಸಿದ್ದ ಹೆಚ್.ಡಿ.ಕೋಟೆ ಚಿಕ್ಕಮಾದು ಅವರನ್ನು ಜೆಡಿಎಸ್‌ಗೆ ಕರೆತಂದು ಎಂಎಲ್‌ಸಿ, ಎಂಎಲ್ಎ ಆಗಿ, ಆ ಸಮುದಾಯಕ್ಕೆ ಶಕ್ತಿ ತುಂಬುವುದರಲ್ಲಿ ಜಿ.ಟಿ.ದೇವೇಗೌಡರು ಪ್ರಮುಖ ಪಾತ್ರ ವಹಿಸಿದ್ದರು. ವಿಧಾನಪರಿಷತ್ ಚುನಾವಣೆಯಲ್ಲಿ ವಿವೇಕಾನಂದ ಅವರ ಗೆಲುವಿಗೂ ಸಾ.ರಾ.ಮಹೇಶ್ ಹಾಗೂ ಜಿ.ಟಿ. ದೇವೇಗೌಡರೇ ಕಾರಣ. ಅದರಲ್ಲೂ ಜಿಟಿಡಿ ಹೆಚ್ಚು ಶ್ರಮ ವಹಿಸಿದರು ಎಂದು ಹೇಳಿದರು. ಹಾಗೆಯೇ ಮಾಜಿ ಸಚಿವ ಸಾ.ರಾ.ಮಹೇಶ್ ಹಾಗೂ ಎಂಎಲ್‌ಸಿ ವಿವೇಕಾನಂದ ಅವರೂ ತಮ್ಮ ಭಾಷಣದಲ್ಲಿ ಜಿ.ಟಿ.ದೇವೇಗೌಡರ ಹೆಸರೇಳಿದರು.

ಮೇಲ್ದರ್ಜೆಗೇರಿಸಲು ಭೂಮಿ ಕೊಡಿ

ಅಧಿಕಾರಿಗಳಿಗೆ ತಾಕೀತು ಮಾಡಿದರು. ಯೋಜನೆಗಳಿಗೆ ಅರ್ಹ ಫಲಾನುಭವಿಗಳನ್ನು ಗುರುತಿಸಬೇಕು. ಈ ಮೂಲಕ ಅರ್ಹರು ಆರ್ಥಿಕವಾಗಿ ಸದೃಢರಾಗಲು ಸಬ್ಸಿಡಿ ಸೌಲಭ್ಯ ನೀಡಬೇಕು. ಇದರಿಂದ ವ್ಯಾಪಾರ ವಹಿವಾಟು ವೃದ್ಧಿಗೊಂಡು ದೇಶದ ಜಿಡಿಪಿ ಕೂಡ ಏರಿಕೆ ಕಾಣಲಿದೆ ಎಂದು ಕುಮಾರಸ್ವಾಮಿ ಅಭಿಪ್ರಾಯಪಟ್ಟರು.

ಜಲ ಜೀವನ್ ಮಿಷನ್ ಯೋಜನೆಯಲ್ಲಿ ಪ್ರತಿ ಮನೆಗೆ ಗುಣಮಟ್ಟದ ಕುಡಿಯುವ ನೀರನ್ನು ಸಮರ್ಪಕವಾಗಿ ಪೂರೈಕೆ ಮಾಡಬೇಕು. ಅಮೃತ್ ಯೋಜನೆಯಲ್ಲಿ ನಗರ ಪ್ರದೇಶದಲ್ಲಿ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲು ಅನುದಾನ ಬಿಡುಗಡೆ ಮಾಡಿದ್ದು, ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಪ್ರಧಾನಮಂತ್ರಿ ಮುದ್ರಾ ಯೋಜನೆಯಲ್ಲಿ ಉತ್ಪಾದನೆ, ವ್ಯಾಪಾರ ಸೇವೆ ಮತ್ತು ಕೃಷಿಗೆ 10 ಲಕ್ಷದ ತನಕ ಸಾಲ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ ಮೈಸೂರು ಜಿಲ್ಲೆಗೆ ಈ ವರ್ಷ 2,902 ಕೋಟಿ ಸಾಲ ನೀಡಲಾಗಿದೆ ಎಂದು ಲೀಡ್ ಬ್ಯಾಂಕ್ ಅಧಿಕಾರಿಗಳು ಕುಮಾರಸ್ವಾಮಿ ಅವರಿಗೆ ಮಾಹಿತಿ ನೀಡಿದರು. ಪ್ರಧಾನಮಂತ್ರಿ ಪಸಲ್ ಭೀಮಾ ಯೋಜನೆಯಲ್ಲಿ ಬೆಳೆ ವಿಮೆ ಮಾಡಿಸಲು ರೈತರಿಗೆ ಉತ್ತೇಜನೆ ನೀಡಬೇಕು. ಈ ಕುರಿತಂತೆ ಮೈಸೂರಿನ ಹೆಚ್.ಡಿ.ಕೋಟೆ ತಾಲೂಕಿನ ರೈತರಿಗೆ ಮಾಹಿತಿ ನೀಡಬೇಕು ಎಂದು ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಜಾನುವಾರುಗಳಿಗೆ ಕಾಲುಬಾಯಿ ಹಾಗೂ ಚಪ್ಪೆ ರೋಗದ ಲಸಿಕೆ ನೀಡಬೇಕು. ಮೇವು ಕಿಟ್ ನೀಡುವ ಮೂಲಕ ಜಾನುವಾರು ಮೇವು ಕೊರತೆ ಆಗದಂತೆ ನೋಡಿಕೊಳ್ಳಬೇಕು. ದೇಶದ ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಅರಣ್ಯ ಪ್ರದೇಶ ಕಡಿಮೆಯಾಗುತ್ತಿದೆ. ಈ ಹಿನ್ನೆಲೆ ಸಾಮಾಜಿಕ ಅರಣ್ಯದಿಂದ ಹೆಚ್ಚು ಗಿಡಗಳನ್ನು ನೆಡಬೇಕು ಎಂದು ಕುಮಾರಸ್ವಾಮಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಮೈಸೂರು ಕೊಡಗು ಲೋಕಸಭಾ ಸದಸ್ಯ ಯದುವೀರ್, ಶಾಸಕರಾದ ಕೆ. ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆರ್.ಚಿದಂಬರಂ ಇನ್ನಿಲ್ಲ

1974ರಲ್ಲಿ 'ಆಪರೇಷನ್ ಸ್ಮೈಲಿಂಗ್ ಬುದ್ಧ' ಹಾಗೂ 1998ರಲ್ಲಿ 'ಆಪರೇಷನ್ ಶಕ್ತಿ' ಎರಡರಲ್ಲಿಯೂ ಅವರ ಪಾತ್ರ ಮಹತ್ವದ್ದಾಗಿತ್ತು. 1974ರಲ್ಲಿ ದೇಶದ ಮೊದಲ ಅಣು ಪರೀಕ್ಷೆಯಲ್ಲಿ ಅವರು ಪ್ರಧಾನ ಪಾತ್ರ ವಹಿಸಿದ್ದರು. 1998ರಲ್ಲಿ ಪೋಖ್ರಾನ್- II ಪರಮಾಣು ಪರೀಕ್ಷೆಯಲ್ಲಿ ಆಟೋಮಿಕ್ ಎನರ್ಜಿ ಇಲಾಖೆಯ ತಂಡವನ್ನು ಮುನ್ನಡೆಸಿದ್ದರು. ಜಾಗತಿಕ ಮಟ್ಟದಲ್ಲಿ ಭಾರತವನ್ನು ಪರಮಾಣು ಶಕ್ತಿಯ ದೇಶವನ್ನಾಗಿ ನಿಲ್ಲಿಸುವಲ್ಲಿ ಅವರು ಕೊಡುಗೆ ಸಲ್ಲಿಸಿದ್ದರು.

ಚಿದಂಬರಂ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಶೋಕ ವ್ಯಕ್ತಪಡಿಸಿದ್ದಾರೆ. ಡಾ.ರಾಜಗೋಪಾಲ ಚಿದಂಬರಂ ಅವರು ಭಾರತದ ಅಣು ಕಾರ್ಯಕ್ರಮದ ಪ್ರಮುಖ ರೂವಾರಿಗಳಲ್ಲಿ ಒಬ್ಬರಾಗಿದ್ದರು. ಭಾರತದ ವೈಜ್ಞಾನಿಕ ಮತ್ತು ಕಾರ್ಯತಂತ್ರ ಸಾಮರ್ಥ್ಯಗಳನ್ನು ಬಲಪಡಿಸುವಲ್ಲಿ ಗಣನೀಯ ಕೊಡುಗೆಗಳನ್ನು ನೀಡಿದ್ದಾರೆ ಎಂದು ಮೋದಿ ಸ್ಮರಿಸಿದ್ದಾರೆ.

ನಗರ ಪೊಲೀಸ್‌ನಲ್ಲಿ ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿರುವ 8 ಮಂದಿ ಪೊಲೀಸ್ ಪೇದೆಗಳಿಗೆ

'ನೈಟ್ಸ್ ಇನ್ ಖಾಕಿ' ವಾರ್ಷಿಕ ಪೊಲೀಸ್ ಶೀಲ್ಡ್ ಪುರಸ್ಕಾರ ಪ್ರದಾನ

ಮೈಸೂರು ರೌಂಡ್ ಟೇಬಲ್-21, ಮೈಸೂರು ಲೇಡೀಸ್ ಸರ್ಕಲ್-09 ಜಂಟಿ ಆಶ್ರಯದಲ್ಲಿ ಕೊಡಮಾಡುವ ಪ್ರತಿಷ್ಠಿತ ಪುರಸ್ಕಾರ



ಮೈಸೂರಿನ ಕೃಷ್ಣಮೂರ್ತಿಪುರಂನ ನಿತ್ಯೋತ್ಸವ ಕನ್ವೆನ್ಷನ್ ಸೆಂಟರ್‌ನಲ್ಲಿ ಹಮ್ಮಿಕೊಂಡಿದ್ದ 48ನೇ ವರ್ಷದ ಪುರಸ್ಕಾರ ಸಮಾರಂಭದಲ್ಲಿ (ಎಡದಿಂದ) ಸಾಧಕ ಪೊಲೀಸ್ ಪೇದೆಗಳಾದ ಡಿ.ವಿನಯ್‌ಕುಮಾರ್, ಕೆ.ಜೆ.ಅರ್ಜುನ್, ಸಿದ್ದಪ್ಪಾಜಿ, ಆರ್.ಮಂಜುಳಾ, ಮೈಲಾರಿ, ಪಿ.ಕುಮಾರ, ರುಬೀನಾ ನದಾಫ್, ಟಿ.ಸಿ.ಲಕ್ಷ್ಮೀ ಅವರಿಗೆ 'ನೈಟ್ಸ್ ಇನ್ ಖಾಕಿ' ವಾರ್ಷಿಕ ಪೊಲೀಸ್ ಶೀಲ್ಡ್ ಪುರಸ್ಕಾರ ಪ್ರದಾನ ಮಾಡಲಾಯಿತು. (ಎಡದಿಂದ-ನಿಂತವರು) ಎಂಆರ್‌ಟಿ 21ರ ಸದಸ್ಯ ನಿಖಿಲೇಶ್, ಲೇಡೀಸ್ ಸರ್ಕಲ್ ಏರಿಯಾ-13ರ ಉಪಾಧ್ಯಕ್ಷೆ ಕೆ.ಎಸ್.ನಾಗಶ್ರೀ, ಎಂಎಲ್‌ಸಿ-09ರ ಅಧ್ಯಕ್ಷೆ ಸಂಜನಾ ಶ್ರೀಹರ್ಷ, ಲೇಡೀಸ್ ಸರ್ಕಲ್ ಏರಿಯಾ 13ರ ಮುಖ್ಯಸ್ಥೆ ಕೋಮಲ್ ಕಟಾರಿಯಾ, ಎಂಆರ್‌ಟಿ 21ರ ಅಧ್ಯಕ್ಷ ಕೆ.ಎ.ಮೋಹನ್ ರಾಜ್, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ರೌಂಡ್ ಟೇಬಲ್ ಏರಿಯಾ 13ರ ಅಧ್ಯಕ್ಷ ಕುಮಾರ್‌ಪಾಲ್ ಜೈನ್, ಎಂಆರ್‌ಟಿ 21ರ ಸದಸ್ಯರಾದ ರಂಜಿತ್‌ಕುಮಾರ್, ಹೆಚ್.ಹೆಚ್.ರಾಮ್, ಉಪಾಧ್ಯಕ್ಷ ಅಕ್ಷಯ್ ಕೋನೆರಿ, ಖಜಾಂಚಿ ಎಂ.ಎಸ್.ಸುಹಾಸ್ ಅವರನ್ನು ಕಾಣಬಹುದು.

ಮೈಸೂರು,ಜ.4(ಪಿಎಂ)- ಮೈಸೂರು ನಗರದಲ್ಲಿ ಕಾನೂನು-ಸುವ್ಯವಸ್ಥೆ, ಅಪರಾಧ, ಸಂಚಾರ ಮತ್ತು ಮಹಿಳಾ ಘಟಕಗಳಲ್ಲಿ ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿರುವ 8 ಮಂದಿ ಪೊಲೀಸ್ ಸಿಬ್ಬಂದಿಗೆ ಶನಿವಾರ 'ನೈಟ್ಸ್ (ಕ್ನೈಟ್ಸ್) ಇನ್ ಖಾಕಿ' ವಾರ್ಷಿಕ ಪೊಲೀಸ್ ಶೀಲ್ಡ್ ಪುರಸ್ಕಾರ (Knights in Khaki' award) ಪ್ರದಾನ ಮಾಡಲಾಯಿತು.

ಮೈಸೂರು ರೌಂಡ್ ಟೇಬಲ್-21 (ಎಂಆರ್‌ಟಿ 21) ಮತ್ತು ಮೈಸೂರು ಲೇಡೀಸ್ ಸರ್ಕಲ್-09 (ಎಂಎಲ್‌ಸಿ-09) ಜಂಟಿ ಆಶ್ರಯದಲ್ಲಿ ಕೊಡಮಾಡುವ ವಾರ್ಷಿಕ ಪುರಸ್ಕಾರ ಇದಾಗಿದ್ದು, ಮೈಸೂರಿನ ಕೃಷ್ಣಮೂರ್ತಿಪುರಂನ ನಿತ್ಯೋತ್ಸವ ಕನ್ವೆನ್ಷನ್ ಸೆಂಟರ್‌ನಲ್ಲಿ ಹಮ್ಮಿಕೊಂಡಿದ್ದ 48ನೇ ವರ್ಷದ ಪುರಸ್ಕಾರ ಸಮಾರಂಭದಲ್ಲಿ ಸಾಧಕ ಪೊಲೀಸ್ ಸಿಬ್ಬಂದಿಗೆ ಪ್ರಶಸ್ತಿಗಳನ್ನು ಅತಿಥಿ-ಗಣ್ಯರು ಆತ್ಮೀಯವಾಗಿ ಪ್ರದಾನ ಮಾಡಿದರು.

ಸಿಸಿಆರ್‌ಬಿ ಅಪರಾಧ ವಿಭಾಗದ ಸಿದ್ದಪ್ಪಾಜಿ, ನಗರ ವಿಶೇಷ ಘಟಕದ ಕಾನೂನು-ಸುವ್ಯವಸ್ಥೆ ವಿಭಾಗದ ಡಿ.ವಿನಯ್ ಕುಮಾರ್, ತಾಂತ್ರಿಕ ಶಾಖೆಯ ಅಪರಾಧ ವಿಭಾಗದ ಪಿ.ಕುಮಾರ (ಸಿಡಿಆರ್), ವಿಜಯನಗರ ಪೊಲೀಸ್ ಠಾಣೆಯ ಕಾನೂನು ಸುವ್ಯವಸ್ಥೆ ವಿಭಾಗದ ಕೆ.ಜೆ. ಅರ್ಜುನ್, ಮಹಿಳಾ ಪೊಲೀಸ್ ಠಾಣೆಯ ರುಬೀನಾ ನದಾಫ್, ಜಯಲಕ್ಷ್ಮೀಪುರಂ ಪೊಲೀಸ್ ಠಾಣೆ ಮಹಿಳಾ ವಿಭಾಗದ ಟಿ.ಸಿ.ಲಕ್ಷ್ಮೀ, ಎನ್.ಆರ್.ಸಂಚಾರ ಪೊಲೀಸ್ ಠಾಣೆಯ ಆರ್.ಮಂಜುಳಾ, ವಿವಿ ಪುರಂ ಸಂಚಾರ ಠಾಣೆಯ ಮೈಲಾರಿ ಅವರು 'ನೈಟ್ಸ್ ಇನ್ ಖಾಕಿ' ವಾರ್ಷಿಕ ಪೊಲೀಸ್ ಶೀಲ್ಡ್ ಪುರಸ್ಕಾರಕ್ಕೆ ಭಾಜನರಾದರು.

ಅತಿಥಿಯಾಗಿ ಪಾಲ್ಗೊಂಡಿದ್ದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಕೋವಿಡ್ ಕಾರಣಕ್ಕೆ ಎರಡು ಮೂರು ವರ್ಷ ಈ ಕಾರ್ಯಕ್ರಮ ಆಯೋಜನೆ ಸಾಧ್ಯವಾಗದೇ ಇದ್ದರೂ ಈಗ ಮುಂದುವರೆಸಿರುವುದು ಸಂತಸದ ವಿಚಾರ. ಯಾವುದೇ ಸ್ಥಳದಲ್ಲಿ ಪೊಲೀಸರು ಇದ್ದರೆ ಅದು ಸುರಕ್ಷಿತ ಎಂಬ ಭಾವನೆ ಮೂಡುತ್ತದೆ. ಹಾಗಾಗಿ ಖಾಕಿಗೆ ವಿಶೇಷ ಗೌರವವಿದೆ. ಸಮಾಜಕ್ಕಾಗಿ ಪ್ರತಿನಿತ್ಯ ಕಟಿಬದ್ಧರಾಗಿ ಕೆಲಸ ಮಾಡುವ ಪೊಲೀಸ್ ಪೇದೆಗಳು ನಿಜಕ್ಕೂ ಅಭಿನಂದನಾರ್ಹರು. ಪೊಲೀಸರ ಸೇವೆಗೆ ಸಮಾಜ ಚಿರಋಣಿಯಾಗಿದೆ ಎಂದು ಅಭಿಮಾನ ವ್ಯಕ್ತಪಡಿಸಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಮಾತನಾಡಿ, ಇಂತಹದೊಂದು ಪುರಸ್ಕಾರ ನೀಡುತ್ತಿರುವುದು ಅತ್ಯುತ್ತಮ ಕಾರ್ಯವಾಗಿದೆ. ತಳಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಪೇದೆಗಳನ್ನು ಗುರುತಿಸಿ ಗೌರವಿಸುವ ಮೂಲಕ ಉತ್ತೇಜಿಸುತ್ತಿರುವುದು ಶ್ಲಾಘನೀಯ. ಬಿಸಿಲು-ಮಳೆ, ಗಾಳಿ ಮತ್ತು ಹಗಲು-ರಾತ್ರಿ ಎನ್ನದೆ ಪ್ರತಿನಿತ್ಯ ಶ್ರಮವಹಿಸಿ ದುಡಿಯುವ ಪೊಲೀಸ್ ಪೇದೆಯಂತಹ ಶ್ರಮಜೀವಿಗಳನ್ನು ಗುರುತಿಸಿರುವುದು ಪ್ರಶಂಸನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಮಾತನಾಡಿ, ಪೊಲೀಸರ ಕಾಯಕ ಗುರುತಿಸುವುದು ಸಾಮಾನ್ಯವಾಗಿ ಅಪರೂಪ. ಮೈಸೂರು ನಗರದಲ್ಲಿ ಸುಮಾರು 14 ಲಕ್ಷ ಜನಸಂಖ್ಯೆ ಇದ್ದು, ನಗರ ಪೊಲೀಸ್‌ಗೆ ಸಂಬಂಧಿಸಿದಂತೆ 3 ಸಾವಿರ ಪೊಲೀಸರು ಮಾತ್ರ ಇದ್ದಾರೆ. ಈ ಪೈಕಿ ಸಾರ್ವಜನಿಕರ ನಡುವೆ ಇದ್ದು ಕೆಲಸ ಮಾಡುವವರ ಸಂಖ್ಯೆ 1,500 ಮಾತ್ರ. ಇಷ್ಟೆಲ್ಲಾ ಇತಿಮಿತಿಗಳ ನಡುವೆ ನಮ್ಮ ಪೊಲೀಸರು ಅತ್ಯಂತ ಬದ್ಧತೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದರು.

ಎಂಆರ್‌ಟಿ-21 ಅಧ್ಯಕ್ಷ ಕೆ.ಎ. ಮೋಹನ್ ರಾಜ್ ಪ್ರಸ್ತಾವಿಕವಾಗಿ ಮಾತನಾಡಿ, ನಮ್ಮ ರೌಂಡ್ ಟೇಬಲ್ ಇಂಟರ್‌ನ್ಯಾಷನಲ್ ಸಂಸ್ಥೆಯು 65ಕ್ಕೂ ಹೆಚ್ಚು ದೇಶಗಳಲ್ಲಿ ಸೇವಾ ಚಟುವಟಿಕೆಗಳಲ್ಲಿ ತೊಡಗಿದೆ. ಪ್ರಪಂಚದಾದ್ಯಂತ 2,275 ಘಟಕಗಳು ಇದ್ದು, 30 ಸಾವಿರಕ್ಕೂ ಹೆಚ್ಚು ಸದಸ್ಯರನ್ನು ಹೊಂದಿದೆ. ಇದು ರಾಜಕೀಯೇತರ ಸೇವಾ ಸಂಸ್ಥೆಯಾಗಿದ್ದು, 18ರಿಂದ 40 ವರ್ಷ ವಯೋಮಾನದ ಯುವಕರಿಗೆ ತಮ್ಮ ಸಮುದಾಯದ ಸೇವೆ ಉತ್ತೇಜನ ನೀಡುತ್ತಿದೆ. 1971ರಲ್ಲಿ ಎಂಆರ್‌ಟಿ-21 ಅನ್ನು ಮೈಸೂರಿನ ಮೊದಲ ರೌಂಡ್ ಟೇಬಲ್ ಸಂಸ್ಥೆಯಾಗಿ ಸ್ಥಾಪನೆಯಾಯಿತು. 47 ವರ್ಷಗಳಿಂದ ನೈಟ್ಸ್ ಇನ್ ಖಾಕಿ ಪುರಸ್ಕಾರ ನಡೆಸಿಕೊಂಡು ಬಂದಿದ್ದು, ಇದು ನಮ್ಮ 48ನೇ ಕಾರ್ಯಕ್ರಮ. ರೌಂಡ್ ಟೇಬಲ್ ಜೊತೆಗೆ ಲೇಡೀಸ್ ಸರ್ಕಲ್ ಸಹ ಸೇವಾ ಚಟುವಟಿಕೆಯಲ್ಲಿ ತೊಡಗಿದೆ ಎಂದು ತಿಳಿಸಿದರು.

ರೌಂಡ್ ಟೇಬಲ್ ಏರಿಯಾ 13ರ ಅಧ್ಯಕ್ಷ ಕುಮಾರ್‌ಪಾಲ್ ಜೈನ್, ಲೇಡೀಸ್ ಸರ್ಕಲ್ ಏರಿಯಾ 13ರ ಅಧ್ಯಕ್ಷೆ ಕೋಮಲ್ ಕಟಾರಿಯಾ, ಉಪಾಧ್ಯಕ್ಷೆ ಕೆ.ಎಸ್.ನಾಗಶ್ರೀ, ಎಂಆರ್‌ಟಿ 21ರ ಅಧ್ಯಕ್ಷ ಕೆ.ಎ.ಮೋಹನ್ ರಾಜ್, ಎಂಎಲ್‌ಸಿ-09ರ ಅಧ್ಯಕ್ಷೆ ಸಂಜನಾ ಶ್ರೀಹರ್ಷ, ಎಂಆರ್‌ಟಿ 21ರ ಸದಸ್ಯ ನಿಖಿಲೇಶ್, ಎಂಆರ್‌ಟಿ 21ರ ಉಪಾಧ್ಯಕ್ಷ ಅಕ್ಷಯ್ ಕೋನೆರಿ, ಖಜಾಂಚಿ ಎಂ.ಎಸ್.ಸುಹಾಸ್, ಸದಸ್ಯರಾದ ರಂಜಿತ್‌ಕುಮಾರ್, ಹೆಚ್.ಹೆಚ್. ರಾಮ್ ಮತ್ತಿತರರು ಹಾಜರಿದ್ದರು.

ಪೊಲೀಸ್ ಪೇದೆಯಿಂದ ಹಿಡಿದು ಎಎಸ್‌ಐವರೆಗಿನ ಪಡೆ ಇಡೀ ಪೊಲೀಸ್ ಇಲಾಖೆ ಅಡಿಪಾಯ

ಸಮಾಜದ ಸುರಕ್ಷತೆ, ಸಾರ್ವಜನಿಕರ ಆಸ್ತಿಪಾಸ್ತಿ ರಕ್ಷಣೆ, ಕಾನೂನು-ಸುವ್ಯವಸ್ಥೆ ಕಾಪಾಡುವ ಕರ್ತವ್ಯದಲ್ಲಿ ಪೊಲೀಸರು ಅಪಾಯ ಸನ್ನಿವೇಶ ಎದುರಿಸಬೇಕಾಗುತ್ತದೆ. ಅದಾಗ್ಯೂ ನಮ್ಮ ಸಮಾಜದ ರಕ್ಷಣೆಗೆ ಬದ್ಧರಾಗಿ ಬಂಡೆಯಂತೆ ಪೊಲೀಸರು ನಿಂತಿದ್ದೇವೆ. ಅಧಿಕಾರಿಗಳ ಹುತದಲ್ಲಿ ಮೇಲ್ವಿಚಾರಣೆ ಹೆಚ್ಚಿರುತ್ತದೆ. ಆದರೆ ಪೊಲೀಸ್ ಪೇದೆಯಿಂದ ಹಿಡಿದು ಎಎಸ್‌ಐವರೆಗಿನ ಪಡೆ ಸಾರ್ವಜನಿಕರ ನಡುವೆ ಇದ್ದು, ಕಾರ್ಯನಿರ್ವಹಿಸಬೇಕಿದೆ ಸಾರ್ವಜನಿಕರ ನಿಕಟ ಸಂಪರ್ಕದೊಂದಿಗೆ ಹೆಚ್ಚು ಶ್ರಮದಾಯಕವಾಗಿ ಕಾರ್ಯನಿರ್ವಹಿಸುವವರು ಇವರೇ. ಇಡೀ ಪೊಲೀಸ್ ಇಲಾಖೆಯ ಅಡಿಪಾಯ ಇವರೇ ಆಗಿದ್ದಾರೆ.

-**ಸೀಮಾ ಲಾಟ್ಕರ್**, ನಗರ ಪೊಲೀಸ್ ಆಯುಕ್ತರು, ಮೈಸೂರು.

ಸಿಡ್ನಿ ಟೆಸ್ಟ್: ಭಾರತಕ್ಕೆ 145 ರನ್ ಮುನ್ನಡೆ



ಸಿಡ್ನಿ, ಜ.4- ರಿಷಬ್ ಪಂತ್ ಅವರ ಭರ್ಜರಿ ಅರ್ಧಶತಕದ ನೆರವಿನಿಂದ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯ ಅಂತಿಮ ಪಂದ್ಯದಲ್ಲಿ ಭಾರತ 2ನೇ ಇನ್ನಿಂಗ್ಸ್‌ನಲ್ಲಿ 6 ವಿಕೆಟ್ ನಷ್ಟಕ್ಕೆ 141 ರನ್ ಗಳಿಸಿದ್ದು, 145 ರನ್‌ಗಳ ಮುನ್ನಡೆ ಸಾಧಿಸಿದೆ.

ಇದಕ್ಕೂ ಮುನ್ನಾ 1 ವಿಕೆಟ್ ನಷ್ಟಕ್ಕೆ 9 ರನ್‌ಗಳಿಂದ 2ನೇ ದಿನದಾಟ ಆರಂಭಿಸಿದ ಆಸ್ಟ್ರೇಲಿಯಾ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 181 ರನ್ ಗಳಿಗೆ ಆಲೌಟಾಯಿತು. ಆ ಮೂಲಕ ಭಾರತ 4 ರನ್ ಮುನ್ನಡೆ ಸಾಧಿಸಿತು. ಆಸೀಸ್ ಪರ ವೆಬ್‌ಸ್ಟರ್ 57, ಅಲೆಕ್ಸ್ ಕ್ಯಾರಿ 21, ಪ್ಯಾಟ್ ಕಮ್ಮಿನ್ಸ್ 10, ಸ್ಯಾಮ್ ಕೋನ್‌ಸ್ಟಾಸ್ 23, ಸ್ಟೀವನ್ ಸ್ಮಿತ್ 33 ರನ್ ಗಳಿಸಿದರು. ಭಾರತದ ಪರ ಸಿರಾಜ್, ಪ್ರಸಿದ್ಧ ಕೃಷ್ಣ ತಲಾ 3, ಬೂಮ್ರಾ ಹಾಗೂ ನಿತೀಶ್ ರೆಡ್ಡಿ ತಲಾ 2 ವಿಕೆಟ್ ಕಬಳಿಸಿದರು.

ಬಳಿಕ 2ನೇ ಇನ್ನಿಂಗ್ಸ್ ಆರಂಭಿಸಿದ ಭಾರತಕ್ಕೆ ಯಶಸ್ವಿ ಜೈಸ್ವಾಲ್ ಮೊದಲ ಓವರ್‌ನಲ್ಲಿ ಮಿಚೆಲ್ ಸ್ಟಾರ್ಕ್‌ಗೆ 4 ಬೌಂಡರಿ ಬಾರಿಸುವ ಮೂಲಕ ಸ್ಫೋಟಕ ಆರಂಭ ಒದಗಿಸಿಕೊಡುವ ಸೂಚನೆ ನೀಡಿದರು. ಕೆ.ಎಲ್.ರಾಹುಲ್ ಹಾಗೂ ಜೈಸ್ವಾಲ್ ಮೊದಲ ವಿಕೆಟ್‌ಗೆ 42 ರನ್ ಜೊತೆಯಾಟವಾಡಿರು. ಈ ಜೋಡಿ ಬೇರ್ಪಡಿಸುವಲ್ಲಿ ಸ್ಕಾಟ್ ಬೋಲೆಂಡ್ ಯಶಸ್ವಿಯಾದರು. ಕೆ.ಎಲ್.ರಾಹುಲ್ 13 ಹಾಗೂ ಜೈಸ್ವಾಲ್ 22 ರನ್ ಗಳಿಸಿ ಬೋಲೆಂಡ್ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದರು. ಇನ್ನು ವಿರಾಟ್ ಕೊಹ್ಲಿ ಮತ್ತೊಮ್ಮೆ ಹೊರಹೋಗುವ ಚೆಂಡನ್ನು ಕೆಣಕಲು ಹೋಗಿ 6ರನ್ ಗಳಿಸಿ ಬೋಲೆಂಡ್‌ಗೆ ವಿಕೆಟ್ ಒಪ್ಪಿಸಿದರು. ಇನ್ನು ಶುಭ್‌ಮನ್ ಗಿಲ್ ಬ್ಯಾಟಿಂಗ್ 13 ರನ್‌ಗಳಿಗೆ ಸೀಮಿತವಾಯಿತು.

ಗುಡುಗಿದ ಪಂತ್: ಕೇವಲ 78 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಅಲ್ಪ ಮೊತ್ತಕ್ಕೆ ಕುಸಿಯುವ ಭೀತಿಗೆ ಸಿಲುಕಿದ್ದ ಭಾರತಕ್ಕೆ ರಿಷಭ್ ಪಂತ್ ಆಸರೆಯಾದರು. ತಾವೆದುರಿಸಿದ ಮೊದಲ ಎಸೆತದಲ್ಲೇ ಸಿಕ್ಸರ್ ಸಿಡಿಸುವ ಮೂಲಕ ಆಸೀಸ್‌ಗೆ ಎಚ್ಚರಿಕೆ ರವಾನಿಸಿದ ಪಂತ್ ಕೇವಲ 29 ಎಸೆತಗಳಲ್ಲಿ ಅರ್ಧಶತಕ ಸಿಡಿಸಿದರು. ಆಸೀಸ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಪಂತ್ ಕೇವಲ 33 ಎಸೆತಗಳನ್ನು ಎದುರಿಸಿ 6 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 61 ರನ್ ಗಳಿಸಿ ಪ್ಯಾಟ್ ಕಮಿನ್ಸ್‌ಗೆ ವಿಕೆಟ್ ಒಪ್ಪಿಸಿದರು. ಇದೀಗ ವಾಷಿಂಗ್ಟನ್ ಸುಂದರ್ (6) ಹಾಗೂ ರವೀಂದ್ರ ಜಡೇಜಾ (8) ಕ್ರೀಸ್‌ನಲ್ಲಿದ್ದು, ಮೂರನೇ ದಿನದಾಟದಲ್ಲಿ ದೊಡ್ಡ ಜೊತೆಯಾಟ ಮೂಡಿಬಂದರೆ ಸಿಡ್ನಿ ಟೆಸ್ಟ್ ಮೇಲೆ ಭಾರತ ಹಿಡಿತ ಸಾಧಿಸಲು ಸಾಧ್ಯವಾಗಲಿದೆ.

ಕೆಸರೆ ಬಡಾವಣೆ ಇಲ್ಲವೇ ಅಲ್ಲಿನ ರಸ್ತೆಗೆ ಸಿದ್ದರಾಮಯ್ಯ ಹೆಸರಿಡಿ...!

ಮುಡಾ ಹಗರಣದ ಮೂಲವೇ ಅದಲ್ವೆ: ಹೆಚ್.ಡಿ.ಕುಮಾರಸ್ವಾಮಿ ವ್ಯಂಗ್ಯ ಸಲಹೆ

- ಸಿದ್ದರಾಮಯ್ಯರ ಮನೆಯಿಂದ ಹಣ ತಂದು ಅಭಿವೃದ್ಧಿ ಮಾಡಿದ್ದಾರೆಯೇ?
- ರಸ್ತೆಗೆ ಹೆಸರಿಡಬೇಕೆಂಬ ಖಯ್ಯಾಲಿ ಬಿಡಬೇಕು
- ನಮ್ಮ ಹೆಸರು ಜನರ ಹೃದಯದಲ್ಲಿರಬೇಕೇ ಹೊರತು ರಸ್ತೆಯಲ್ಲಲ್ಲ
- ಇಷ್ಟೆಲ್ಲಾ ರಾದ್ಧಾಂತವಾಗುತ್ತಿದ್ದರೂ ಸಿದ್ದರಾಮಯ್ಯ ಜಾಣಮೌನ



ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ

ಮೈಸೂರು, ಜ.4(ಬಿಎಲ್‌ಯು)- ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಶ್ರೀಮತಿ ಪಾರ್ವತಿ ಅವರು ಅಕ್ರಮವಾಗಿ ನಿವೇಶನ ಪಡೆದಿರುವ ಮುಡಾ ಹಗರಣದ ಮೂಲ ಮೈಸೂರಿನ ಕೆಸರೆ ಬಡಾವಣೆಯಾಗಿದ್ದು, ಆ ಬಡಾವಣೆ ಇಲ್ಲವೇ ಅಲ್ಲಿರುವ ರಸ್ತೆಗೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವುದು ಸೂಕ್ತ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಗಿ ಸಲಹೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್‌ನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಈ ಮೂಲಕ ಕಳೆದ 15 ದಿನಗಳಿಂದ ನಡೆಯುತ್ತಿರುವ ರಸ್ತೆ ನಾಮಕರಣ ವಿವಾದ ಸುಖಾಂತ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ಮಹಾರಾಜರು ಅರಮನೆಯಲ್ಲಿದ್ದ ಚಿನ್ನಾಭರಣ ಮಾರಾಟ ಮಾಡಿ ಅಭಿವೃದ್ಧಿ ಮಾಡಿದಂತೆ ಸಿದ್ದರಾಮಯ್ಯ ಅವರು ತಮ್ಮ ಮನೆಯಲ್ಲಿರುವ ಹಣ ತಂದು ಅಭಿವೃದ್ಧಿ ಮಾಡಿದ್ದಾರೆಯೇ ಎಂದು ಪ್ರಶ್ನಿಸಿದರು. ಸರ್ಕಾರದ ಗೆಜೆಟ್‌ನಲ್ಲಿ ಪ್ರಿನ್ಸೆಸ್ ರಸ್ತೆ ಎಂಬ ಉಲ್ಲೇಖವಿದ್ದರೂ ಕೆಆರ್‌ಎಸ್ ರಸ್ತೆಗೆ ಸಿದ್ದರಾಮಯ್ಯ ಹೆಸರಿಡಲು ಮುಂದಾಗಿದ್ದಾರೆ. ಈ ಮೂಲಕ ರಾಜ್ಯಕ್ಕೆ ಸ್ಮರಣೀಯ ಕೊಡುಗೆ ನೀಡಿರುವ ಮೈಸೂರು ಮಹಾರಾಜರಿಗೆ ಅಪಚಾರ ಮಾಡುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ರಸ್ತೆಗೆ ತಮ್ಮ ಹೆಸರು ನಾಮಕರಣ ಮಾಡಬೇಕು ಎಂದು ಸಿದ್ದರಾಮಯ್ಯ ಸಂಕಲ್ಪ ಮಾಡಿದ್ದರೆ ಕೆಸರೆ ಬಡಾವಣೆ ಇಲ್ವೇ ರಸ್ತೆಗೆ ಅವರ ಹೆಸರಿಡಲಿ. ಅಕ್ರಮವಾಗಿ ನಿವೇಶನ ಪಡೆದ ಮುಡಾ ಹಗರಣದ ಬಗ್ಗೆ ದೇಶಾದ್ಯಂತ ಚರ್ಚೆಯಾದ ಆ ಸ್ಥಳಕ್ಕೆ ಸಿದ್ದರಾಮಯ್ಯ ಹೆಸರು ನಾಮಕರಣ ಮಾಡುವುದು ಸೂಕ್ತ ಎಂದು ಕುಮಾರಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸಿದರು.

ದೊಡ್ಡ ಸಾಧನೆ ಮಾಡಿರುವ ಹಾಗೂ ದೊಡ್ಡ ಕೊಡುಗೆ ನೀಡಿರುವ ಕೆಸರೆಗೆ ಸಿದ್ದರಾಮಯ್ಯ ಹೆಸರಿಟ್ಟರೆ ಈಗ ಉದ್ಭವವಾಗಿರುವ ಸಮಸ್ಯೆಯೂ ಪರಿಹಾರವಾಗುತ್ತದೆ. ಆಗ ಪ್ರಿನ್ಸೆಸ್ ರಸ್ತೆ ಹೆಸರು ಉಳಿಯುತ್ತದೆ, ಜೊತೆಗೆ ತಮ್ಮ ಹೆಸರು ರಸ್ತೆಗಿಡಬೇಕೆಂಬ ಸಿದ್ದರಾಮಯ್ಯ ಅವರ ಮಹಾದಾಸೆ ಕೂಡ ಈಡೇರುತ್ತದೆ. ಈ ಮೂಲಕವಾದರೂ ತಮ್ಮ ಹೆಸರು ರಸ್ತೆಗಿಡಬೇಕೆಂಬ ಖಯ್ಯಾಲಿಯನ್ನು ಸಿದ್ದರಾಮಯ್ಯ ಬಿಡುತ್ತಾರೆ ಎಂದು ಛೇಡಿಸಿದರು.

ಮುಖ್ಯಮಂತ್ರಿಯಾಗಿ, ಉಪಮುಖ್ಯಮಂತ್ರಿಯಾಗಿ, ಸಚಿವರಾಗಿ ಸಿದ್ದರಾಮಯ್ಯ ಮೈಸೂರಿಗೆ ಯಾವ ಮಹಾ ಕೊಡುಗೆ ನೀಡಿದ್ದಾರೆಂದು ಅವರ ಹೆಸರನ್ನು ರಸ್ತೆಗೆ ನಾಮಕರಣ ಮಾಡಬೇಕು ಎಂದು ಪ್ರಶ್ನಿಸಿದ ಕುಮಾರಸ್ವಾಮಿ, ಅಭಿವೃದ್ಧಿ ಹೆಸರಿನಲ್ಲಿ ಲೂಟಿ ಮಾಡಿದ್ದಾರೆಯೇ ಹೊರತು, ಯಾವುದೇ ಅಭಿವೃದ್ಧಿ ಮಾಡಿಲ್ಲ. ಇದೇ ಸಿದ್ದರಾಮಯ್ಯನವರ ದೊಡ್ಡ ಕೊಡುಗೆ ಮತ್ತು ಸಾಧನೆ ಎಂದು ಆರೋಪಿಸಿದರು. ಒಂದು ರಸ್ತೆಗೆ ಹೆಸರಿಡುವ ವಿಚಾರದಲ್ಲಿ ಬಹಳಷ್ಟು ಕೊಡುಗೆ ಕೊಟ್ಟಿರುವ ಮೈಸೂರು ರಾಜವಂಶಸ್ಥರ ಹೆಸರನ್ನು ಏಕೆ ಎಳೆದು ತರುತ್ತೀರಾ. ತಮ್ಮ ಹೆಸರು ಇಡಲೇಬೇಕೆಂಬ ಹಠವಿದ್ದರೆ ಕೆಸರೆ ಗ್ರಾಮ ಅಥವಾ ರಸ್ತೆಗೆ ಇಟ್ಟುಕೊಳ್ಳಲಿ ಎಂದು ಪುನರುಚ್ಚರಿಸಿದರು.

ಕೇಂದ್ರ ಸರ್ಕಾರದ ನರ್ಮ್ ಯೋಜನೆ ಅನುಷ್ಠಾನಗೊಳಿಸಿ ಮೈಸೂರಿನ ಅಭಿವೃದ್ಧಿ ಮಾಡಿದವನು ನಾನು. ಮೈಸೂರಿನ ಬಹಳಷ್ಟು ಗುಡಿಸಲು ವಾಸಿಗಳಿಗೆ ನರ್ಮ್ ಯೋಜನೆಯ ಮನೆ ನಿರ್ಮಿಸಿದವನು ನಾನು. ಇದನ್ನೆಲ್ಲಾ ಹೇಳುತ್ತಾ ನಾನು ಜಾಹೀರಾತು ಕೊಡಲು ಸಾಧ್ಯವೇ. ಇಷ್ಟೆಲ್ಲಾ ಅಭಿವೃದ್ಧಿ ಮಾಡಿರುವ ನನ್ನ ಹೆಸರನ್ನು ನಾಮಕರಣ ಮಾಡಿ ಎಂದು ಯಾವತ್ತಾದರೂ ಹೇಳಿದ್ದೇನೆಯೆ ಎಂದು ಕುಮಾರಸ್ವಾಮಿ ಪ್ರಶ್ನಿಸಿದರು. ಜನಪ್ರತಿನಿಧಿಯಾಗಿ ಜನರ ಸೇವೆ ಮಾಡುವುದು ನಮ್ಮ ಕರ್ತವ್ಯ. ಹಾಗೆಯೇ ನಮ್ಮ ಕರ್ತವ್ಯ ನಾವು ನಿರ್ವಹಿಸಿದ್ದೇವೆಯೇ ಹೊರತು ಇದರಲ್ಲಿ ದೊಡ್ಡ ಸಾಧನೆಯೇನು ಮಾಡಿಲ್ಲ. ಅಭಿವೃದ್ಧಿ ಮಾಡಿದ್ದೇನೆ ಎಂಬ ಕಾರಣಕ್ಕೆ ರಸ್ತೆ ಅಥವಾ ಬಡಾವಣೆಗೆ ನಮ್ಮ ಹೆಸರಿಡಬೇಕು ಎಂಬ ಮನೋಭಾವ ಹೊಂದುವುದು ತಪ್ಪು ಎಂದು ಅಭಿಪ್ರಾಯಪಟ್ಟರು.

ನಾವು ಮಾಡುವ ಅಭಿವೃದ್ಧಿ ಕೆಲಸ ಜನರ ಹೃದಯದಲ್ಲಿರಬೇಕೇ ಹೊರತು, ರಸ್ತೆ ಅಥವಾ ಬಡಾವಣೆಯ ಹೆಸರಿನಲ್ಲಿ ಅಲ್ಲ. ಸಿದ್ದರಾಮಯ್ಯ ಮೊದಲು ಇದನ್ನು ಅರಿಯಬೇಕು. ಈ ಮೂಲಕ ರಸ್ತೆಗೆ ತಮ್ಮ ಹೆಸರಿಡಬೇಕು ಎಂಬ ಖಯ್ಯಾಲಿ ಬಿಡಬೇಕು ಎಂದು ಸಲಹೆ ನೀಡಿದರು.

ರಸ್ತೆಗೆ ಹೆಸರಿಡುವ ಬಗ್ಗೆ ಇಷ್ಟೆಲ್ಲಾ ವಿವಾದವಾಗಿದ್ದರೂ ಈ ತನಕ ಸಿದ್ದರಾಮಯ್ಯ ತಮ್ಮ ನಿಲುವು ಸ್ಪಷ್ಟಪಡಿಸಿಲ್ಲ. ರಸ್ತೆಗೆ ನನ್ನ ಹೆಸರಿಡಿ ಅಥವಾ ಇಡಬೇಡಿ ಎಂದು ಒಂದು ಮಾತು ಕೂಡ ಹೇಳದೆ ಜಾಣ ಮೌನವಹಿಸಿದ್ದಾರೆ ಎಂದು ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ನಮ್ಮ-ಜಿ.ಟಿ.ದೇವೇಗೌಡರದು ಗಂಡ ಹೆಂಡತಿ ಜಗಳದಂತೆ...!

ಜನತಾ ದಳ ಹಾಗೂ ಶಾಸಕ ಜಿ.ಟಿ.ದೇವೇಗೌಡರ ನಡುವೆ ಗಂಡ ಹೆಂಡತಿ ಸಂಬಂಧವಿದೆ. ಜಿ.ಟಿ.ದೇವೇಗೌಡರಲ್ಲಿ ಮುನಿಸು ಇದ್ದ ಮಾತ್ರಕ್ಕೆ ಅವರು ಹಾಗೂ ನಮ್ಮ ನಡುವಿನ ಸಂಬಂಧ ಮುರಿಯುವುದಿಲ್ಲ ಎಂದು ಹೆಚ್.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು. ಮನೆ ಅಂದ ಮೇಲೆ ಮುನಿಸು ಇರುವುದು ಸಹಜ. ಗಂಡ ಹೆಂಡತಿ ಜಗಳ ಉಂಡು ಮಲಗುವ ತನಕ ಎಂಬ ಗಾದೆ ಮಾತಿನಂತೆ ನಮ್ಮಲ್ಲಿರುವ ಭಿನ್ನಾಭಿಪ್ರಾಯ ಮುಂದಿನ ದಿನಗಳಲ್ಲಿ ದೂರವಾಗುತ್ತದೆ. ಈ ಮೂಲಕ ಎಲ್ಲವೂ ಸರಿಯಾಗುತ್ತದೆ ಎಂದು ತಿಳಿಸಿದರು.

ಆಯಾ ಸಂದರ್ಭದಲ್ಲಿ ಜಿ.ಟಿ.ದೇವೇಗೌಡರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅಷ್ಟಕ್ಕೆ ಅವರ ಹಾಗೂ ನಮ್ಮ ಸಂಬಂಧ ಮುಗಿಯಿತು ಎಂದರ್ಥವಲ್ಲ ಎಂದರು. ಜಿ.ಟಿ.ದೇವೇಗೌಡರು ಯಾವ ಪಕ್ಷಕ್ಕೂ ಹೋಗುವುದಿಲ್ಲ. ಅವರು ನಮ್ಮ ಜೊತೆಯಲ್ಲೇ ಇದ್ದಾರೆ ಎಂದು ಕುಮಾರಸ್ವಾಮಿ ಹೇಳಿದರು.

ಆಪರೇಷನ್ ಹಸ್ತ ಮಾಮೂಲಿ: ಜೆಡಿಎಸ್ ಶಾಸಕರನ್ನು ಸೆಳೆಯುವ ಕಾಂಗ್ರೆಸ್‌ನವರ ಆಪರೇಷನ್ ಹಸ್ತ ಮಾಮೂಲಿ ಚಟುವಟಿಕೆ. ನಮ್ಮ ಶಾಸಕರ ಮೇಲೆ ಒತ್ತಡ ಹೇರಿ, ಒಗ್ಗಟ್ಟು ಮುರಿಯುವ ಪ್ರಯತ್ನ ಮಾಡುತ್ತಿರುವುದು ಸತ್ಯ. ಆದರೆ ಈ ಕಾರ್ಯತಂತ್ರದಲ್ಲಿ ಅವರು ಯಶಸ್ವಿಯಾಗುವುದಿಲ್ಲ. ನಮ್ಮ 18 ಶಾಸಕರು ಒಗ್ಗಟ್ಟಾಗಿದ್ದೇವೆ. ಯಾವ ಶಾಸಕರೂ ಜೆಡಿಎಸ್ ಬಿಟ್ಟು ಹೋಗುವುದಿಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯಾಧ್ಯಕ್ಷರ ಪ್ರಸ್ತಾಪವೇ ಆಗಿಲ್ಲ: ನಿಖಿಲ್ ಕುಮಾರಸ್ವಾಮಿಗೆ ಜೆಡಿಎಸ್ ರಾಜ್ಯಾಧ್ಯಕ್ಷ ಪಟ್ಟ ಕಟ್ಟಲಾಗುತ್ತಿದೆ ಎಂದು ನಾನು ಎಂದೂ ಅಧಿಕೃತವಾಗಿ ಹೇಳಿಲ್ಲ. ಈ ವಿಚಾರವಾಗಿ ಪಕ್ಷದಲ್ಲಿ ಯಾವುದೇ ಚರ್ಚೆ ಆಗಿಲ್ಲ. ಪಕ್ಷದಲ್ಲಿ ಸಾಂಸ್ಥಿಕ ಚುನಾವಣೆ ನಡೆಯಬೇಕು. ಆಗ ರಾಜ್ಯಾಧ್ಯಕ್ಷರ ಆಯ್ಕೆ ವಿಚಾರ ಮುನ್ನಲೆಗೆ ಬರುತ್ತದೆ ಎಂದು ಸ್ಪಷ್ಟನೆ ನೀಡಿದರು. ಜನವರಿ 12 ರಂದು ನಡೆಯುವ ಪಕ್ಷದ ಸಭೆಯಲ್ಲಿ ಆಂತರಿಕ ಚುನಾವಣೆ ಬಗ್ಗೆ ಚರ್ಚೆ ಮಾಡಲಾಗುವುದು. ಈ ಮೂಲಕ ಪಾರದರ್ಶಕತೆ ಕಾಪಾಡಲಾಗುವುದು ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಮುಂದೆ ಹಾಲು, ನೀರು, ವಿದ್ಯುತ್ ಬೆಲೆ ಹೆಚ್ಚಳ ಗ್ಯಾರಂಟಿ

ಈಗ ಕೆಎಸ್‌ಆರ್‌ಟಿಸಿ ಬಸ್ ದರ ಹೆಚ್ಚಳ ಮಾಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರ ಮುಂದಿನ ದಿನದಲ್ಲಿ ಹಾಲು, ನೀರು, ವಿದ್ಯುತ್ ಸೇರಿದಂತೆ ಹಲವು ಬೆಲೆ ಹೆಚ್ಚಳ ಮಾಡಲಿದೆ ಎಂದು ಹೆಚ್.ಡಿ.ಕುಮಾರಸ್ವಾಮಿ ಎಚ್ಚರಿಸಿದರು.

ದರ ಹೆಚ್ಚಳದಿಂದ ಜನರಿಗೆ ಮಾತ್ರ ತೊಂದರೆ ಆಗುತ್ತಿದೆ. ಆದರೆ ಜನರ ಜೇಬಿಗೆ ಕೈ ಹಾಕಿ ಲೂಟಿ ಮಾಡುತ್ತಿರುವ ಮಂತ್ರಿಗಳು ಸಂಪದ್ಭರಿತರಾಗಿದ್ದಾರೆ. ಈ ಮೂಲಕ ಮಂತ್ರಿಗಳು ಅಭಿವೃದ್ಧಿಯಾಗಿ ಸಂತೋಷದಲ್ಲಿದ್ದಾರೆ. ಸರ್ಕಾರದ ಪ್ರತಿಯೊಂದು ಇಲಾಖೆಯಲ್ಲಿ ಪ್ರತಿಯೊಂದು ಹಂತದಲ್ಲಿಯೂ ಪರ್ಸೆಂಟೇಜ್ ನಿಗದಿಯಾಗಿದೆ ಎಂದು ಆರೋಪಿಸಿದರು. ದಿವಂಗತ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಬಿಟ್ಟರೆ ದೇಶದ ದೊಡ್ಡ ಆರ್ಥಿಕ ತಜ್ಞರೆಂದರೆ ಅದು ಸಿದ್ದರಾಮಯ್ಯ ಮಾತ್ರ. ಅವರ ಸರ್ಕಾರದಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದೆ. ಈ ಕಾರಣಕ್ಕೆ ಬೆಲೆ ಹೆಚ್ಚಳ ಮಾಡುತ್ತಿದ್ದಾರೆ ಎಂದು ಲೇವಡಿ ಮಾಡಿದರು. ಆಶ್ರಯ ಮನೆ ಮಂಜೂರು ಮಾಡುವ ಭ್ರಷ್ಟಾಚಾರ ಸ್ಥಳೀಯವಾಗಿ ನಡೆಯುತ್ತಿತ್ತು. ಆದರೆ ಈಗ ವಿಧಾನಸೌಧದಲ್ಲೇ ನಡೆಯುತ್ತಿದೆ. ಒಂದು ಆಶ್ರಯ ಮನೆ ಮಂಜೂರು ಮಾಡಲು 12 ಸಾವಿರ ರೂಪಾಯಿ ಲಂಚ ಪಡೆಯುತ್ತಿದ್ದಾರೆ ಎಂದು ಆಪಾದಿಸಿದರು.

ಐದು ವರ್ಷಗಳ ಕಾಲ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಾರಲ್ಲ ಎಂಬ ಪ್ರಶ್ನೆಗೆ ಪತ್ರಿಕ್ರಿಯೆ ನೀಡಿದ ಕುಮಾರಸ್ವಾಮಿ, ಇದು ಅವರ ಪಕ್ಷದ ಆಂತರಿಕ ವಿಚಾರ. ಆ ಎಲ್ಲಾ ಬೆಳವಣಿಗೆಯನ್ನು ನಾವು ಸುಮ್ಮನೆ ಗಮನಿಸುತ್ತೇವೆ ಅಷ್ಟೆ ಎಂದು ಕುಮಾರಸ್ವಾಮಿ ಸ್ಪಷ್ಟನೆ ನೀಡಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಭೂಮಿಯೊಳಗೆ ಲಾವಾ ಇದ್ದರೆ ಭೂಮಿಯ ಹೊರಗೆ ಏನಿದೆ?

ಗುಂಡ : ವಿವೋ, ಒಪ್ಪೊ, ಸ್ಯಾಮ್‌ಸಂಗ್, ಒನ್ ಪ್ಲಸ್...

ಮೈಸೂರು ಮಿತ್ರ

ಭಾನುವಾರ, 5 ಜನವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಸ್ನೇಹ, ಸೌಜನ್ಯದಿಂದ ಮನುಷ್ಯನನ್ನು ಗೆಲ್ಲಬಹುದೇ ಹೊರತು ಬರಿಯ ಶಕ್ತಿಯಿಂದಲ್ಲ. –ಅರಿಸ್ಟಾಟಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉಗಮವಾಗದಿರಲಿ ಹಿಂಸೆ, ಹೆಚ್ಚಿಗೆಯಾಗದಿರಲಿ ಆಸೆ

ನಿಮ್ಮ ಪತ್ರಗಳು

■ ಜನವರಿ ಅಂದರೆ ಜನರಿಗೆ ವರಿ ತರುವುದೇ?

ಮಾನ್ಯರೇ,

ಕೆಲ ಮಾಧ್ಯಮಗಳಲ್ಲಿ ಈಗಾಗಲೇ ಸರ್ಕಾರ ಸಾರಿಗೆ, ಹಾಲು, ನೀರು ಮತ್ತು ವಿದ್ಯುತ್ ಬೆಲೆ ಏರಿಸಲು ಹೊರಟಿರುವುದು ಜನಸಾಮಾನ್ಯರಿಗೆ ಹೊಸ ವರ್ಷಕ್ಕೆ ಆತಂಕ ತಂದೊಡ್ಡಿದೆ. ಕೆಲವೇ ತಿಂಗಳ ಹಿಂದೆಯೇ ಕರ್ನಾಟಕ ಹಾಲು ಮಹಾ ಮಂಡಳಿ ಪ್ರತಿ ಹಾಲಿನ ಪ್ಯಾಕೆಟ್ಟಿಗೆ ಎರಡು ರೂ.ಗಳನ್ನು ಹೆಚ್ಚಿಸಿ ಅಲ್ಪ ಹಾಲನ್ನು ಜಾಸ್ತಿ ಎಂದು ಬಡಾಯಿ ಕೊಚ್ಚಿಕೊಂಡಿತ್ತು. ಇದೀಗ ಈ ಬರೆಯ ಮೇಲೆ ಮತ್ತೆ ಐದು ರೂಗಳನ್ನು ಲೀಟರಿಗೆ ಹೆಚ್ಚಿಸುತ್ತಿರುವುದು ನಿಜಕ್ಕೂ ಶೋಚನೀಯ.

ಇನ್ನು ಸಾರಿಗೆ ಇಲಾಖೆ ಕೂಡಾ ಬಿಎಂಟಿಸಿ ಹಾಗೂ ಇತರೆ ವಿಭಾಗಗಳ ಬಸ್‌ಗಳ ದರವನ್ನು ಶೇ 15 ರಷ್ಟು ಹೆಚ್ಚಿಸುತ್ತಿದೆಯಂತೆ. ಜೊತೆಗೆ ಬೆಂಗಳೂರು ನಗರ ಪಾಲಿಕೆಯು ನೀರಿನ ದರವನ್ನು ಮತ್ತು ಎಸ್ಕಾಂಗಳು ವಿದ್ಯುತ್ ದರವನ್ನು ಹೆಚ್ಚಿಸಲು ಪ್ರಸ್ತಾವನೆ ನೀಡಿದೆ. ಇವೆಲ್ಲವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಶಕ್ತಿ ಯೋಜನೆಗಳನ್ನು ನೀಡಿದ ಸರ್ಕಾರ ನಿಶ್ಯಕ್ತಗೊಂಡು ಇದೀಗ ಅದನ್ನು ಸರಿದೂಗಿಸಲು ಜನರ ಮೇಲೆ ದರ ಏರಿಕೆಯ ಗದಾಪ್ರಹಾರ ನಡೆಸಲು ಹೊರಟಿದೆ. ಬಿಟ್ಟಿ ಬಸ್ ಭಾಗ್ಯ ನೀಡಿದ ಸಾರಿಗೆ ಇಲಾಖೆಯಲ್ಲಿ ವೇತನಕ್ಕಾಗಿ 2000 ಕೋಟಿ ರೂಗಳ ಸಾಲ, ಪುಕ್ಕಟೆ ನೀಡಿದ ವಿದ್ಯುತ್‌ಗಾಗಿ ಪ್ರತಿ ಯೂನಿಟ್ ದರ ಹೆಚ್ಚಳ, ಹಾಲಿನ ಪ್ರೋತ್ಸಾಹ ಧನ ನೀಡಲು ಹಣವಿಲ್ಲದೆ ಉತ್ಪಾದಕರಿಗೆ ಹಣ ಉಳಿಸಿಕೊಂಡಿದ್ದು, ಅದನ್ನು ನೀಡಲು ಹಾಲಿನ ದರ ಹೆಚ್ಚಳ ಮತ್ತು ನೀರಿನ ದರ ಹೆಚ್ಚಳ. ಇದು ಇಷ್ಟಕ್ಕೆ ನಿಲ್ಲುವುದಿಲ್ಲ. ಇನ್ನು ಹೋಟೆಲ್‌ನವರು ಬಿಟ್ಟಾರೆಯೇ, ಕಾಫಿ ತಿಂಡಿ ದರ ಹೆಚ್ಚಳ ಮಾಡುತ್ತಾರೆ. ಕೈಗಾರಿಕೆಗಳು ತಮ್ಮ ಉತ್ಪನ್ನಗಳ ದರ ಹೆಚ್ಚಳ ಮಾಡುತ್ತಾರೆ. ಹೀಗೆ ದರ ಏರಿಕೆಯ ಸರಪಳಿ ಜನಸಾಮಾನ್ಯರ ಬದುಕಿಗೆ ಕೊಳ್ಳಿ ಇಡುವುದರಲ್ಲಿ ಸಂದೇಹವೇ ಇಲ್ಲ. ಕೇವಲ ಒಂದು ವರ್ಗದ ಜನರಿಗಾಗಿ ಮತ ಗಳಿಕೆಗಾಗಿ ಬಿಟ್ಟಿ ಬಸ್, ವಿದ್ಯುತ್, ಮತ್ತಿತರ ಭಾಗ್ಯ ನೀಡಿದ ಸರ್ಕಾರ ಅವುಗಳನ್ನು ಸರಿದೂಗಿಸಲು ಎಲ್ಲ ವರ್ಗಗಳ ಮೇಲೆ ಬೆಲೆ ಏರಿಕೆ ಎಂಬ ಗದಾ ಪ್ರಹಾರ ನಡೆಸುತ್ತಿರುವುದು ನಿಜಕ್ಕೂ ಖಂಡನೀಯ. ಈ ಬಗ್ಗೆ ವಿಪಕ್ಷಗಳು ಚಕಾರವೆತ್ತದೆ ತಮ್ಮ ತಮ್ಮಲ್ಲಿಯೇ ಕೆಲಸಕ್ಕೆ ಬಾರದ ವಿಷಯಗಳಿಗೆ ಬಡಿದಾಡಿಕೊಳ್ಳುತ್ತಿರುವುದನ್ನು ನೋಡಿದರೆ ಅಸಹ್ಯ ಮತ್ತು ವಾಕರಿಕೆ ಬರುತ್ತದೆ. ಒಟ್ಟಾರೆ ಜನವರಿ ಅಂದರೆ ಜನರಿಗೆ worry ತರುವುದೇ ಆಗಿದೆ ಎಂದರೆ ತಪ್ಪಾಗಲಾರದು.

–ವಿಜಯ್ ಹೆಮ್ಮಿಗೆ, ಮೈಸೂರು

■ ಹೆಂಡತಿಗೆ ಫ್ರೀ, ಗಂಡನಿಗೆ 15% ಬರೆ

ಮಾನ್ಯರೆ,

ಹೆಂಗಸರಿಗೆ ಫ್ರೀ ಕೊಟ್ಟು, ಗಂಡಸರಿಗೆ 15 ಪರ್ಸೆಂಟ್ ಬಸ್ ಪ್ರಯಾಣ ದರ ಹೆಚ್ಚಳ ಮಾಡಿರುವ ಸರ್ಕಾರಕ್ಕೆ ಖಂಡಿತವಾಗಿಯೂ ನಾಚಿಕೆ ಆಗಬೇಕು, ಏಕೆಂದರೆ ಫ್ರೀ ಕೊಡುವ ಸರ್ಕಾರ ಎಂದಿಗೂ ಶಾಶ್ವತವಾಗಿ ಉಳಿಯುವುದಿಲ್ಲ. ಏಕೆಂದರೆ ಒಬ್ಬರು ಒಬ್ಬರಿಗೆ ಫ್ರೀ ಕೊಡುವುದು ಎಂದಿಗೂ ಮೋಸದ ಕೆಲಸವೇ ಸರಿ ಮತ್ತು ಒಬ್ಬರಿಂದ ಕಿತ್ತುಕೊಂಡು ಮತ್ತೊಬ್ಬರಿಗೆ ಕೊಡುವುದರಿಂದ ಜನಸಾಮಾನ್ಯರಿಗೆ ಯಾವ ರೀತಿಯ ಸಂದೇಶ ರವಾನೆ ಆಗುತ್ತದೆ ಎಂದು ತಿಳಿದಿಲ್ಲ. ಏಕೆಂದರೆ ಇವರು ಕೊಡುತ್ತಿರುವ ಹಣ ಅಥವಾ ಯೋಜನೆಗಳು ಇವರ ಮನೆಯ ದುಡ್ಡು ಅಂತೂ ಅಲ್ಲ. ಎಲ್ಲಾ ಜನಸಾಮಾನ್ಯರು ಕಟ್ಟುತ್ತಿರುವ ತೆರಿಗೆಯ ಹಣದಿಂದ ಮಾತ್ರ ಸಾಧ್ಯ ಎನ್ನುವುದನ್ನು ಸರ್ಕಾರ ಮರೆತಿದೆ ಎಂದು ಹೇಳಲು ಇಚ್ಛಿಸುತ್ತೇನೆ ಹಾಗೂ ಈ ಸರ್ಕಾರ ಬಂದಾಗಿನಿಂದ ಯಾರಿಗೂ ಒಳ್ಳೆಯದು ಆಗಿರುವುದನ್ನು ನೋಡೇ ಇಲ್ಲ. ಆದ್ದರಿಂದ ದಯವಿಟ್ಟು ಎಲ್ಲಾ ಪ್ರಯೋಜನಗಳನ್ನು ಬಂದ್ ಮಾಡಿ ಜನಸಾಮಾನ್ಯರಿಗೆ ಬೇಕಾಗಿರುವ ದಿನನಿತ್ಯ ಬಳಸುವ ಪದಾರ್ಥಗಳ ಬೆಲೆಯನ್ನು ಹಾಗೂ ಪದಾರ್ಥಗಳ ತೆರಿಗೆ ಹಣಗಳನ್ನು ಕಡಿಮೆ ಮಾಡಿ ಜನ ಸಾಮಾನ್ಯರಿಗೆ ಅನುಕೂಲ ಮಾಡಿಕೊಡಬೇಕೆಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

–ಪ್ರಕಾಶ್ ಬಿ (ಚೋರನಹಳ್ಳಿ), ಮೈಸೂರು ತಾ.

■ ಕೆಇಎ ನಡುವೆ ಕೆಪಿಎಸ್ಸಿ ಮಾತ್ರ ಹೀಗೇಕೆ

ಮಾನ್ಯರೆ,

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) 2024ನೇ ಸಾಲಿನಲ್ಲಿ ಸುಮಾರು 17 ಪರೀಕ್ಷೆಗಳನ್ನು ಆಯೋಜಿಸಿ 20 ಲಕ್ಷಕ್ಕೂ ಹೆಚ್ಚು ಅರ್ಜಿಗಳ ನಿರ್ವಹಣೆಯೊಂದಿಗೆ ಸುಮಾರು 6 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿರುವ ಬಗ್ಗೆ ದಿನಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಕೆಇಎ ಅಭಿನಂದನೆಗೆ ಅರ್ಹ.

ಯಾವೊಂದು ವಿವಾದವಿಲ್ಲದೆ ಪರೀಕ್ಷೆ ಆಯೋಜಿಸಿ ಅಂಕಗಳನ್ನು ಪ್ರಕಟಿಸಿ ತದನಂತರ ಫಲಿತಾಂಶ, ಆಯ್ಕೆ ಪ್ರಕ್ರಿಯೆ ಸುಗಮವಾಗಿ ನಡೆಸುವ ಕೆಇಎಗೆ ಸಾಧ್ಯವಾಗುವುದು ಕೆಪಿಎಸ್ಸಿಗೆ ಮಾತ್ರ ಸಾಧ್ಯವಾಗುತ್ತಿಲ್ಲವೇಕೆ?

ಕೆಪಿಎಸ್ಸಿ ಆಯೋಗ ಈಗಾಗಲೇ, ನಡೆಸಿರುವ ಪರೀಕ್ಷೆಗಳ ಫಲಿತಾಂಶವನ್ನೇ ಬಿಡಲು ಸಾಧ್ಯವಾಗುತ್ತಿಲ್ಲ. ಇತ್ತ, ಹೊಸ ಪರೀಕ್ಷೆಗಳನ್ನು ಸರಿಯಾಗಿ ನಡೆಸಲು ಆಗುತ್ತಿಲ್ಲ. ಈ ನಡುವೆ ಬಲಿಪಶು ಆಗುತ್ತಿರುವುದು ಮಾತ್ರ ಅಭ್ಯರ್ಥಿಗಳು. ಮೊನ್ನೆ ತಾನೆ ನಡೆದ ಕೆಎಎಸ್ ಮರು ಪರೀಕ್ಷೆಯಲ್ಲಿ ಕೇಳಲಾದ ಪ್ರಶ್ನೆಗಳು ಕೂಡ ಅರ್ಥಹೀನ. ತೀರಾನೇ ಭಾಷಾಂತರ ಲೋಪವಾಗಿದೆ.

ಇದಕ್ಕೆಲ್ಲಾ ಕೊನೆ ಎಂದು? ಪ್ರತಿ ಬಾರಿಯೂ ನಾನಾ ರೀತಿ ತಪ್ಪುಗಳು ಪುನರಾವರ್ತನೆಯಾಗುತ್ತಿದ್ದು, ಸಹಜವಾಗಿ ಅಭ್ಯರ್ಥಿಗಳಿಗೆ ಕೆಪಿಎಸ್ಸಿ ಮೇಲೆ ಅಸಮಾಧಾನ ಉಂಟಾಗಿದೆ. ಬಹುತೇಕ ಸರ್ಕಾರದ ನೇಮಕಾತಿಗಳ ಪರೀಕ್ಷಾ ಹೊಣೆ ಕೆಪಿಎಸ್ಸಿಗೆ ಸಿಗುತ್ತಿರುವುದು ಅವರ ಕಾರ್ಯ ನಿರ್ವಹಣೆ ಬಗ್ಗೆ ಆಗಾಗ ಆಕ್ಷೇಪಾರ್ಹ ಖಂಡನೆ ವ್ಯಕ್ತವಾಗುತ್ತವೆ. ಹೀಗಿದ್ದರೂ ಕೆಪಿಎಸ್ಸಿ ಇನ್ನೂ ಸುಧಾರಣೆ ಆಗದೆ ಇರುವುದು ನಾಚಿಕೆಗೇಡು. ಕರ್ನಾಟಕ ಸರ್ಕಾರದ ಸುಪರ್ದಿಯಲ್ಲಿರುವ ಕೆಪಿಎಸ್ಸಿ ಆಯೋಗ ಕಳೆದ 4 ದಶಕಗಳಿಂದಲೂ ಪದೇ ಪದೆ ಜನರ ನಂಬಿಕೆ ಕಳೆದುಕೊಳ್ಳುತ್ತಿದ್ದು, ಕೆಪಿಎಸ್ಸಿಯನ್ನು ರದ್ದು ಮಾಡಿ ಜಂಟಿ ಲೋಕಸೇವಾ ಆಯೋಗ ರಚಿಸಿದರೆ ಉತ್ತಮ.

ಸದ್ಯ ಒಂದಿಷ್ಟು ಸಮಾಧಾನಕರ ಸಂಗತಿ ಎಂದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಪರೀಕ್ಷೆಗಳನ್ನು ಯಾವೊಂದು ಕಪ್ಪು ಚುಕ್ಕೆ ಇಲ್ಲದಂತೆ ಅಚ್ಚುಕಟ್ಟಾಗಿ ನಡೆಸುತ್ತಿದೆ. ಕೆಪಿಎಸ್ಸಿ ಇವರನ್ನು ನೋಡಿ ಕಲಿಯಬೇಕು. ರಾಜ್ಯದಲ್ಲಿ ಅಧಿಕಾರದಲ್ಲಿ ಯಾವುದೇ ಸರ್ಕಾರವಿದ್ದರೂ ಕೆಪಿಎಸ್ಸಿ ಭ್ರಷ್ಟಾಚಾರ, ಪಕ್ಷಪಾತ, ಲಂಚ, ರಾಜಕಾರಣಿಗಳ ಪ್ರಭಾವ ತಡೆಯಲು ಸಾಧ್ಯವಾಗದೆ ಇರುವುದು ಬಿಲಿಯನ್ ಡಾಲರ್ ಪ್ರಶ್ನೆ

– ಅನಿಲ್ ಕುಮಾರ್, ನಂಜನಗೂಡು.



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಭಾರತೀಯತೆಯ ಹಿಂದೆ ಸಾಗುತ್ತಾ...

“ ನಮ್ಮ ಸಂಸ್ಕೃತಿಯ, ಪರಂಪರೆಯ, ಇತಿಹಾಸದ ಮಹತ್ವವನ್ನು ಯುವ ಮನಸುಗಳಿಗೆ ರವಾನಿಸುವುದರಲ್ಲಿ ನಾವು ಎಡವುತ್ತಿದ್ದೇವೆ. ನಮ್ಮ ಆಚರಣೆಗಳ ಮಹತ್ವವನ್ನು ನಾವು ಸರಿಯಾಗಿ, ಅವರ ಮನಸಿಗೆ ನಾಟುವಂತೆ ತಿಳಿಯಪಡಿಸಿದ್ದರೆ, ಯುವಕರು ಮತ್ಯಾರದೋ ಸಂಸ್ಕೃತಿ, ಆಚರಣೆ ಇತ್ಯಾದಿಗಳ ಕಡೆಗೆ ಏಕೆ ಆಕರ್ಷಿತರಾಗುತ್ತಿದ್ದರು. ನಮ್ಮ ಸಂಸ್ಕೃತಿಯಿಂದ ಯುವ ಪೀಳಿಗೆ ದೂರ ಸರಿಯುತ್ತಿದ್ದಾರೆಂದು ದೂರುವ ಬದಲು, ನಮ್ಮ ಆಚರಣೆಗಳ ಮಹತ್ವವನ್ನು, ಅವುಗಳ ವೈಶಾಲ್ಯತೆಯನ್ನು, ವೈಜ್ಞಾನಿಕ ಆಧಾರವನ್ನು, ನಮ್ಮ ಪೂರ್ವಿಕರ ಬುದ್ಧಿಮತ್ತೆಯನ್ನು ಮಕ್ಕಳಿಗೆ ಮನದಟ್ಟು ಮಾಡಿಸೋಣ. ಅದಕ್ಕೆ ಮೊದಲು, ನಾವು ಅವುಗಳ ಸರಿಯಾದ ಅರ್ಥವನ್ನು ತಿಳಿಯಬೇಕಾದುದು ಅತ್ಯವಶ್ಯಕ ಅಲ್ಲವೇ?



ಫೈಲ್ ಚಿತ್ರ

ಧನುರ್ಮಾಸದ ಚಳಿಯೊಡನೆ 2025ನೆಯ ವರುಷ ಆರಂಭವಾಗಿದೆ. ವಾಟ್ಸ್ಯಾಪ್, ಫೇಸ್ ಬುಕ್ ಮತ್ತಿತರ ಸಾಮಾಜಿಕ ಮಾಧ್ಯಮಗಳಲ್ಲಿ ಶುಭಾಶಯಗಳ ಸುರಿಮಳೆ. ಈ ರೆಡಿಮೇಡ್ ಸಂದೇಶಗಳನ್ನು ಬಳಸಬೇಡಿ, ಇಂತಹ ನಕಲಿ ಸಂದೇಶ ವಾಹಕರಿಂದ ನಿಮ್ಮ ಖಾಸಗಿ ವಿಚಾರಗಳು, ಬ್ಯಾಂಕ್ ಅಕೌಂಟ್ ಮತ್ತಿತರ ಮಾಹಿತಿಗಳು ಹ್ಯಾಕ್ ಆಗಬಹುದೆಂದು ಎಷ್ಟೇ ಎಚ್ಚರಿಕೆ ನೀಡಿದರೂ ಅದನ್ನು ಗಾಳಿಗೆ ತೂರಿ, ಸಂದೇಶಗಳ ಮಹಾಪೂರವನ್ನು ಹರಿಸುವುದು ಕೆಲವರಿಗೆ ಖುಷಿಯ ವಿಚಾರ. ಯುವಕ–ಯುವತಿಯರಿಗಂತೂ ತಡೆಯಲಾಗದ ಸಂಭ್ರಮ. ತಡರಾತ್ರಿಯವರೆಗೂ ಆಹಾರ, ಪಾನೀಯ ಹಾಡು ನೃತ್ಯಗಳ ಹೆಸರಿನಲ್ಲಿ ಸ್ವೇಚ್ಛಾ ವಿಹಾರ. ಇದಕ್ಕಾಗಿಯೇ ಅತ್ಯಾಧುನಿಕವಾಗಿ ಸಿಂಗಾರಗೊಂಡ ಹೋಟೆಲ್‌ಗಳು, ರೆಸಾರ್ಟ್‌ಗಳು, ಇತ್ತೀಚೆಗೆ ಅಪಾರ್ಟ್‌ಮೆಂಟುಗಳೂ ಈ ಪದ್ಧತಿಯನ್ನು ಅನುಕರಿಸಲಾರಂಭಿಸಿವೆ. ಮರುದಿನ, ಕುಡಿದು ಡ್ರೈವ್ ಮಾಡುತ್ತಿದ್ದ ಯುವಕರ ಅಪಘಾತ, ಸಾವು ಇತ್ಯಾದಿಗಳ ಸುದ್ದಿಯನ್ನು ಓದುವುದು ಮಾಮೂಲು. ಇದು ಪ್ರತಿ ವರುಷವೂ ನಾವು ನೋಡುವ, ಕೇಳುವ ವಿದ್ಯಮಾನಗಳು. ಇದರ ನಡುವೆ ಅಲ್ಲಲ್ಲಿ ಕ್ಷೀಣವಾಗಿ ಕಾಣಿಸಿಕೊಳ್ಳುವ ಇದು ನಮ್ಮ ಹೊಸ ವರುಷ ಅಲ್ಲ. ಯುಗಾದಿಯು ನಮಗೆ ಹೊಸ ವರುಷ ಎಂಬ ಸಂದೇಶಗಳು.

ನನಗೆ ಅನಿಸುವುದೆಂದರೆ, ನಮ್ಮ ಸಂಸ್ಕೃತಿಯ, ಪರಂಪರೆಯ, ಇತಿಹಾಸದ ಮಹತ್ವವನ್ನು ಯುವ ಮನಸುಗಳಿಗೆ ರವಾನಿಸುವುದರಲ್ಲಿ ನಾವು ಎಡವುತ್ತಿದ್ದೇವೆ ಎಂದು. ನಮ್ಮ ಆಚರಣೆಗಳ ಮಹತ್ವವನ್ನು ನಾವು ಸರಿಯಾಗಿ, ಅವರ ಮನಸಿಗೆ ನಾಟುವಂತೆ ತಿಳಿಯಪಡಿಸಿದ್ದರೆ, ಯುವಕರು ಮತ್ಯಾರದೋ ಸಂಸ್ಕೃತಿ, ಆಚರಣೆ ಇತ್ಯಾದಿಗಳ ಕಡೆಗೆ ಏಕೆ ಆಕರ್ಷಿತರಾಗುತ್ತಿದ್ದರು ನಮ್ಮ ಸಂಸ್ಕೃತಿಯಿಂದ ಯುವಪೀಳಿಗೆ ದೂರ ಸರಿಯುತ್ತಿದ್ದಾರೆಂದು ದೂರುವ ಬದಲು, ನಮ್ಮ ಆಚರಣೆಗಳ ಮಹತ್ವವನ್ನು, ಅವುಗಳ ವೈಶಾಲ್ಯತೆಯನ್ನು, ವೈಜ್ಞಾನಿಕ ಆಧಾರವನ್ನು, ನಮ್ಮ ಪೂರ್ವಿಕರ ಬುದ್ಧಿಮತ್ತೆಯನ್ನು ಮಕ್ಕಳಿಗೆ ಮನದಟ್ಟು ಮಾಡಿಸೋಣ. ಅದಕ್ಕೆ ಮೊದಲು, ನಾವು ಅವುಗಳ ಸರಿಯಾದ ಅರ್ಥವನ್ನು ತಿಳಿಯಬೇಕಾದುದು ಅತ್ಯವಶ್ಯಕ ಅಲ್ಲವೇ? ಮೊತ್ತ ಮೊದಲಿಗೆ ನಮ್ಮ ಪೂರ್ವಿಕರು ಮಾಡಿರುವ ಪ್ರತಿಯೊಂದು ಆಚರಣೆ ಇರಬಹುದು, ಪುರಾಣಗಳಿರಬಹುದು, ಕಟ್ಟಿಕೊಟ್ಟಿರುವ ಸಂಪ್ರದಾಯಗಳಿರಬಹುದು, ಮಹಾಕಾವ್ಯಗಳಲ್ಲಿ ಬರುವ ವಿಚಾರಗಳಿರಬಹುದು ಎಲ್ಲವೂ ಸಾಂಕೇತಿಕ ಎಂಬುದನ್ನು ನಾವು ಅರಿತರೆ, ಅದರೊಳಗೆ ಅಡಗಿರುವ ಮಹತ್ತನ್ನು ಅರ್ಥಮಾಡಿಕೊಳ್ಳುವುದು ಸುಲಭವಷ್ಟೇ ಅಲ್ಲ, ಅದು ಮತ್ತಷ್ಟು ಅರ್ಥಗರ್ಭಿತ ಎನಿಸುವುದರಲ್ಲಿ ಅನುಮಾನವಿಲ್ಲ. ಇದೆಲ್ಲವನ್ನೂ ಇದಮಿತ್ಥಂ ಎಂದು ತಿಳಿಸಲು, ನಾನೇನು ಮಹಾ ಪಂಡಿತೆ ಖಂಡಿತಾ ಅಲ್ಲ. ನನ್ನ ಗುರುಗಳಿಂದ, ಹಿರಿಯರಿಂದ ಕೇಳಿದ್ದನ್ನು ನಿಮ್ಮೊಡನೆ ಹಂಚಿಕೊಳ್ಳಬಹುದಲ್ಲ?

ಉದಾಹರಣೆಗೆ ನಮ್ಮ ವಾರಗಳ ಹೆಸರು. ಅದನ್ನು ಭಾನುವಾರ ಸೋಮವಾರ ಇತ್ಯಾದಿಯಾಗಿಯೇ ಏಕೆ ಹೆಸರಿಸಿದರು. ನಮ್ಮಲ್ಲಿ ಏಳು ಗ್ರಹಗಳನ್ನು ಮುಖ್ಯ ಎಂದು ಭಾವಿಸುತ್ತೇವೆ. ಅವು ತಮ್ಮ ಆಡಳಿತದ ಸಮಯವನ್ನು ನಿಗದಿಪಡಿಸಿಕೊಂಡಿವೆ. (ರಾಹು ಮತ್ತು ಕೇತುಗಳನ್ನು ಛಾಯಾಗ್ರಹಗಳೆಂದು ಪರಿಗಣಿಸಲಾಗುತ್ತದೆ.) ಅವುಗಳ ಓರಾ ಅಥವಾ ಕಾಲದಲ್ಲಿ ಅಥವಾ ಅವರ ಪ್ರಾಬಲ್ಯವು 24 ಗಂಟೆಗಳು ಇರುವಾಗ ಬೆಳಗಾಗುವುದರಿಂದ ಅವುಗಳಿಗೆ ಆಯಾ ಗ್ರಹಗಳ ಹೆಸರನ್ನು ಸೇರಿಸಿ, ಅಂದಿನ ವಾರದ ದಿನಗಳನ್ನು ಕರೆಯಲಾಗಿದೆ ಅಥವಾ ಹೆಸರಿಸಲಾಗಿದೆ ಎಂಬುದು ಅದೆಷ್ಟು ಅರ್ಥಪೂರ್ಣ! ಉದಾ–ಸೂರ್ಯನು ಓರೆಯಲ್ಲಿ ಬೆಳಗಾಗುವುದರಿಂದ ಅದು ಭಾನುವಾರ ಆಗಿದೆ.

ಸೂರ್ಯನ ಗತಿಯು ಉತ್ತರಾಯಣದಿಂದ ಪ್ರಾರಂಭವಾಗತಕ್ಕದ್ದು. ಉತ್ತರಾಯಣವನ್ನು ಹಗಲು ಎಂದೂ, ದಕ್ಷಿಣಾಯನವನ್ನು ರಾತ್ರಿ ಎಂದೂ ಪರಿಭಾವಿಸುವುದರಿಂದ ಉತ್ತರಾಯಣವು ದಕ್ಷಿಣಾಯನಕ್ಕಿಂತಲೂ ಉತ್ತಮ ಎಂದು ಭಾವಿಸಲ್ಪಟ್ಟಿದೆ. ಹಗಲು ಪ್ರಾರಂಭದ ಸೂಚನೆಯಾದರೆ, ರಾತ್ರಿಯು ಮುಕ್ತಾಯದ ಸೂಚನೆ. ಯುಗದ (ವರುಷದ) ಆದಿಯು ಹಗಲಿನಲ್ಲಿ ಪ್ರಾರಂಭವಾಗುತ್ತದೆ. ಸೂರ್ಯನ ಚಲನೆಗೆ ಅನುಗುಣವಾಗಿ ಎಲ್ಲೆಡೆಯು ಹೊಸತನ ಇರುತ್ತದೆ. ಹೊಸ ಫಸಲಿನಿಂದ ಭೂತಾಯಿ ನಳನಳಿಸುತ್ತಿರುತ್ತಾಳೆ. ಯಾವುದೋ ಒಂದು ವ್ಯಕ್ತಿಯ ಹೆಸರಿನಿಂದ (ಅವನು ಎಷ್ಟೇ ದೊಡ್ಡವನಿರಲಿ)ನಾವು ಹೊಸ ವರ್ಷದ ಆಚರಣೆ ಮಾಡುವುದಿಲ್ಲ. ಸ್ವಾಭಾವಿಕವಾಗಿ ಜಗತ್ತಿನಲ್ಲಿ ಯಾವ ರೀತಿಯಾದ ಗತಿ ಇದೆಯೋ ಅದನ್ನು ಪರಿಗಣಿಸಿ ಯುಗದ ಆದಿಯನ್ನು ಸಂಭ್ರಮಿಸುತ್ತೇವೆ. ಜಗತ್ತನ್ನೇ ನಡೆಸುವ ಪ್ರಕೃತಿಯ ಎದುರು, ವ್ಯಕ್ತಿಯು ಬಹಳ ಚಿಕ್ಕವನಾಗಿಬಿಡುತ್ತಾನೆ. ಇದು ನಮ್ಮ ಸಂಸ್ಕೃತಿ, ನಮ್ಮ ಆಲೋಚನಾ ಪರಿ. ಪ್ರಕೃತಿಯನ್ನ ಅನುಸರಿಸಿಯೇ ಅದರ ಆಗುಹೋಗುಗಳನ್ನು ಹೆಸರಿಸುವ ಪದ್ಧತಿಗೆ ಮತ್ತೊಂದು ಉದಾಹರಣೆಯೆಂದರೆ, ನಮ್ಮ ಮಾಸ ಅಥವಾ ತಿಂಗಳುಗಳು. ಚೈತ್ರ, ವೈಶಾಖ ಇತ್ಯಾದಿಗಳಿಗೆ ಆಯಾ ಹೆಸರುಗಳು ಬರಲು ಕಾರಣವೆಂದರೆ, ಅವು ಆಯಾ ನಕ್ಷತ್ರಗಳಲ್ಲಿಯೇ ಪ್ರಾರಂಭವಾಗಿ, ತಿಂಗಳು ಪೂರ್ತಿ ಇರುವುದು.

ನಮ್ಮ ಪೂರ್ವಿಕರು ನಿರ್ಮಿಸಿದ ದೇವಸ್ಥಾನಗಳು ಕೇವಲ ಪೂಜೆ–ನಮಸ್ಕಾರಗಳಿಗಾಗಿ ಕಟ್ಟಿಸಿದುವಲ್ಲ, ಅವು ನಿಜವಾದ ಅರ್ಥದಲ್ಲಿ ಕಲಿಕಾ ಕೇಂದ್ರಗಳು. ನಮ್ಮ ರಾಮಾಯಣ ಮಹಾಭಾರತಗಳೂ ಸಹ ತತ್ವವನ್ನು ಆಧರಿಸಿರುವಂತಹವು. ಅವುಗಳನ್ನು ಗುಡಿಗಳ ಶಿಲ್ಪಗಳಲ್ಲಿ ಕೆತ್ತುವುದರ ಮೂಲಕ ಅದನ್ನು ಸ್ಥಿರಗೊಳಿಸಿದ್ದಾರೆ. ಅದರಲ್ಲಿ ಅಡಕವಾಗಿರುವ (ಸಂಖ್ಯಾ ಶಾಸ್ತ್ರ, ತರ್ಕಶಾಸ್ತ್ರ, ಧನುರ್‌ವೇದ ಇತ್ಯಾದಿ) ಸಂಕೇತಗಳನ್ನು ನಾವು ಅರ್ಥಮಾಡಿಕೊಳ್ಳಬೇಕು ಅಷ್ಟೇ. ಉದಾಹರಣೆಗೆ ಆ ಶಿಲ್ಪದಲ್ಲಿ ಯಾಗ–ಯಜ್ಞದ ಸನ್ನಿವೇಶವನ್ನು ಕೆತ್ತಲಾಗಿದೆ ಎಂದಿಟ್ಟುಕೊಳ್ಳೋಣ. ಅದು ಚಿಕ್ಕದೋ, ದೊಡ್ಡದೋ, ಅದಕ್ಕೆ ಬಳಸಿರುವ ದ್ರವ್ಯ ಯಾವುದೋ, ಅದು ಮನುಷ್ಯರಿಗಾಗಿ ಮಾಡಿದುದೋ, ದೇವತೆಗಳಿಗಾಗಿ ಮಾಡಿರುವುದೋ ಅಥವಾ ದೋಷ ಪರಿಹಾರಾರ್ಥವಾಗಿ ಮಾಡಿರುವುದೋ ಎಂಬಿತ್ಯಾದಿ ವಿವರಗಳು ನಮಗೆ ಗೊತ್ತಿದ್ದಲ್ಲಿ, ಆ ಶಿಲ್ಪವನ್ನು ಅರ್ಥಮಾಡಿಕೊಳ್ಳಲು ಸುಲಭವಾಗುತ್ತದೆ. ಇಲ್ಲವಾದಲ್ಲಿ ಸಾಮಾನ್ಯ ನೋಟಕರಾಗಿಬಿಡುತ್ತೇವೆ.

ಸೂರ್ಯನ ಕಿರಣಗಳಲ್ಲಿ ಇರುವ ಉಷ್ಣತೆ ಮತ್ತು ಪ್ರಕಾಶದ ಜೊತೆಗೇ ವಿದ್ಯುಚ್ಛಕ್ತಿಯೂ ಇದ್ದು, ಇದನ್ನು ವಿವಿಧ ಯಂತ್ರಗಳ ಮೂಲಕ ಪಡೆಯಬಹುದು ಎಂಬ ವಿಷಯವನ್ನು ತಿಳಿಸುವ ಗ್ರಂಥ ಒಂದನ್ನು ನಮ್ಮ ಋಷಿಗಳು ರಚಿಸಿದ್ದರೆಂಬುದು ಬಹಳ ಕುತೂಹಲಕಾರೀ ವಿಷಯವಲ್ಲವೇ. ಭರದ್ವಾಜರು ರಚಿಸಿದ, ಹನ್ನೆರಡು ಅಧ್ಯಾಯಗಳ, ಅಂಶುಬೋಧಿನೀ ಎಂಬ ಗ್ರಂಥದ, ನಮಗೆ ಉಪಲಬ್ಧವಿರುವ ಮೊದಲನೆಯ ಅಧ್ಯಾಯದಲ್ಲಿ ಅವರು ಹೇಳಿರುವ ಅಂಶ ಇದಾಗಿದೆ. ವಿಮಾನಗಳ ತಯಾರಿಕೆ, ಅವುಗಳ ತಯಾರಿಕೆಗೆ ಬೇಕಾದ ಧಾತುಗಳು, ವಿಮಾನಗಳಿಗೆ ಬಳಸುವ ಇಂಧನ ಮುಂತಾದ ವಿಷಯಗಳೇ ಅಲ್ಲದೆ, ವಿಮಾನದ ಮೂಲಕ ನಕ್ಷತ್ರಗಳ ಛಾಯಾಪಥವನ್ನು ತಲುಪುವ ಬಗೆಯನ್ನೂ ಇದರಲ್ಲಿ ವಿವರಿಸಲಾಗಿದೆ ಎಂದರೆ, ನಮ್ಮ ಪೂರ್ವಜರ ಬುದ್ಧಿಮತ್ತೆಯನ್ನು ಅಳೆಯಲು ನಾವು ಶಕ್ತರೇ ಎಂಬ ಅನುಮಾನ ಮೂಡುತ್ತದೆ.

ಇಂತಹ ಅದೆಷ್ಟೋ ಉದಾಹರಣೆಗಳನ್ನು ನಾವು ನೀಡಬಹುದು. ನಮ್ಮ ಪರಂಪರೆಯನ್ನು, ಅದರ ಬೇರುಗಳನ್ನು ಅರಿಯದೆ, ಅರ್ಥಮಾಡಿಕೊಳ್ಳದೆ ನಮ್ಮದು ಎಂಬುದೆಲ್ಲವನ್ನೂ ಪಕ್ಕಕ್ಕೆ ಸರಿಸುವ ಮನೋಭಾವವನ್ನು ಬಿಟ್ಟು, ಜಗತ್ತಿನ ಅನೇಕ ನಾಗರಿಕತೆಗಳು ಇನ್ನೂ ನಿದ್ರಾವಸ್ಥೆಯಲ್ಲಿ ಇದ್ದಾಗಲೇ ಭಾರತೀಯರು ಅಷ್ಟೊಂದು ವಿದ್ಯಾವಂತರೂ, ಜ್ಞಾನಿಗಳೂ, ಅತ್ಯಂತ ಮುಂದುವರಿದ ಜನಾಂಗದವರೂ ಆಗಿದ್ದು ಹೇಗೆ ಎಂಬುದನ್ನು ಕುರಿತು ಆಲೋಚಿಸೋಣ, ಹೆಮ್ಮೆಪಡೋಣ. ಆಯುರ್ವೇದ, ಶಸ್ತ್ರಚಿಕಿತ್ಸೆ, ಲೋಹಶಾಸ್ತ್ರ, ಗಣಿತಶಾಸ್ತ್ರ, ಸಸ್ಯಶಾಸ್ತ್ರ, ಸಂಗೀತ, ನೃತ್ಯ ಯಾವುದನ್ನೇ ತೆಗೆದುಕೊಂಡರೂ ಅದಕ್ಕೆ ಭಾರತೀಯರ ಕೊಡುಗೆ ಎದ್ದುಕಾಣುತ್ತದೆ. ಭಾರತೀಯರಾಗಿ ಹುಟ್ಟಿರುವ ನಾವು ನಮ್ಮ ಭವ್ಯ ಪರಂಪರೆಗೆ, ಸಮೃದ್ಧ ಸಂಸ್ಕೃತಿಗೆ ನಮ್ಮ ಕಿರು ಕಾಣಿಕೆಯನ್ನೂ ಅರ್ಪಿಸುವಂತಹವರಾಗಿ ಧನ್ಯರಾಗೋಣ.

‘ಗಣ್ಯರ ಲಗೋರಿ’ ದೇಸಿ ಕ್ರೀಡೆ ಕುತೂಹಲ



ಮೈಸೂರು ಅರಮನೆ ಮುಂಭಾಗ ಕ್ರೀಡಾ ಭಾರತಿ ಸಂಸ್ಥೆ ಶನಿವಾರ ಆಯೋಜಿಸಿದ್ದ ‘ಗಣ್ಯರ ಲಗೋರಿ’ ದೇಸಿ ಕ್ರೀಡೆಗೆ ಸಂಸದ ಯದುವೀರ ಒಡೆಯರ್ ಚಾಲನೆ ನೀಡಿದರು.

ಮೈಸೂರು,ಜ.4(ಎಂಟಿವೈ)–ಕ್ರೀಡಾ ಭಾರತಿ ಸಂಸ್ಥೆ ಮೈಸೂರು ಅರಮನೆ ಮುಂಭಾಗ ಶನಿವಾರ ಆಯೋಜಿಸಿದ್ದ ‘ಗಣ್ಯರ ಲಗೋರಿ’ ದೇಸಿ ಕ್ರೀಡೆಯಲ್ಲಿ ಹಲವು ಮಂದಿ ಪಾಲ್ಗೊಂಡು ಗಮನ ಸೆಳೆದರು.

ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಜ.19ರಂದು ನಡೆಯುವ ರಾಜ್ಯ ಕ್ರೀಡಾ ಸಮ್ಮೇಳನದ ಅಂಗವಾಗಿ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದ ಕ್ರೀಡಾ ಭಾರತಿ ಸಂಸ್ಥೆ ಆಯೋಜಿಸಿದ್ದ ಲಗೋರಿ ದೇಸಿ ಆಟಕ್ಕೆ ಸಂಸದ ಯದುವೀರ ಒಡೆಯರ್ ಚಾಲನೆ ನೀಡಿದರು.

‘ಮೊಬೈಲ್‌ನಿಂದ ಮಣ್ಣಿಗೆ’ ಶೀರ್ಷಿಕೆಯಲ್ಲಿ ನಡೆಸಿದ ಲಗೋರಿ ದೇಸಿ ಆಟದಲ್ಲಿ ಮೈಸೂರಿನ ವಿವಿಧ ಕ್ಷೇತ್ರಗಳ ಗಣ್ಯರು ಪಾಲ್ಗೊಂಡು ಲಗೋರಿ ಆಡಿ ಗಮನ ಸೆಳೆದರು. ದೇಸಿ ಕ್ರೀಡೆಗೆ ಚಾಲನೆ ನೀಡಿದ ಬಳಿಕ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ದೇಸಿ ಕ್ರೀಡೆಗಳ ಬಗ್ಗೆ ಜಾಗೃತಿ ಮೂಡಿಸಲು ಕ್ರೀಡಾ ಭಾರತಿ ಸಂಸ್ಥೆಯು ಲಗೋರಿ ಆಟ ಆಯೋಜಿಸಿದೆ. ಈ ಹಿಂದೆ ದೇಸಿ ಕ್ರೀಡೆ ಮಹತ್ವ ಪಡೆದಿತ್ತು. ಆದರೆ, ಕೆಲವು ವರ್ಷಗಳಿಂದೀಚೆಗೆ ದೇಸಿ ಕ್ರೀಡೆಗೆ ಸರಿಯಾದ ಮನ್ನಣೆ ಸಿಗುತ್ತಿಲ್ಲ. ಈ ನಿಟ್ಟಿನಲ್ಲಿ ಬಾಲ್ಯದ ಆಟಗಳನ್ನು ಮರಳಿ ಚಾಲ್ತಿಗೆ ತರುವ ನಿಟ್ಟಿನಲ್ಲಿ ದೇಸಿ ಕ್ರೀಡೆಗಳ ಬಗ್ಗೆ ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಶಾಸಕ ಟಿ.ಎಸ್. ಶ್ರೀವತ್ಸ, ವಿಜಯ ವಿಠಲ ಶಿಕ್ಷಣ ಸಂಸ್ಥೆಯ ಆರ್.ವಾಸುದೇವ್ ಭಟ್, ಕಾಮಾಕ್ಷಿ ಆಸ್ಪತ್ರೆಯ ಮುಖ್ಯಸ್ಥ ಮಹೇಶ್ ಶೆಣೈ, ಜಿಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಶ್ರೀಹರಿ, ಮಾಜಿ ಮೇಯರ್ ಶಿವಕುಮಾರ್, ಕ್ರೀಡಾ ಭಾರತಿ ಕ್ರೀಡಾ ಸಮ್ಮೇಳನದ ರಾಜ್ಯ ಸಂಚಾಲಕ ಸಿ.ಕೆ ಮೂರ್ತಿ ಇನ್ನಿತರರಿದ್ದರು.

ಜ.8, ಲೋಕಾಯುಕ್ತರಿಂದ ದೂರು ಸ್ವೀಕಾರ

ಮೈಸೂರು,ಜ.4– ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಅಧಿಕಾರಿಗಳಿಂದ ಜ.8 ರಂದು ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾಲಿಗ್ರಾಮ ತಾಲೂಕಿನ ಪ್ರವಾಸಿ ಮಂದಿರ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಸಾರ್ವಜನಿಕರು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ, ಸರ್ಕಾರಿ ಅಧಿಕಾರಿ, ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ದೂರು ನೀಡಿ ಕಾನೂನು ಕ್ರಮ ತೆಗೆದುಕೊಳ್ಳಲು ಅವಕಾಶವನ್ನು ಸದುಪಯೋಗ ಪಡೆದುಕೊಳ್ಳಬಹುದು ಎಂದು ಕರ್ನಾಟಕ ಲೋಕಾಯುಕ್ತದ ಪೊಲೀಸ್ ಅಧೀಕ್ಷಕರಾದ ಉದೇಶ ಟಿ.ಜೆ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಶಿಕ್ಷಿತ ಹೆಣ್ಣು ಮಕ್ಕಳೇ ಹೆಚ್ಚಾಗಿ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ

• ಮಹಿಳಾ ಸಾಂಸ್ಕೃತಿಕ ಸಂಘಟನೆ ಹೋರಾಟಗಾರ ರವಿ ವಿಷಾದ • ರಾಜಕೀಯ ಅಧಿಕಾರ ಇದ್ದರಷ್ಟೇ ಇದನ್ನು ನಿವಾರಿಸಲಾಗದು; ನೈತಿಕತೆ, ಶಿಕ್ಷಣ ಇನ್ನಿತರೆ ಸ್ಥಾನಮಾನವೂ ಅವಶ್ಯ

ಮೈಸೂರು, ಜ.4(ಎಂಟಿವೈ)– ಸುಶಿಕ್ಷಿತ ಹಾಗೂ ಮಧ್ಯಮ, ಮೇಲ್ವರ್ಗದ ಹೆಣ್ಣು ಮಕ್ಕಳೇ ದೌರ್ಜನ್ಯಕ್ಕೆ ಒಳಗಾಗುತ್ತಿರುವುದರಿಂದ ಎಲ್ಲರೂ ಜಾಗೃತರಾಗಬೇಕು ಎಂದು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ಹೋರಾಟಗಾರ ಬಿ.ರವಿ ಸಲಹೆ ನೀಡಿದ್ದಾರೆ.

ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಸ್‌ಎಸ್) ಆಯೋಜಿಸಿದ್ದ 5ನೇ ಜಿಲ್ಲಾ ಮಟ್ಟದ ಮಹಿಳಾ ಸಮ್ಮೇಳನದಲ್ಲಿ ಮಾತನಾಡಿದ ಅವರು, ಇತ್ತೀಚಿನ ವರ್ಷಗಳಲ್ಲಿ ಹೆಣ್ಣು ಮಕ್ಕಳು ಸಾಕಷ್ಟು ಮುಂದುವರೆಯುತ್ತಿದ್ದಾರೆ, ಅವರಿಲ್ಲದ ಕ್ಷೇತ್ರಗಳಿಲ್ಲ. ಆದರೂ ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ ಹೆಚ್ಚಾಗುತ್ತಿದೆ. ಅಶಿಕ್ಷಿತರು, ಬಡ ಹೆಣ್ಣು ಮಕ್ಕಳೊಂದಿಗೆ ಸುಶಿಕ್ಷಿತ ಹಾಗೂ ಮಧ್ಯಮ, ಮೇಲ್ಮಧ್ಯಮ ವರ್ಗದ ಹೆಣ್ಣು ಮಕ್ಕಳು ಹಲವು ರೀತಿಯ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಲು ಮಹಿಳೆಯರು ಅಧಿಕಾರಕ್ಕೆ ಬಂದರೆ ಈ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂಬ ವಾದವಿದೆ. ಆದರೆ ಪರಿಸ್ಥಿತಿ ಹಾಗೆ ಉಳಿದಿದೆ. ಆದ್ದರಿಂದ ರಾಜಕೀಯ ಅಧಿಕಾರದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯವಿಲ್ಲ. ಸಮಾಜದಲ್ಲಿ ನೈತಿಕತೆ, ಶಿಕ್ಷಣ, ಸ್ಥಾನಮಾನ ಎಲ್ಲಾ ಸಂದರ್ಭಗಳಲ್ಲೂ ಹೆಣ್ಣು ಮತ್ತು ಗಂಡನ್ನು ಸಮಾನ ರೀತಿಯಲ್ಲಿ ನೋಡಬೇಕಾಗಿದೆ ಎಂದರು.



ಮೈಸೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಸ್‌ಎಸ್)ಯ 5ನೇ ಜಿಲ್ಲಾ ಮಟ್ಟದ ಮಹಿಳಾ ಸಮ್ಮೇಳನ ನಡೆಯಿತು.

ಸಂಘಟನೆಯ ರಾಜ್ಯಾಧ್ಯಕ್ಷೆ ಮಂಜುಳಾ ಮಾತನಾಡಿ, ಹುಟ್ಟುವುದಕ್ಕೂ ಅನುಮತಿ ಪಡೆಯುವ ಅಥವಾ ನಿರಾಕರಣೆ ಮಾಡುವ ಈ ಸಮಾಜದಲ್ಲಿ ಮಹಿಳೆಯರು ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಬೇಕಾದ ಸಂದಿಗ್ಧತೆ ಎದುರಿಸುತ್ತಿದ್ದಾಳೆ. ಮಹಿಳೆ ಹಳೆ ಧೋರಣೆ ಮತ್ತು ಪುರುಷ ಪ್ರಧಾನ ಮನಸ್ಸುಗಳನ್ನು ನಿರಾಕರಿಸಿದರೆ ಅದನ್ನು ಜೀರ್ಣಿಸಿಕೊಳ್ಳಲು ಆಗದ ಸಮಾಜದಲ್ಲಿ ಆಕೆ ಬದುಕುತ್ತಿದ್ದಾಳೆ. ಹೆಣ್ಣು ಮಕ್ಕಳಿಗೆ ಬೇಕಾದ ಸ್ವಾತಂತ್ರ್ಯ, ಗೌರವ ಭಗವಂತನಲ್ಲಿ ಮಾಡುವ ಪ್ರಾರ್ಥನೆಯಿಂದಾಗಲೀ, ಸರ್ಕಾರಗಳಿಂದಾಗಲೀ, ನ್ಯಾಯಾಂಗ, ಪೊಲೀಸ್ ವ್ಯವಸ್ಥೆಗಳಿಂದಾಗಲೀ ಸಿಕ್ಕಲ್ಲ. ಆದ್ದರಿಂದ ನಮ್ಮ ಮುಂದೆ ಇರುವ ಒಂದೇ ದಾರಿ ಮಹಿಳಾ ಶಕ್ತಿಯ ಕ್ರೋಢೀಕರಣ. ಮಹಿಳೆಯರು ಹೆಚ್ಚು ಹೆಚ್ಚು ಜ್ಞಾನ ಸಂಪಾದಿಸುವುದರೊಂದಿಗೆ ಸಂಘಟಿತ ಹೋರಾಟ ನಡೆಸಬೇಕು ಎಂದರು.

ಸಂಘಟನೆಯ ರಾಜ್ಯ ಕಾರ್ಯದರ್ಶಿ ಶೋಭಾ ಮಾತನಾಡಿ, ಹೆಣ್ಣು ಮಕ್ಕಳು ಸಾಮಾಜಿಕ ಚಳುವಳಿಯಲ್ಲಿ ಕಾಲಿಡುವುದು ಬಹಳ ಕಷ್ಟ ಆದರೆ. ಹೋರಾಟಕ್ಕೆ ಒಮ್ಮೆ ಕಾಲಿಟ್ಟರೆ ಅದೊಂದು ದೊಡ್ಡ ಶಕ್ತಿಯಾಗಿ ರೂಪುಗೊಳ್ಳುತ್ತದೆ. ಜ್ಯೋತಿ ಬಾಯಿಫುಲೆ ಅವರಿಗೆ ಅವರ ಅಕ್ಕ ಸುಗುಣ ಬಾಯಿ ಬೆನ್ನೆಲುಬಾಗಿದ್ದರು. ನಂತರ ಜ್ಯೋತಿ ಬಾಯಿಫುಲೆ ಅವರು ಸಾವಿತ್ರಿ ಬಾಯಿ ಫುಲೆ ಅವರಿಗೆ ಶಿಕ್ಷಕರಾದರು. ಇಂದು ಅವರ ಜೀವನ ಹೋರಾಟ, ವಿಚಾರ ನಮ್ಮೆಲ್ಲರಿಗೂ ಆದರ್ಶವಾಗಿದೆ. ಹೆಣ್ಣು ಮಕ್ಕಳು ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರ ಬಗ್ಗೆ ಯೋಚಿಸಬೇಕು. ಜ್ಞಾನ ಪ್ರಪಂಚಕ್ಕೆ ಲಗ್ಗೆ ಇಡಬೇಕು ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಎಐಎಂಎಸ್‌ಎಸ್ ಅಧ್ಯಕ್ಷೆ ನಳಿನ ಮಾತನಾಡಿದರು.

ನೂತನ ಪದಾಧಿಕಾರಿಗಳ ಆಯ್ಕೆ: ಸಮ್ಮೇಳನದಲ್ಲಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಸ್‌ಎಸ್) ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ನಳಿನ ಅಧ್ಯಕ್ಷೆ, ಶೀಬಾ ಉಪಾಧ್ಯಕ್ಷೆ, ಕಾರ್ಯದರ್ಶಿಯಾಗಿ ಸೀಮಾ ಜಿ.ಎಸ್., ರೂಪ ದೇಶಪಾಂಡೆ, ಆಸಿಯಾ ಬೇಗಂ, ಕಚೇರಿ ಕಾರ್ಯದರ್ಶಿಯಾಗಿ ಪುಷ್ಪ.ಜಿ, ಸ್ನೇಹ, ಗೌರಿ, ಪುಷ್ಪ, ಪ್ರೇಮ, ಸುಮಾ, ಗಾಯತ್ರಿ ಮತ್ತು ಸಿಂಧು ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಲಾಯಿತು. ಅಲ್ಲದೆ, 15 ಕೌನ್ಸಿಲ್ ಸದಸ್ಯರನ್ನು ಘೋಷಿಸಲಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಭಾನುವಾರ 5 ಜನವರಿ 2025

ಕೆಲವರು ಗ್ರಾಮೀಣ ಭಾಗದಲ್ಲಿ ಜಾತಿ ರಾಜಕಾರಣದ ಹೆಸರಿನಲ್ಲಿ ಶಾಂತಿ ಕದಡಲು ಯತ್ನಿಸುತ್ತಿದ್ದಾರೆ: ಮೋದಿ

ನವದೆಹಲಿ,ಜ.4–ಜಾತಿ ರಾಜಕಾರಣದ ಹೆಸರಿನಲ್ಲಿ ಕೆಲವರು ಶಾಂತಿ ಕದಡಲು ಯತ್ನಿಸುತ್ತಿದ್ದಾರೆ. ದೇಶದ ಗ್ರಾಮೀಣ ಭಾಗಗಳಲ್ಲಿ ಸಾಮಾಜಿಕ ಸೌಹಾರ್ದತೆಯನ್ನು ಕಾಪಾಡಲು ಇಂತಹ ಪ್ರಯತ್ನಗಳನ್ನು ವಿಫಲಗೊಳಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.

ಯಾವುದೇ ಹೆಸರನ್ನು ಉಲ್ಲೇಖಿಸದ ಮೋದಿ, ಜಾತಿ ರಾಜಕಾರಣದ ವಿಷವನ್ನು ಹರಡುವ ಮೂಲಕ ಕೆಲವು ಜನರು ಶಾಂತಿ ಕದಡಲು ಪ್ರಯತ್ನಿಸುತ್ತಿದ್ದಾರೆ. ಗ್ರಾಮಗಳ ಶಾಂತಿ ಸೌಹಾರ್ದತೆಯ ಪರಂಪರೆಯನ್ನು ಬಲಪಡಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ದೆಹಲಿ ಭಾರತ ಮಂಟಪದಲ್ಲಿ ಆಯೋಜಿಸಿದ್ದ ಗ್ರಾಮೀಣ ಭಾರತ ಉತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಭಾರತ ಮಹೋತ್ಸವದ ಭವ್ಯವಾದ ಸಂಘಟನೆಯು ಭಾರತದ ಅಭಿವೃದ್ಧಿ ಪಯಣವನ್ನು ತೋರಿಸುತ್ತಿದೆ. ಇದನ್ನು ಆಯೋಜಿಸಿದ್ದಕ್ಕಾಗಿ ನಬಾರ್ಡ್ ಮತ್ತು ಇತರ ಪಾಲುದಾರರಿಗೆ ಅಭಿನಂದನೆಗಳು ಎಂದು ತಿಳಿಸಿದರು.



ದೆಹಲಿ ಭಾರತ ಮಂಟಪದಲ್ಲಿ ಆಯೋಜಿಸಿದ್ದ ಗ್ರಾಮೀಣ ಭಾರತ ಉತ್ಸವವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಿದರು.

ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಲು ಹಳ್ಳಿಯ ಪ್ರತಿಯೊಂದು ವಿಭಾಗವನ್ನು ಗಮನದಲ್ಲಿಟ್ಟುಕೊಂಡು ಆರ್ಥಿಕ ನೀತಿಗಳನ್ನು ರೂಪಿಸುವುದು ಅವಶ್ಯಕ. ಕಳೆದ 10 ವರ್ಷಗಳಲ್ಲಿ ನಮ್ಮ ಸರ್ಕಾರ ಈ ಕೆಲಸ ಮಾಡುತ್ತಿದೆ. ಸಾವಿರಾರು ಗ್ರಾಮಗಳಲ್ಲಿರುವ ಲಕ್ಷಾಂತರ ಮನೆಗಳಿಗೆ ಶುದ್ಧ ಕುಡಿಯುವ ನೀರು ದೊರೆಯುವಂತೆ ಮಾಡಿದೆ, 1.5 ಲಕ್ಷ ಆಯುಷ್ಮಾನ್ ಆರೋಗ್ಯ ಕೇಂದ್ರಗಳಲ್ಲಿ ಜನರು ಉತ್ತಮ ಆರೋಗ್ಯ ಸೇವೆಗಳನ್ನು ಪಡೆಯುತ್ತಿದ್ದಾರೆ. ಡಿಜಿಟಲ್ ತಂತ್ರಜ್ಞಾನದ ನೆರವಿನಿಂದ ಉತ್ತಮ ವೈದ್ಯರಿಗೆ ಹಳ್ಳಿಗಳಿಗೆ ಸಂಪರ್ಕಿಸಿದೆ ಎಂದರು.

ಪ್ರಧಾನಿ ಕಿಸಾನ್ ಸಮ್ಮಾನ್ ನಿಧಿ ಮೂಲಕ ದೇಶದ ರೈತರಿಗೆ 3 ಲಕ್ಷ ಕೋಟಿ ರೂ. ಆರ್ಥಿಕ ನೆರವು ನೀಡಲಾಗುತ್ತಿದೆ. ಕಳೆದ 10 ವರ್ಷಗಳಲ್ಲಿ ಕೃಷಿ ಸಾಲ ಮೂರೂವರೆ ಪಟ್ಟು ಹೆಚ್ಚಾಗಿದೆ. ಈಗ ಜಾನುವಾರು ಮತ್ತು ಮೀನು ಸಾಕಣೆದಾರರಿಗೂ ಕಿಸಾನ್ ಕ್ರೆಡಿಟ್ ಕಾರ್ಡ್ ನೀಡಲಾಗುತ್ತಿದೆ. ಕಳೆದ 10 ವರ್ಷಗಳಲ್ಲಿ ಬೆಳೆಗಳ ಮೇಲಿನ ಸಬ್ಸಿಡಿಯನ್ನು ಹೆಚ್ಚಿಸಿದ್ದೇವೆ. ಗ್ರಾಮದ ಜನರಿಗೆ ಆಸ್ತಿ ದಾಖಲೆಗಳನ್ನು ನೀಡಲಾಗುತ್ತಿದೆ. ಮುದ್ರಾ ಯೋಜನೆ, ಸ್ಟಾರ್ಟಪ್ ಇಂಡಿಯಾ, ಸ್ಟ್ಯಾಂಡ್ ಅಪ್ ಇಂಡಿಯಾದಂತಹ ಯೋಜನೆಗಳ ಮೂಲಕ ಹಳ್ಳಿಯ ಯುವಕರಿಗೆ ಸಹಾಯ ಮಾಡಲಾಗುತ್ತಿದೆ. ರೈತರು ತಮ್ಮ ಬೆಳೆಗಳಿಗೆ ಸರಿಯಾದ ಬೆಲೆ ಸಿಗುವಂತೆ ಮಾಡಲು 2021ರಲ್ಲಿ ಪ್ರತ್ಯೇಕ ಸಚಿವಾಲಯವನ್ನು ರಚಿಸಲಾಗಿದೆ ಎಂದರು.

ಗ್ರಾಮೀಣ ಭಾರತ ಮಹೋತ್ಸವ ಇಂದಿನಿಂದ ಜ.9ರವರೆಗೆ ನಡೆಯುತ್ತಿದೆ. ಅಭಿವೃದ್ಧಿ ಹೊಂದಿದ ಭಾರತಕ್ಕಾಗಿ ಚೇತರಿಸಿಕೊಳ್ಳುವ ಗ್ರಾಮೀಣ ಭಾರತ ನಿರ್ಮಿಸುವುದು 2047 ವಿಷಯದ ಆಧಾರದ ಮೇಲೆ ಉತ್ಸವವು ಗ್ರಾಮೀಣ ಭಾರತದ ಉದ್ಯಮಶೀಲತೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಆಚರಿಸುತ್ತದೆ. ಗ್ರಾಮೀಣ ಮೂಲಸೌಕರ್ಯವನ್ನು ಹೆಚ್ಚಿಸುವ, ಸ್ವಾವಲಂಬಿ ಆರ್ಥಿಕತೆ ನಿರ್ಮಿಸುವ ಮತ್ತು ಗ್ರಾಮೀಣ ಸಮುದಾಯದಲ್ಲಿ ನಾವೀನ್ಯತೆಯನ್ನು ಉತ್ತೇಜಿಸುವ ಉದ್ದೇಶದಿಂದ ಮಹೋತ್ಸವವು ವಿವಿಧ ಚರ್ಚೆಗಳು, ಕಾರ್ಯಾಗಾರಗಳನ್ನು ಆಯೋಜಿಸುತ್ತಿದೆ. ಸುಸ್ಥಿರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವುದರೊಂದಿಗೆ ಉದ್ಯಮಶೀಲತೆಯ ಮೂಲಕ ಗ್ರಾಮೀಣ ಮಹಿಳೆಯರನ್ನು ಸಬಲೀಕರಣಗೊಳಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ಸಿಪಿಕೆ ಅವರ 'ಚಿಂತನ ಚಿಂತಾಮಣಿ' ಗ್ರಂಥ ಜ.7ರಂದು ಲೋಕಾರ್ಪಣೆ



ಮೈಸೂರು, ಜ.4(ಜಿಎ)–ಹಿರಿಯ ಸಾಹಿತಿ ಡಾ.ಸಿಪಿಕೆ ಅವರ 800 ಚಿಂತನ ಬರಹಗಳ ಬೃಹತ್ ಗ್ರಂಥ 'ಚಿಂತನ ಚಿಂತಾಮಣಿ' ಲೋಕಾರ್ಪಣೆ ಸಮಾರಂಭವನ್ನು ಜ.7ರಂದು ಸಂಜೆ 5.30ಕ್ಕೆ ನಗರದ ಜೆಎಸ್‌ಎಸ್ ಆಸ್ಪತ್ರೆ ಆವರಣದ ಡಾ.ಶಿವರಾತ್ರಿ ರಾಜೇಂದ್ರ ಭವನದಲ್ಲಿ ಏರ್ಪಡಿಸಲಾಗಿದೆ ಎಂದು ನಿವೃತ್ತ ಪ್ರಾಧ್ಯಾಪಕಿ ಹೆಚ್.ಟಿ.ಶೈಲಜಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಹನ ಪ್ರಕಾಶನ ಹಾಗೂ ಕನ್ನಡ ಸಾಹಿತ್ಯ ಕಲಾಕೂಟ ಸಂಯುಕ್ತಾಶ್ರಯದಲ್ಲಿ ಕಾರ್ಯಕ್ರಮ ಏರ್ಪಡಿಸಿದ್ದು, ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ವಿಶ್ರಾಂತ ಪ್ರಾಧ್ಯಾಪಕ ಡಾ.ಡಿ.ಎ.ಶಂಕರ್ ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಕೃತಿ ಕುರಿತು ಹಿರಿಯ ವಿದ್ವಾಂಸ ವಿದ್ವಾನ್ ಹೆಚ್.ವಿ.ನಾಗರಾಜರಾವ್ ಮಾತನಾಡಲಿದ್ದಾರೆ. ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಕಾಶಕ ಡಿ.ಎನ್.ಲೋಕಪ್ಪ ಆಗಮಿಸಲಿದ್ದಾರೆ ಎಂದರು.


ಈ ವೇಳೆ ಸಂವಹನ ಪ್ರಕಾಶನ ಹೊರ ತಂದಿರುವ ಕನ್ನಡ ಅಂಕಿಗಳನ್ನು ಒಳಗೊಂಡ 2025ನೇ ಸಾಲಿನ ಕ್ಯಾಲೆಂಡರ್ ಅನ್ನು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಬಿಡುಗಡೆಗೊಳಿಸಿದರು. ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಪ್ರಕಾಶಕ ಡಿ.ಎನ್.ಲೋಕಪ್ಪ, ಜಿನಹಳ್ಳಿ ಸಿದ್ದಲಿಂಗಪ್ಪ, ಕನ್ನಡಪರ ಹೋರಾಟಗಾರ ಮೂಗೂರು ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ಪ್ರಿಯಾಂಕ್ ಖರ್ಗೆ ದಲಿತ ನಾಯಕ ಎಂಬ ಕಾರಣಕ್ಕೆ ಸುಳ್ಳು ಆರೋಪ

ಮೈಸೂರು, ಜ.4(ಜಿಎ)–ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣಕ್ಕೂ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೂ ಯಾವುದೇ ಸಂಬಂಧವಿಲ್ಲ. ಆದರೂ ಇವರೊಬ್ಬ ದಲಿತ ನಾಯಕ ಮತ್ತು ದಲಿತ ಸಚಿವ ಎಂಬ ಕಾರಣಕ್ಕಾಗಿ ವಿರೋಧ ಪಕ್ಷದವರು ಗುರಿಯಾಗಿರಿಸಿಕೊಂಡು ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್.ರಾಜೇಶ್ ಕಿಡಿಕಾರಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್.ಎಂ.ಕೃಷ್ಣ ಅವರು ಸಿಎಂ ಆಗಿದ್ದ ಬಳಿಕ ಬೆಂಗಳೂರು ಐಟಿ, ಬಿಟಿ ಕ್ಷೇತ್ರದಲ್ಲಿ ಹೆಚ್ಚು ಬೆಳವಣಿಗೆ ಸಾಧಿಸಲು ಪ್ರಿಯಾಂಕ್ ಖರ್ಗೆ ಅವರು ಕಾರಣರಾಗಿದ್ದಾರೆ. ಇವರು ಪ್ರಾಮಾಣಿಕರೂ ಆಗಿದ್ದಾರೆ. ಇದನ್ನು ಸಹಿಸದೇ ಬಿಜೆಪಿಯವರು ತೇಜೋವಧೆ ಮಾಡುತ್ತಿದ್ದಾರೆಂದು ಆರೋಪಿಸಿದರು. ಕೋವಿಡ್ ಸಂದರ್ಭದಲ್ಲಿ ಬಿಜೆಪಿಯ ಸಿಎಂ ಆಗಿದ್ದ ಬಸವರಾಜ ಬೊಮ್ಮಾಯಿ, ಸಚಿವರಾದ ಸುಧಾಕರ್, ಶ್ರೀರಾಮುಲು ಅವರು ಕೋಟ್ಯಂತರ ರೂ., ಅವ್ಯವಹಾರ ನಡೆಸಿದ ಆರೋಪ ಎದುರಿಸುತ್ತಿದ್ದಾರೆ. ಇವರ ರಾಜೀನಾಮೆಯನ್ನು ಏಕೆ ಆ ವೇಳೆ ಪಡೆಯಲಿಲ್ಲ ಎಂದು ಪ್ರಶ್ನಿಸಿದರು. ಗೋಷ್ಠಿಯಲ್ಲಿ ಕುಕ್ಕರಹಳ್ಳಿ ನಂಜುಂಡಸ್ವಾಮಿ, ಶಿವಶಂಕರ್, ಮರಿದೇವಯ್ಯ, ಓಂಕಾರ್ ರವಿ, ರಹೀಂ, ಕೇಶವ, ಶ್ರೀನಿವಾಸ್ ಉಪಸ್ಥಿತರಿದ್ದರು.

ಡಾ.ರಾಜ್ ಶಿವಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘದ ಕ್ಯಾಲೆಂಡರ್ ಬಿಡುಗಡೆ



ಡಾ.ರಾಜ್ ಶಿವಸೈನ್ಯ ಶಿವರಾಜ್‌ಕುಮಾರ್ ಅಭಿಮಾನಿಗಳ ಸಂಘದ 2025ರ ನೂತನ ವರ್ಷದ ಕ್ಯಾಲೆಂಡರ್ ಅನ್ನು ಸಂಸದ ಯದುವೀರ್ ಒಡೆಯರ್ ಬಿಡುಗಡೆ ಮಾಡಿದರು. ಈ ವೇಳೆ ಸಂಘದ ಪದಾಧಿಕಾರಿಗಳಾದ ಸೋಮಣ್ಣ, ಬಿ.ಎಸ್.ರವಿ, ಬಿ.ಎಸ್.ಮಹೇಶ್, ರೇವಣ್ಣ, ಧರ್ಮರಾಜ್, ಪ್ರಭುಸ್ವಾಮಿ, ರಮೇಶ್, ಸಂದೇಶ್‌ಸ್ವಾಮಿ, ನಿಯಾರ್‌ಗೌಡ, ಶಿವು ಉಪಸ್ಥಿತರಿದ್ದರು.

ಬಹುರೂಪಿಗೆ ಸಜ್ಜಾಗುತ್ತಿದೆ ರಂಗಾಯಣದ ಆವರಣ



'ಬಹುರೂಪಿ' ರಾಷ್ಟ್ರೀಯ ನಾಟಕೋತ್ಸವಕ್ಕೆ ರಂಗಾಯಣ ಆವರಣದಲ್ಲಿ ಸಿದ್ಧತೆ.

ಮೈಸೂರು,ಜ.4(ಆರ್‌ಕೆ)– ಜನವರಿ 14ರಿಂದ 18ರವರೆಗೆ ನಡೆಯುವ 'ಬಹುರೂಪಿ' ರಾಷ್ಟ್ರೀಯ ನಾಟಕೋತ್ಸವಕ್ಕೆ ಮೈಸೂರಿನ ರಂಗಾಯಣ ಆವರಣದಲ್ಲಿ ಭರಪೂರ ಸಿದ್ಧತೆ ನಡೆಯುತ್ತಿದೆ.

'ಸಂಕೋಲೆಯಿಂದ ಬಿಡುಗಡೆ' ಸಂಕಲ್ಪದೊಂದಿಗೆ ಈ ಬಾರಿಯ ಬಹುರೂಪಿ ನಾಟಕೋತ್ಸವದ ಹಿನ್ನೆಲೆಯಲ್ಲಿ ಮುಖವಾಡಗಳನ್ನು ಸಿದ್ಧಪಡಿಸಲಾಗುತ್ತಿದ್ದು, ಕಲಾಮಂದಿರ, ಕಿರು ರಂಗಮಂದಿರ, ಭೂಮಿಗೀತ ಸೇರಿದಂತೆ ರಂಗಾಯಣದ ಆವರಣದಲ್ಲಿರುವ ಎಲ್ಲಾ ರಂಗಮಂದಿರಗಳಲ್ಲಿ ನಾಟಕ ಪ್ರದರ್ಶನಕ್ಕೆ ಸಜ್ಜುಗೊಳಿಸಲಾಗುತ್ತಿದೆ. ವೇದಿಕೆಗಳು, ವಸ್ತುಪ್ರದರ್ಶನ ಮಳಿಗೆಗಳು, ತಿಂಡಿ–ತಿನಿಸು ಮಾರಾಟ ವ್ಯವಸ್ಥೆ, ಮನರಂಜನೆ ಸೇರಿದಂತೆ ವಿವಿಧ ರಂಗ ಚಟುವಟಿಕೆಗಳಿಗಾಗಿ ರಂಗಾಯಣದ ಆವರಣವನ್ನು ಅಲಂಕರಿಸುವ ಕಾರ್ಯ ವೇಗವಾಗಿ ನಡೆಯುತ್ತಿವೆ. ಶೌಚಾಲಯ, ಕುಡಿಯುವ ನೀರು, ವಾಹನ ನಿಲುಗಡೆ, ಊಟ–ತಿಂಡಿ ವ್ಯವಸ್ಥೆ ಸಿದ್ಧತೆ ಕಾರ್ಯವನ್ನು ಅಧಿಕಾರಿಗಳು ಮಾಡುತ್ತಿದ್ದು, ದೇಶದ ವಿವಿಧ ರಾಜ್ಯಗಳಿಂದ ಆಗಮಿಸುವ ರಂಗ ಕಲಾವಿದರಿಗೆ ಮೂಲಸೌಕರ್ಯ ಒದಗಿಸಲು ತಯಾರಿ ನಡೆಯುತ್ತಿವೆ.

ಮಿನುಗು ನಕ್ಷತ್ರಗಳ ಅನಾವರಣ; ಅಂತರಶಾಲಾ ಸ್ಪರ್ಧೆ



ಮೈಸೂರಿನ ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ನರ್ಸರಿ ಮಕ್ಕಳಿಗಾಗಿ ಮಿನುಗು ನಕ್ಷತ್ರಗಳ ಅನಾವರಣ, ಅಂತರಶಾಲಾ ಸ್ಪರ್ಧೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಮೈಸೂರು,ಜ.4–ಮೈಸೂರಿನ ರಾಮಕೃಷ್ಣನಗರದಲ್ಲಿರುವ ರಾಮಕೃಷ್ಣ ವಿದ್ಯಾಕೇಂದ್ರದಲ್ಲಿ ನರ್ಸರಿ ಮಕ್ಕಳಿಗಾಗಿ ಮಿನುಗು ನಕ್ಷತ್ರಗಳ ಅನಾವರಣ, ಅಂತರಶಾಲಾ ಸ್ಪರ್ಧೆ ವಿನೂತನವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಸ್ಪರ್ಧೆಯಲ್ಲಿ ಹಲವು ಶಾಲೆಗಳಿಂದ ಸುಮಾರು 75ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಶಿಕ್ಷಕರು ಮತ್ತು ಪೋಷಕರಿಂದಲೇ ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಲಾಯಿತು. ಪ್ರಿ–ನರ್ಸರಿಯ ಮಕ್ಕಳು ಮಣಿ ಪೋಣಿಸುವುದು, ಎಲ್.ಕೆ.ಜಿ. ಮಕ್ಕಳು ಫಜಲ್ ಸಾಲ್ವಿಂಗ್ ಮತ್ತು ಯು.ಕೆ.ಜಿ ಮಕ್ಕಳು ಸ್ಪೆಲ್–ಬಿ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಪಾಲ್ಗೊಂಡು, ಬಹುಮಾನಗಳನ್ನು ಪಡೆದುಕೊಂಡರು. ಸರ್ಧೆಯಲ್ಲಿ ಭಾಗವಹಿಸಿದ್ದ ಮಕ್ಕಳೆಲ್ಲರಿಗೂ ಪ್ರಮಾಣ ಪತ್ರ ಮತ್ತು ಕಿರುಕಾಣಿಕೆಯನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಸೇವಾಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಕಾರ್ಯನಿರ್ವಾಹಕ ಅಧಿಕಾರಿ ಪ್ರೊ.ಜಿ.ಚಂದ್ರಶೇಖರ್, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ.ಎನ್.ವಿಶ್ವನಾಥ್ ಹಾಗೂ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ವೀಣಾ ಕೆ.ಹೆಗಡೆ ಇನ್ನಿತರರು ಉಪಸ್ಥಿತರಿದ್ದರು.

ಪೂರ್ವಭಾವಿ ಸಭೆ ಮುಂದೂಡಿಕೆ

ಮೈಸೂರು,ಜ.4–ಜ.4ರಂದು ಅಪರ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಕರೆಯಲಾಗಿದ್ದ ಶಿವಯೋಗಿ ಸಿದ್ಧರಾಮ ಜಯಂತಿ, ಮಹಾಯೋಗಿ ವೇಮನ ಜಯಂತಿ, ಅಂಬಿಗರ ಚೌಡಯ್ಯ ಜಯಂತಿ ಪೂರ್ವಭಾವಿ ಸಭೆಯನ್ನು ಕಾರಣಾಂತರಗಳಿಂದ ಜ.6ಕ್ಕೆ ಮುಂದೂಡಲಾಗಿದೆ ಎಂದು ಕನ್ನಡ–ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಸುದರ್ಶನ್ ತಿಳಿಸಿದ್ದಾರೆ.

ಕರ್ನಾಟಕ ಲೋಕಾಯುಕ್ತರಿಂದ ದೂರು ಸ್ವೀಕಾರ

ಮೈಸೂರು,ಜ.4–ಕರ್ನಾಟಕ ಲೋಕಾಯುಕ್ತ ಮೈಸೂರು ವಿಭಾಗ ಅಧಿಕಾರಿಗಳಿಂದ ಜ.8ರಂದು ಬೆಳಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಸಾಲಿಗ್ರಾಮ ತಾಲೂಕಿನ, ಪ್ರವಾಸಿಮಂದಿರ ಸಭಾಂಗಣದಲ್ಲಿ ದೂರು ಸ್ವೀಕರಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಾರ್ವಜನಿಕರು ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕರ ಅಧಿಕೃತ ಕೆಲಸಗಳ ಅನಗತ್ಯ ವಿಳಂಬ, ಲಂಚದ ಹಣದ ಬೇಡಿಕೆ ಇತ್ಯಾದಿ ತೊಂದರೆಗಳನ್ನು ನೀಡುತ್ತಿರುವ ಸಾರ್ವಜನಿಕ/ ಸರ್ಕಾರಿ ಅಧಿಕಾರಿ/ ನೌಕರರ ವಿರುದ್ಧ ಅಗತ್ಯ ದಾಖಲಾತಿಗಳೊಡನೆ ದೂರು ನೀಡಿ ಕಾನೂನು ಕ್ರಮ ತೆಗೆದುಕೊಳ್ಳಲು ಅವಕಾಶವನ್ನು ಸದುಪಯೋಗ ಪಡೆದುಕೊಳ್ಳಬಹುದು ಎಂದು ಲೋಕಾಯುಕ್ತದ ಪೊಲೀಸ್ ಅಧೀಕ್ಷಕ ಉದೇಶ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಹೊಸ ವರ್ಷದ ಸಂಭ್ರಮ



ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಕಳಸ್ತವಾಡಿಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ನಡೆಯಿತು.

ಮೈಸೂರು,ಜ.4–ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಸಂಕಲ್ಪ ಸೌಧ ಸಭಾಂಗಣ, ಕಳಸ್ತವಾಡಿಯಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ನಡೆಯಿತು.

ಸಮಾರಂಭವನ್ನು ಪ್ರಾದೇಶಿಕ ನಿರ್ದೇಶಕ ಬಿ.ಜಯರಾಮ್ ನೆಲ್ಲಿತ್ತಾಯ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿರುವ ಬಡವರ, ಮಹಿಳೆಯರ, ರೈತರ ಆರ್ಥಿಕ ಸಾಮಾಜಿಕ, ಶೈಕ್ಷಣಿಕ ಹಾಗೂ ಸಮುದಾಯಗಳ ಅಭಿವೃದ್ಧಿ ಮತ್ತು ಸಬಲೀಕರಣಕ್ಕಾಗಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಗ್ರಾಮೀಣ ಪ್ರದೇಶದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗೆ ಹೊಸ ಉತ್ಸಾಹದೊಂದಿಗೆ ಸೇವೆ ಮಾಡಲು ಸ್ಫೂರ್ತಿಯನ್ನು ತುಂಬಿದರು ಎಂದರು.

ಜಿಲ್ಲಾ ನಿರ್ದೇಶಕ ವಿ.ವಿಜಯ್‌ಕುಮಾರ್ ನಾಗನಾಳ ಮಾತನಾಡಿ, ಗ್ರಾಮಾಭಿವೃದ್ಧಿ ಯೋಜನೆಯಲ್ಲಿ ಸೇವೆ ಮಾಡಿದ ಕಾರ್ಯಕರ್ತರು ಯೋಜನೆಯ ಎಲ್ಲಾ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶದ ಪ್ರತಿ ಕುಟುಂಬಗಳಿಗೆ ಯೋಜನೆಯ ಸೌಲಭ್ಯಗಳನ್ನು ತಲುಪಿಸುವುದು ಪ್ರತಿಯೊಬ್ಬ ಕಾರ್ಯಕರ್ತನ ಶ್ರದ್ಧೆ ಮತ್ತು ಇಚ್ಛಾಶಕ್ತಿ ಆಗಿರಬೇಕು. ಹಾಗೂ ಕುಟುಂಬದ ಸರ್ವಾಂಗೀಣ ಅಭಿವೃದ್ಧಿಯಿಂದ ರೈತ ಕಲ್ಯಾಣ ಆಗಬೇಕು. ಯೋಜನೆಯಿಂದ ಕೃಷಿಕರಿಗೆ, ಮಹಿಳೆಯರಿಗೆ, ಯುವಕ–ಯುತಿಯರಿಗೆ ದುಶ್ಚಟಗಳಿಂದ ಬಳಲುತ್ತಿರುವ ಜನರಿಗೆ, ಅನಾರೋಗ್ಯ ಪೀಡಿತರಿಗೆ, ದುಡಿಯುವ ಸಾಮರ್ಥ್ಯ ಇಲ್ಲದವರಿಗೆ ಮತ್ತು ವಿದ್ಯಾರ್ಥಿ ವರ್ಗದವರಿಗೆ ಸೌಲಭ್ಯ ನೀಡುವ ಆಗರವಾಗಿದೆ. ಹೊಸ ವರ್ಷವು ನಿಮ್ಮ ಎಲ್ಲಾ ಪ್ರಯತ್ನಗಳಲ್ಲಿ ಯಶಸ್ಸು ತರಲಿ ಎಂದು ಸಿಬ್ಬಂದಿಗೆ ಶುಭ ಹಾರೈಸಿದರು. ನಿರ್ದೇಶಕ ಚಿದಾನಂದ್, ಯೋಜನಾಧಿಕಾರಿ ದಿನೇಶ್, ಮಾಧವ, ದಿನೇಶ್, ಪುಷ್ಪರಾಜ್, ಸಚಿನ್, ಮಂಜುನಾಥ್, ಚೇತನ್, ಮೂಕಾಂಬಿಕ, ಶಶಿರೇಖಾ, ಎಲ್ಲಾ ಪ್ರಬಂಧಕರು, ಮತ್ತು ಎಲ್ಲಾ ಸಿಬ್ಬಂದಿ ಉಪಸ್ಥಿತರಿದ್ದರು.

ಇಂದು ನಾಡಿ ಪರೀಕ್ಷೆ


ಮೈಸೂರು,ಜ.4– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಜನವರಿ 5ರಂದು ನಾಡಿ ಪರೀಕ್ಷೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ವಿವರಗಳಿಗೆ ಮೊ.ನಂ.9886186580 ಸಂಪರ್ಕಿಸಬಹುದು.

ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಅಖಿಲ ಕರ್ನಾಟಕ ಡಾ.ಬಿ.ಆರ್.ಅಂಬೇಡ್ಕರ್ ಆದಿದ್ರಾವಿಡ ಪೌರ ಕಾರ್ಮಿಕರ ಜನಾಂಗದ ಅಭಿವೃದ್ಧಿ ಟ್ರಸ್ಟ್‌ನ ನೂತನ ವರ್ಷದ ಕ್ಯಾಲೆಂಡರನ್ನು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿಡುಗಡೆ ಮಾಡಲಾಯಿತು. ಈ ವೇಳೆ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಸುಬ್ರಹ್ಮಣ್ಯ, ಎಚ್.ಎಸ್.ಸುರೇಶ್‌ಕುಮಾರ್, ಶಿವ, ಪಳನಿ ಮತ್ತಿತರರು ಉಪಸ್ಥಿತರಿದ್ದರು.

ನೂತನ ದಿನದರ್ಶಿಕೆ ಬಿಡುಗಡೆ



ಮೈಸೂರು ಮಹಾನಗರಪಾಲಿಕೆ ನೌಕರರ ಸಹಕಾರ ಸಂಘದ ದಿನದರ್ಶಿಕೆಯನ್ನು ಅಧ್ಯಕ್ಷ ಜವರೇಗೌಡ ಬಿಡುಗಡೆಗೊಳಿಸಿದರು. ಈ ವೇಳೆ ಸಂಘದ ಉಪಾಧ್ಯಕ್ಷ ಸಿ.ರವಿಶಂಕರ್, ಪುಟ್ಟಸ್ವಾಮಿ, ಬಸವಣ್ಣ, ಭಾಸ್ಕರ್, ಸುರೇಂದ್ರಕುಮಾರ್, ಮಂಜುಕುಮಾರ್, ಶಂಭು, ಶೀಲಾ, ಮೈತ್ರಿ, ಮಹಾದೇವಸ್ವಾಮಿ, ರಾಜು, ಶಿವಕುಮಾರ್, ಸಿದ್ದಪ್ಪಾಜಿ, ಮೋಹನ್‌ಕುಮಾರ್, ಸುರೇಶ್ ಉಪಸ್ಥಿತರಿದ್ದರು.

ಸಮಾನಮನಸ್ಕರ ವೇದಿಕೆಯಿಂದ ಜ.11ಕ್ಕೆ ಪ್ರತಿಭಟನೆ



ಎಂಎಲ್‌ಸಿ ಸಿ.ಟಿ.ರವಿ ಹೇಳಿಕೆ ಖಂಡಿಸಿ ಪ್ರತಿಭಟನೆಗೆ ಸಮಾನ ಮನಸ್ಕರ ವೇದಿಕೆ ಸದಸ್ಯರು ಪೂರ್ವಭಾವಿ ಸಭೆ ನಡೆಸಿದರು.

ಮೈಸೂರು, ಜ.4(ಎಸ್‌ಪಿಎನ್)– ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಅಪಮಾನ, ದೇಶದಲ್ಲಿನ ದ್ವೇಷ ರಾಜಕಾರಣ ಹಾಗೂ ಎಂಎಲ್ಸಿ ಸಿ.ಟಿ.ರವಿ, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಅವಹೇಳನಕಾರಿ ಹೇಳಿಕೆ ಖಂಡಿಸಿ ಜ.7ರಂದು ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಜ.11ರಂದು ಸಂಜೆ 4 ಗಂಟೆಗೆ ಚಿಕ್ಕ ಗಡಿಯಾರದ ಬಳಿ ನಡೆಸಲು ಸಮಾನಮನಸ್ಕರ ವೇದಿಕೆ ಸದಸ್ಯರು ತೀರ್ಮಾನಿಸಿದ್ದಾರೆ.

ಮೈಸೂರು ಜಲದರ್ಶಿನಿ ಅತಿಥಿಗೃಹದಲ್ಲಿ ನಡೆದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. ರಂಗಾಯಣ ಮಾಜಿ ನಿರ್ದೇಶಕ ಎಚ್.ಜನಾರ್ಧನ್(ಜನ್ನಿ) ಸಭೆಗೆ ಮಾಹಿತಿ ನೀಡಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಡಾ.ಬಿ.ಆರ್. ಅಂಬೇಡ್ಕರ್ ವಿರುದ್ಧ ನೀಡಿದ ಹೇಳಿಕೆ, ಪ್ರಸ್ತುತ ರಾಷ್ಟ್ರ ರಾಜಕಾರಣದಲ್ಲಿ ನಡೆಯುತ್ತಿರುವ ದ್ವೇಷ ರಾಜಕಾರಣ, ವಿಧಾನಪರಿಷತ್‌ನಲ್ಲಿ ಎಂಎಲ್‌ಸಿ ಸಿ.ಟಿ.ರವಿ ಅವರು, ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಕುರಿತು ಆಡಿದ ಮಾತುಗಳನ್ನು ಎಂದಿಗೂ ಒಪ್ಪಲು ಸಾಧ್ಯವಿಲ್ಲ. ಈ ಘಟನೆಗಳನ್ನು ಪ್ರತಿಯೊಬ್ಬ ನಾಗರಿಕನೂ ವಿರೋಧಿಸಬೇಕು ಎಂದರು.

ಈ ಸಂದರ್ಭದಲ್ಲಿ ಮೈಸೂರಿನ ಡಾ.ಬಿ.ಆರ್.ಅಂಬೇಡ್ಕರ್ ಅನುಯಾಯಿಗಳು, ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಜ.7ರಂದು ಹಮ್ಮಿಕೊಂಡಿದ್ದ ಮೈಸೂರು ಬಂದ್ ಯಶಸ್ವಿಗೊಳಿಸಬೇಕಿದೆ. ಹಾಗಾಗಿ ಜ.7ರಂದು ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಜ.11ರಂದು ನಡೆಸಲು ಒಮ್ಮತ ತೀರ್ಮಾನದಂತೆ ದಿನಾಂಕ ನಿಗದಿಪಡಿಸಲಾಗಿದೆ ಎಂದರು. ಸಭೆ ಮುಗಿದ ಬಳಿಕ ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿಗೆ ಭಾಜನರಾದ ಹಿರಿಯ ಪತ್ರಕರ್ತ ಟಿ.ಗುರುರಾಜ್ ಅವರನ್ನು ಗೌರವಿಸಲಾಯಿತು.

ಈ ವೇಳೆ ಸಮಾನಮನಸ್ಕರ ವೇದಿಕೆ ಸದಸ್ಯರಾದ ನಾ.ದಿವಾಕರ್, ಚಿಂತನ ಚಿತ್ತಾರ ಪ್ರಕಾಶನದ ನಿಂಗರಾಜ್ ಚಿತ್ತಣ್ಣವರ್, ಸವಿತ ಪ.ಮಲ್ಲೇಶ್, ಕಮಲ್ ಗೋಪಿನಾಥ್, ಕರ್ನಾಟಕ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್, ಜಗನ್ನಾಥ್, ಎಂ.ಎಫ್.ಕಲೀಂ, ವಿಜಯ್‌ಕುಮಾರ್, ನಿವೃತ್ತ ಪ್ರಾಧ್ಯಾಪಕಿ ಸಬಿಹಾ ಭೂಮಿಗೌಡ, ರತಿರಾವ್, ಗೋಪಾಲಕೃಷ್ಣ, ರಂಗಾಯಣ ನಿವೃತ್ತ ಕಲಾವಿದ ರಾಮು ಸೇರಿದಂತೆ ಇತರರಿದ್ದರು.

2ಎ ಮೀಸಲಾತಿ ರಕ್ಷಣೆಗೆ ಸಣ್ಣಸಣ್ಣ ಸಮುದಾಯ ಒಂದಾಗಬೇಕು

ವಿವಿಧ ಕ್ಷೇತ್ರದ ಗಣ್ಯರಿಗೆ ಅಭಿನಂದನೆ ಸಮಾರಂಭದಲ್ಲಿ ಕೆ.ಎಸ್.ಶಿವರಾಮ್ ಅಭಿಮತ

ಮೈಸೂರು,ಜ.4(ಎಸ್‌ಪಿಎನ್)– ಹಿಂದುಳಿದ ವರ್ಗಗಳಿಗೆ ಮೀಸಲಾಗಿರುವ '2ಎ' ಮೀಸಲಾತಿ ರಕ್ಷಣೆಗೆ ಸಣ್ಣಸಣ್ಣ ಸಮುದಾಯಗಳು ಒಗ್ಗೂಡಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮ್ ಮನವಿ ಮಾಡಿದರು.

ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಗಾಣಿಗ ಮಹಾಸಭಾ ಆಯೋಜಿಸಿದ್ದ ವಿವಿಧ ಕ್ಷೇತ್ರದ ಗಣ್ಯರಿಗೆ ಅಭಿನಂದಿಸುವ ಸಮಾರಂಭದಲ್ಲಿ ಮಾತನಾಡಿದರು.

ಲಿಂಗಾಯತ ಪಂಚಮಸಾಲಿ ಸಮುದಾಯ 2ಎ ಮೀಸಲಾತಿಗಾಗಿ ಬೇಡಿಕೆಯಿಟ್ಟು ಹೋರಾಟ ಆರಂಭಿಸಿದೆ. ಈ ಸಮುದಾಯ 2ಎ ಮೀಸಲಾತಿ ಪಡೆದರೆ, ಪ್ರಸ್ತುತ '2ಎ' ಕೆಟಗರಿಯಲ್ಲಿರುವ 202 ಸಣ್ಣಸಣ್ಣ ಸಮುದಾಯಗಳಿಗೆ ಯಾವುದೇ ಕ್ಷೇತ್ರದಲ್ಲೂ ಮನ್ನಣೆ ಇರುವುದಿಲ್ಲ. ಹಾಗಾಗಿ ಇದನ್ನು ವಿರೋಧಿಸಿ, ಸಣ್ಣಸಣ್ಣ ಸಮುದಾಯಗಳು ರಾಜ್ಯ ಸರ್ಕಾರದ ಮೇಲೆ ಒತ್ತಡ ತರಬೇಕು ಎಂದು ಸಲಹೆ ನೀಡಿದರು.



ಅಭಿನಂದನಾ ಸಮಾರಂಭದಲ್ಲಿ ಗಾಣಿಗ ಮಹಾಸಭಾದ 2025ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಬೆಳಗಾವಿ ಅಧಿವೇಶನ ಸಂದರ್ಭದಲ್ಲಿ ಪಂಚಮಸಾಲಿ ಪೀಠದ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ನಡೆದ ಪ್ರತಿಭಟನೆ ಮೂಲಕ ಸರ್ಕಾರದ ಮೇಲೆ ಒತ್ತಡ ತಂದಿದ್ದರು. ಆದರೆ, ರಾಜ್ಯ ಸರ್ಕಾರ ಪ್ರತಿಭಟನೆಯಲ್ಲಿ ಭಾಗವಹಿಸಿದವರ ವಿರುದ್ಧ ಲಾಠಿ ಪ್ರಯೋಗಿಸಿ ಚದುರಿಸಿದ ಪ್ರಸಂಗ ನಡೆದಿದೆ ಎಂದರು.

ಇದು ಇಷ್ಟಕ್ಕೆ ತಣ್ಣಗಾಗುವ ವಿಷಯವಲ್ಲ. ಅಧಿಕಾರ ಚಲಾಯಿಸುವ ಜಾಗದಲ್ಲಿ ಶೇ.15ರಷ್ಟು ಮೀಸಲಾತಿ ಪಡೆಯುವ ಎಲ್ಲಾ ಸಮುದಾಯಗಳು ಇರಬೇಕು. ಆಗ ಮಾತ್ರ ನಮ್ಮ ಹಕ್ಕು ರಕ್ಷಣೆ ಸಾಧ್ಯ. ಪ್ರಬಲ ಜಾತಿಗಳ ಹುನ್ನಾರಗಳನ್ನು ಬಯಲು ಮಾಡಲು ಕುಂಬಾರ, ಗಾಣಿಗ, ಮಡಿವಾಳ, ಕುರುಬ, ಸವಿತಾ ಸಮಾಜ ಸೇರಿದಂತೆ ಇತರೆ ಸಮುದಾಯದ ಮುಖಂಡರು ಮೀಸಲಾತಿ ಕುರಿತು ಸದಾ ಜಾಗೃತಿ ಹೊಂದಿರಬೇಕು. ಧೈರ್ಯವಾಗಿ ಪ್ರಶ್ನೆ ಮಾಡಬೇಕು ಎಂದು ಎಚ್ಚರಿಸಿದರಲ್ಲದೆ, ರಾಜ್ಯದಲ್ಲಿ ಗಾಣಿಗ ಸಮುದಾಯ ರಾಜಕೀಯವಾಗಿ ಗುರುತಿಸಿಕೊಂಡಿಲ್ಲ. ಆದರೆ, ಈ ಸಮುದಾಯದ ವ್ಯಕ್ತಿಯೊಬ್ಬರು ಈ ರಾಷ್ಟ್ರದ ಪ್ರಧಾನ ಮಂತ್ರಿ ಹುದ್ದೆ ಅಲಂಕರಿಸಿ, ಉತ್ತಮ ಆಡಳಿತ ನೀಡುತ್ತಿರುವುದು ನಾವೆಲ್ಲರೂ ಸಂತೋಷಪಡುವ ಸಂಗತಿ ಎಂದರು. ಈ ವೇಳೆ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಯಿತು. ನಂತರ ಗಾಣಿಗ ಮಹಾಸಭಾ ಹೊರ ತಂದಿರುವ 2025ರ ಸಾಲಿನ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ವಿಧಾನಪರಿಷತ್ ಮಾಜಿ ಸದಸ್ಯ, ಕೆಪಿಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಜ್ಯಾಧ್ಯಕ್ಷ ಆರ್.ಧರ್ಮಸೇನಾ, ಬಿಜೆಪಿ ಮುಖಂಡ ಡಾ.ಶುಶ್ರುತ್‌ಗೌಡ, ರೈಲ್ವೆ ಇಲಾಖೆ ನೌಕರ ಆನಂದ್, ಎಂ.ಚಂದ್ರಶೇಖರ್, ಗಾಣಿಗ ಮಹಾಸಭಾ ಅಧ್ಯಕ್ಷ ಡಾ.ಕೆ.ವಿಜಯಕುಮಾರ್, ಮಾಜಿ ಮೇಯರ್ ಅನಂತು, ರೆಡ್ ಎಂಎಫ್ ಆರ್‌ಜೆ ಸುನಿಲ್ ಸೇರಿದಂತೆ ಇತರರಿದ್ದರು.

ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ನಾಯಕರ ನಡೆ ಖಂಡಿಸಿ

ಪ್ರಗತಿಪರ ಸಂಘಟನೆಗಳ ಪ್ರತಿಭಟನೆ

ಕಾಂಗ್ರೆಸ್‌ನಲ್ಲಿ ದಲಿತ ನಾಯಕರು ಬೆಳೆಯುವುದು ಬಿಜೆಪಿಗೆ ಇಷ್ಟವಿಲ್ಲ: ಡಾ.ಮೂರ್ತಿ ಕಿಡಿ



ಪ್ರಗತಿಪರ ಸಂಘಟನೆ ಕಾರ್ಯಕರ್ತರು ಬಿಜೆಪಿ ನಾಯಕರ ವಿರುದ್ಧ ಘೋಷಣೆ ಕೂಗಿ, ಆಕ್ರೋಶ ವ್ಯಕ್ತಪಡಿಸಿ, ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಮಂಡ್ಯ: ಗ್ರಾಮೀಣಾಭಿವೃದ್ಧಿ ಮತ್ತು ಐಟಿ ಬಿಟಿ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ನಾಯಕರ ನಡೆ ಖಂಡಿಸಿ ಪ್ರಗತಿಪರ ಸಂಘಟನೆಗಳ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಾಗೂ ತಮಟೆ ಚಳವಳಿ ನಡೆಸಲಾಯಿತು.

ಶನಿವಾರ ನಗರದ ಜಯಚಾಮರಾಜೇಂದ್ರ ವೃತ್ತದ ಬಳಿ ಜಮಾಯಿಸಿದ ನೂರಾರು ಮಂದಿ ವಿವಿಧ ಪ್ರಗತಿಪರ ಸಂಘಟನೆ ಕಾರ್ಯಕರ್ತರು, ಬಿಜೆಪಿ ನಾಯಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಮುಖಂಡ ಡಾ.ಮೂರ್ತಿ ಮಾತನಾಡಿ, ಬಿಜೆಪಿ ನಾಯಕರಿಗೆ ಕಾಂಗ್ರೆಸ್ ಪಕ್ಷದಲ್ಲಿರುವ ದಲಿತ ನಾಯಕರು ಬೆಳೆಯುವುದು ಇಷ್ಟವಿಲ್ಲ. ಈ ಕಾರಣಕ್ಕೆ ಸುಖಾಸುಮ್ಮನೆ ಕಾಂಗ್ರೆಸ್‌ನ ದಲಿತ ನಾಯಕರನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಬಿಜೆಪಿ ಸರ್ಕಾರದಲ್ಲಿ ಬಿಟ್ ಕಾಯಿನ್, ಪಿಎಸ್‌ಐ ಪರೀಕ್ಷಾ ಹಗರಣ ಸೇರಿದಂತೆ ಹಲವು ಭ್ರಷ್ಟಾಚಾರದ ಹಗರಣವನ್ನು ಬಯಲಿಗೆಳೆದ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಬಿಜೆಪಿ ಟಾರ್ಗೆಟ್ ಮಾಡಿದ್ದು, ಅವರ ವಿರುದ್ಧ ಇಲ್ಲಸಲ್ಲದ ಸಂಚು ರೂಪಿಸಿದೆ ಎಂದು ಕಿಡಿಕಾರಿದರು.

ಐಟಿಬಿಟಿ ಮತ್ತು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಯ ಸಚಿವರಾಗಿ ಭ್ರಷ್ಟಾಚಾರ ಮುಕ್ತ ಆಡಳಿತ ನಡೆಸುತ್ತಿರುವ ಪ್ರಿಯಾಂಕ್ ಖರ್ಗೆಯವರ ಶ್ರೇಯಸ್ಸನ್ನು ಬಿಜೆಪಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಐಟಿಬಿಟಿ ಇಲಾಖೆಗೆ ಅಂತರರಾಷ್ಟ್ರೀಯ ವಿದೇಶಿ ಬಂಡವಾಳ ಆಕರ್ಷಿಸುವ ಸಲುವಾಗಿ ಜೊತೆಗೆ ರಾಜ್ಯದ ನಿರುದ್ಯೋಗ ಸಮಸ್ಯೆ ನಿವಾರಿಸಲು ಹಗಲಿರುಳು ಶ್ರಮಿಸುತ್ತಿರುವ ಪ್ರಿಯಾಂಕ್ ವಿರುದ್ಧ ಬಿಜೆಪಿ ಕೋಮುವಾದದ ರಾಜಕಾರಣ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ನಾಯಕರಾದ ಆರ್.ಅಶೋಕ್, ಛಲವಾದಿ ನಾರಾಯಣಸ್ವಾಮಿ, ಸಿ.ಟಿ.ರವಿ ಅವರು ನಿತ್ಯ ಬೆಳಗಾದರೆ ಪ್ರಿಯಾಂಕ್ ಖರ್ಗೆ ಜಪ ಮಾಡುವ ನೀವು ಅವರ ಬದಲು ನಿಮ್ಮ ರಾಷ್ಟ್ರೀಯ ನಾಯಕರನ್ನು ಜಪ ಮಾಡಿದ್ದರೆ ನೀವೆಲ್ಲ ಸ್ವರ್ಗಕ್ಕೆ ಹೋಗಬಹುದಿತ್ತು ಎಂದು ವ್ಯಂಗ್ಯವಾಡಿದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಒಂದೂವರೆ ವರ್ಷ ಕಳೆದಿದೆ. ಸರ್ಕಾರದಿಂದ ಹಲವು ಜನಪ್ರಿಯ ಕಾರ್ಯಕ್ರಮಗಳು ಜಾರಿಗೆ ಬಂದಿವೆ. ಬಿಜೆಪಿ ವಿರೋಧ ಪಕ್ಷವಾಗಿದ್ದುಕೊಂಡು ಜನರ ನೋವುಗಳನ್ನು ಅರಿತು ಈವರೆಗೆ ಒಂದೂ ಕೆಲಸವನ್ನು ಸಹ ಮಾಡಿಲ್ಲ. ಕೇವಲ ಕಾಂಗ್ರೆಸ್ ನಾಯಕರ ತೇಜೋವಧೆ ಮಾಡುವುದು, ದಲಿತ ಮುಖಂಡರ ವಿರುದ್ಧ ಸಂಚು ರೂಪಿಸುವುದೇ ಇವರ ಕೆಲಸವಾಗಿದೆ ಎಂದು ಕಿಡಿಕಾರಿದರು.

ಗುತ್ತಿಗೆದಾರ ಸಚಿನ್ ಪಾಂಚಾಳ್ ಬರೆದಿರುವ ಡೆತ್‌ನೋಟ್‌ನಲ್ಲಿ ರಾಜು ಕಪನೂರ್ ಹಾಗೂ ಅವರ ಸೋದರ ಸಂಬಂಧಿಗಳ ಹೆಸರು ಮಾತ್ರ ಉಲ್ಲೇಖವಿದೆ. ಈ ಬಗ್ಗೆ ತನಿಖೆ ನಡೆಯುತ್ತಿದೆ. ಆದರೆ ಬಿಜೆಪಿ ಕಾರ್ಯಕರ್ತರು ಪ್ರಿಯಾಂಕ್ ಖರ್ಗೆ ಅವರೊಂದಿಗೆ ಕಾಣಿಸಿಕೊಂಡಿರುವ ರಾಜು ಕಪನೂರ್ ಅವರ ಫೋಟೋಗಳನ್ನು ಉದ್ದೇಶಪೂರ್ವಕವಾಗಿ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ದೂರಿದರು.

ಪ್ರಕರಣದಲ್ಲಿ ಪ್ರಿಯಾಂಕ್ ಖರ್ಗೆ ಅವರ ಪಾತ್ರ ಏನೂ ಇಲ್ಲ ಎಂದು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹೇಳಿದ್ದಾರೆ. ಇದರ ಬಗ್ಗೆ ಸಿಐಡಿ ತನಿಖೆಯಾಗಿ ಸತ್ಯಾಸತ್ಯತೆ ಹೊರಬರಲಿ. ಇಡೀ ಸರ್ಕಾರ ಸಮುದಾಯ ಹಾಗೂ ಕಾಂಗ್ರೆಸ್ ಪಕ್ಷ ಪ್ರಿಯಾಂಕ್ ಖರ್ಗೆ ಪರ ಇದೆ. ಕಳಂಕ ರಹಿತ ಖರ್ಗೆಯವರ ವಿರುದ್ಧ ಚ್ಯುತಿ ತರುವ ಕುತಂತ್ರಿ ಕೆಲಸ ಹೀಗೆ ಮುಂದುವರೆದರೆ ರಾಜ್ಯದ ಮೂಲೆ ಮೂಲೆಯಲ್ಲಿಯೂ ಬಿಜೆಪಿ ವಿರುದ್ಧ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಪ್ರಗತಿಪರ ಮುಖಂಡರಾದ ಸುಂಡಹಳ್ಳಿ ಮಂಜುನಾಥ್, ದಸಂಸ ಕೃಷ್ಣ, ಕುರುಬರ ಸಂಘದ ಜಿಲ್ಲಾಧ್ಯಕ್ಷ ಸುರೇಶ್, ಚಿನಕುರಳಿ ರಮೇಶ್, ಬೇವಿನಹಳ್ಳಿ ಕನಕಮ್ಮ, ಅಮ್ಜದ್ ಪಾಷ, ಜಯರಾಂ ಸೇರಿದಂತೆ ನೂರಾರು ಮಂದಿ ಕಾರ್ಯಕರ್ತರಿದ್ದರು.

ಸೋಮನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ಆಯ್ಕೆ



ನೂತನ ಅಧ್ಯಕ್ಷರನ್ನು ಸಂಘದ ನಿರ್ದೇಶಕರು ಹಾಗೂ ಮುಖಂಡರು ಅಭಿನಂದಿಸಿದರು.

ಕೆ.ಆರ್.ಪೇಟೆ: ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಸೋಮನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಭೋಜರಾಜು ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಹಿಂದಿನ ಅಧ್ಯಕ್ಷರಾದ ಎಸ್.ಕೆ.ಸಿದ್ದೇಗೌಡ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಭೋಜರಾಜು ಅಧ್ಯಕ್ಷರಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷರಾದ ಭೋಜರಾಜು ಅವರನ್ನು ಮನ್‌ಮುಲ್ ನಿರ್ದೇಶಕ ಡಾಲು ರವಿ, ಮನ್‌ಮುಲ್ ಮಾಜಿ ಅಧ್ಯಕ್ಷ ಎಂ.ಬಿ.ಹರೀಶ್, ಸಂಘದ ಉಪಾಧ್ಯಕ್ಷ ದೇವರಾಜಯ್ಯ, ನಿರ್ದೇಶಕರುಗಳಾದ ಎಸ್.ಕೆ ಸಿದ್ದೇಗೌಡ ದೇವರಾಜಯ್ಯ ಎ.ಪಿ ಮಧುಸೂದನ್ ಪಿ.ಎಂ.ಶಿವಪ್ಪ ನಾರಾಯಣಗೌಡ ಪಿ.ಪಿ.ಶಶಿಕುಮಾರ್ ಎಸ್.ಪಿ.ರತ್ನಮ್ಮ ಈರೇಗೌಡ ಎ.ಎಸ್.ಪರಮೇಶ್ ಯಜಮಾನ್ ವೆಂಕಟೇಶ್ ಎಸ್‌ಪಿ.ಸಿದ್ದೇಗೌಡ ದೇವರಾಜಣ್ಣ ದೊಡ್ಡಟ್ಟಿ ಸ್ವಾಮೀಗೌಡ ಎಸ್.ಡಿ.ದೇವರಾಜು ಪಿ.ಎಂ ಮಂಜುನಾಥ್ ಪಿ.ಎಂ.ಕಾಳೇಗೌಡ ದ್ಯಾವೇಗೌಡ ಹೋರಿ ಗೋವಿಂದೇಗೌಡ ಮಧು ಮಾಂಬಳ್ಳಿ ಜಯರಾಮ್, ವಿಜಯ್ ಆರಾಧ್ಯ, ಶಾಂತಕುಮಾರ್, ಚಿಕ್ಕೇಗೌಡ, ಕಾಶಿಆರಾಧ್ಯ, ಎಸ್.ಕೆ.ಕಾಳೇಗೌಡ, ಕಾರ್ಯದರ್ಶಿ ಮಂಜೇಗೌಡ, ಇತರರು ಅಭಿನಂದಿಸಿದರು.

ಪಠ್ಯೇತರ ಶಿಕ್ಷಣದಿಂದ ಮಕ್ಕಳ ಭವಿಷ್ಯ ಉಜ್ವಲ



ಶಾಲಾ ವಾರ್ಷಿಕೋತ್ಸವವನ್ನು ನಿವೃತ್ತ ಪ್ರಾಧ್ಯಾಪಕ ಡಾ.ಎಚ್.ಆರ್.ತಿಮ್ಮೇಗೌಡ ಉದ್ಘಾಟಿಸಿದರು.

ಪಾಂಡವಪುರ, ಜ.4– ಪಠ್ಯದ ಜೊತೆಗೆ ಪಠ್ಯೇತರ ಶಿಕ್ಷಣದಿಂದ ದೊರೆಯುವ ಜ್ಞಾನ ಮಕ್ಕಳ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಕಷ್ಟು ಅನುಕೂಲವಾಗಲಿದೆ ಎಂದು ಭಾರತೀಯ ವಾಯುಸೇನೆಯ ನಿವೃತ್ತ ಗ್ರೂಪ್ ಕ್ಯಾಪ್ಟನ್ ಎನ್.ಆರ್.ರವಿ ಹೇಳಿದರು.

ಪಟ್ಟಣದ ರೋಟರಿ ಎಜುಕೇಷನ್ ಟ್ರಸ್ಟ್‌ನ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಸಾಮಾನ್ಯ ಜ್ಞಾನವನ್ನು ಬೆಳೆಸಿಕೊಳ್ಳಬೇಕು, ನಾಲ್ಕಾರು ಮಂದಿಯ ಜತೆ ಬೆರೆಯಬೇಕು, ನಾಲ್ಕಾರು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಜ್ಞಾನವೃದ್ಧಿಸಿಕೊಳ್ಳಬೇಕು. ಜೀವನದಲ್ಲಿ ಸರ್ವಜ್ಞನ ಮಾತುಗಳನ್ನು ಕರಗತ ಮಾಡಿಕೊಂಡರೆ ಉತ್ತಮ ಬದುಕುಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.

ಡಾ.ಎ.ಪಿ.ಜೆ.ಅಬ್ದುಲ್ ಕಲಾಂ ಅವರು ಹೇಳಿದಂತೆ ಮಕ್ಕಳು ಜೀವನದಲ್ಲಿ ದೊಡ್ಡಮಟ್ಟದಲ್ಲಿ ಕನಸು ಕಾಣಬೇಕು, ಜಾಗ ಯಾವುದೇ ಇರಲಿ ಮಕ್ಕಳು ಕೀಳರಿಮೆಯ ಭಾವನೆಗಳನ್ನು ಬಿಟ್ಟು ದೊಡ್ಡ ಕನಸು ಕಾಣಬೇಕು, ನಮ್ಮ ಕನಸಿಗೆ ಮಿತಿ ಇರಬಾರದು, ಆಗ ಯಶಸ್ಸುಗಳಿಸಲು ಸಾಧ್ಯವಾಗುತ್ತದೆ, ಹಾಗಾಗಿ ಮಕ್ಕಳು ಜೀವನದಲ್ಲಿ ಶಿಸ್ತು ಬೆಳೆಸಿಕೊಂಡು ಓದುವ ಕಡೆಗೆ ಮುಂದಾಗಬೇಕು ಎಂದು ತಿಳಿಸಿದರು.

ನಿವೃತ್ತ ಪ್ರಾಧ್ಯಾಪಕ ಡಾ.ಎಚ್.ಆರ್.ತಿಮ್ಮೇಗೌಡ ಮಾತನಾಡಿದರು. ಇದೇ ವೇಳೆ ಶಾಲೆಯ ಸಂಸ್ಥಾಪಕ ಅಧ್ಯಕ್ಷ ಎನ್.ಟಿ.ರಂಗನಾಥನ್ ಅವರನ್ನು ಅಭಿನಂದಿಸಲಾಯಿತು.

ಇದೇ ವೇಳೆ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು, ಹಲವು ಹಾಡುಗಳಿಗೆ ಮಕ್ಕಳು ಅಮೋಘ ನೃತ್ಯ ಪ್ರದರ್ಶನ ನೀಡುವ ಮೂಲಕ ಪೋಷಕರನ್ನು ರಂಜಿಸಿದರು. 2021–22, 2022–33, 2023–24ನೇ ಸಾಲಿನ ಮಾರ್ಚ್–ಏಪ್ರಿಲ್ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ನಗದು ಬಹುಮಾನ ವಿತರಿಸಲಾಯಿತು.

ರೈತರು ಭತ್ತ, ಕಬ್ಬು ಜೊತೆಗೆ ತೆಂಗನ್ನು ಉಪಕಸುಬಾಗಿ ಬೆಳೆಯಬೇಕು



ಮಂಡ್ಯ: ರೈತರು ಭತ್ತ ಹಾಗೂ ಕಬ್ಬು ಬೆಳೆಯ ಜೊತೆಗೆ ತೆಂಗು ಬೆಳೆಯನ್ನು ಉಪಕಸುಬಾಗಿ ಬೆಳೆದರೆ ಕಷ್ಟದಲ್ಲಿ ರೈತರಿಗೆ ಸಣ್ಣಪುಟ್ಟ ಖರ್ಚು ನಿಭಾಯಿಸಲು ಸಾಧ್ಯವಾಗುತ್ತದೆ ಎಂದು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಚೆಸ್ಕಾಂ ಅಧ್ಯಕ್ಷ ಎ.ಬಿ.ರಮೇಶ ಬಂಡಿಸಿದ್ದೇಗೌಡ ತಿಳಿಸಿದರು.

ನಗರದ ತೋಟಗಾರಿಕೆ ಇಲಾಖೆಯ ಕಚೇರಿ ಸಭಾಂಗಣದಲ್ಲಿ ತೋಟಗಾರಿಕೆ ಇಲಾಖೆ ಹಾಗೂ ಜಿಲ್ಲಾ ಪಂಚಾಯತ್ ವತಿಯಿಂದ 2024–25ನೇ ಸಾಲಿನ ತೆಂಗು ಬೆಳೆಯಲ್ಲಿ ರೋಗ ಮತ್ತು ಕೀಟಗಳ ನಿಯಂತ್ರಣದ ಬಗ್ಗೆ ರೈತರಿಗೆ ವಿಚಾರ ಸಂಕಿರಣ ಹಾಗೂ ತೆಂಗು ಅಭಿವೃದ್ಧಿ ಮಂಡಳಿ ಯೋಜನೆಯಡಿ ರೈತರಿಗೆ ಪರಿಕರಗಳ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವರ ಪ್ರಯತ್ನದಿಂದಾಗಿ ಜಿಲ್ಲೆಯಲ್ಲಿ 5 ಸಾವಿರ ಹೆಕ್ಟೇರ್ ತೆಂಗು ಬೆಳೆಯುವ ಕುಟುಂಬಕ್ಕೆ ಒಂದು ಕುಟುಂಬಕ್ಕೆ ವರ್ಷಕ್ಕೆ ಹದಿನೇಳುವರೆ ಸಾವಿರ ಬೆಲೆಬಾಳುವ ಗೊಬ್ಬರ ಹಾಗೂ ಪೋಷಕಾಂಶಗಳನ್ನು ವಿತರಿಸಲಾಗುತ್ತಿದೆ ಆದ್ದರಿಂದ ರೈತ ಬಾಂಧವರು ತೆಂಗಿನ ಬೆಳೆಗೆ ಮಾತ್ರ ಗೊಬ್ಬರವನ್ನು ಉಪಯೋಗಿಸಿ ಎಂದು ಸಲಹೆ ನೀಡಿದರು.

ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿ 600 ರಿಂದ 700 ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯುವ ರೈತರಿಗೆ ಗೊಬ್ಬರದ ಪೋಷಕಾಂಶಗಳನ್ನು ವಿತರಿಸುತ್ತಿದ್ದೇವೆ ಎಂದು ಹೇಳಿದರು.

ತೆಂಗಿನ ಗಿಡ ನೆಟ್ಟು ಒಂದರಿಂದ ಎರಡು ವರ್ಷ ಆಗಿರುವ ರೈತರನ್ನು ಈ ವ್ಯಾಪ್ತಿಗೆ ತರಬೇಕು ಎಂದು ಚಿಂತನೆ ಮಾಡಲಾಗಿದ್ದು ಅಕ್ಕ ಪಕ್ಕದ ರೈತರಿಗೂ ಈ ವಿಚಾರವನ್ನು ತಿಳಿಸಿ ತೋಟಗಾರಿಕೆ ಇಲಾಖೆಯಲ್ಲಿ ರೈತರು ನೋಂದಣಿ ಮಾಡಿಸಿಕೊಳ್ಳಿ ಎಂದು ಹೇಳಿದರು.

ಜಿಲ್ಲಾ ತೋಟಗಾರಿಕೆ ಇಲಾಖೆ ಉಪ ನಿರ್ದೇಶಕಿ ರೂಪಶ್ರೀ ಮಾತನಾಡಿ, ಈಗ ಎಲ್ಲಾ ಕಡೆ ತೆಂಗಿನ ಮರಗಳು ಹಾಳಾಗುತ್ತಿದೆ. ರೈತರು ಭತ್ತಕ್ಕೆ ಹಾಗೂ ರಾಗಿಗೆ ಕೊಡುವಷ್ಟು ಗೊಬ್ಬರವನ್ನು, ಪೋಷಕಾಂಶಗಳನ್ನು ತೆಂಗಿಗೆ ಕೊಡುವುದಿಲ್ಲ. ಒಂದಷ್ಟು ಫಸಲು ಬಂದ ಮೇಲೆ ಕಾಯಿ ಎಳನೀರು ಎಂದು ಗಮನಹರಿಸುತ್ತಾರೆ. ಅದಕ್ಕೆ ಆದ ಪೋಷಕಾಂಶ ಹಾಗೂ ಗೊಬ್ಬರವನ್ನು ಕೊಡದೆ ಹೋದರೆ ತೆಂಗಿನ ಮರಗಳು ಹಾಳಾಗುತ್ತವೆ. ಅದಕ್ಕಾಗಿ ಎರಡು ವರ್ಷಗಳಿಗೆ ಫಸಲು ಬಿಡುವ ರೈತರನ್ನು ಆಯ್ಕೆ ಮಾಡಿಕೊಂಡು ಅವರಿಗೆ ವಿವಿಧ ಹಂತದಲ್ಲಿ ಸಾವಯವ ಗೊಬ್ಬರ, ಸಮಗ್ರ ಪೋಷ ಕಾಂಶ, ಸಮಗ್ರ ಕೀಟ ನಿಯಂತ್ರಣ ಮಾಡಲು ಹಲವಾರು ಔಷಧಿಗಳು ಹಾಗೂ ಗೊಬ್ಬರಗಳನ್ನು ವಿತರಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದು ಹೇಳಿದರು.

ಕೃಷಿ ವಿಜ್ಞಾನಿ ಡಾ.ವೆಂಕಟೇಶ್ ಮಾತನಾಡಿ ತೆಂಗು ಬೆಳೆ ಒಂದು ವಾಣಿಜ್ಯ ಬೆಳೆಯಾಗಿದ್ದು ಹೆಚ್ಚು ಅಂತರದಲ್ಲಿ ಬೆಳೆಯುವ ದೀರ್ಘಾವಧಿ ಬೆಳೆಯಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ರೈತರು ತೆಂಗು ಹಾಗೂ ಅಡಿಕೆ ಬೆಳೆಯುವ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುತ್ತಿದ್ದಾರೆ. ಇದರಿಂದ ರೈತರಿಗೆ ಹೆಚ್ಚಿನ ಲಾಭ ಬರುತ್ತಿದೆ. ಕೂಲಿ ಆಳುಗಳ ಸಮಸ್ಯೆಯಿಂದ ವಾಣಿಜ್ಯ ಬೆಳೆ ಕಡೆ ರೈತರು ಹೆಚ್ಚಿನ ಆಸಕ್ತಿ ವಹಿಸುತ್ತಿದ್ದಾರೆ ಎಂದರು.

ಈ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕಿ ಶಶಿಕಲಾ, ಮುಖಂಡ ಜವರೇಗೌಡ ಇದ್ದರು.

ಒಂದನೇ ಪುಟದಿಂದ

ಬಸ್ ಪ್ರಯಾಣ ದರ ಏರಿಕೆ

ಹೆಚ್ಚಿನವು ಐಷಾರಾಮಿ ಮತ್ತು ಸ್ಲೀಪರ್ ಬಸ್‌ಗಳಾಗಿವೆ. ಐಷಾರಾಮಿ ಮತ್ತು ವೇಗದೂತ ಬಸ್‌ಗಳಿಂದ ನಿಗಮಕ್ಕೆ ಹೆಚ್ಚು ಆದಾಯ ಬರುತ್ತಿರುವ ಹಿನ್ನೆಲೆಯಲ್ಲಿ ಅವುಗಳ ಸೇವೆ ಮತ್ತಷ್ಟು ಹೆಚ್ಚಿಸಲು ಹೊಸ ಬಸ್‌ಗಳನ್ನು ಖರೀದಿಸಲಾಗುತ್ತಿದೆ. ಆಂಧ್ರಪ್ರದೇಶ, ತೆಲಂಗಾಣ, ಮಹಾರಾಷ್ಟ್ರದಲ್ಲಿನ ಸಾರಿಗೆ ದರ ಪ್ರತಿ ಕಿಲೋ ಮೀಟರ್‌ಗೆ ಹೋಲಿಸಿದರೆ ಕರ್ನಾಟಕದ ಸಾರಿಗೆ ಸಂಸ್ಥೆಗಳ ಬಸ್ ಪ್ರಯಾಣ ದರ ತೀರಾ ಕಡಿಮೆಯಾಗಿದೆ ಎಂದು ಸರ್ಕಾರ ಸಮರ್ಥಿಸಿಕೊಂಡಿದೆ.

ರಾಜ್ಯ ಸಾರಿಗೆ ಸಂಸ್ಥೆಗಳ ಬಸ್ ಪ್ರಯಾಣ ದರವನ್ನು ಶೇ.33ರಷ್ಟು ಹಾಗೂ ಬಿಎಂಟಿಸಿ ಬಸ್ ಪ್ರಯಾಣ ದರವನ್ನು ಶೇ.42ರಷ್ಟು ಪರಿಷ್ಕರಿಸುವಂತೆ ಸರ್ಕಾರವನ್ನು ಕೋರಲಾಗಿತ್ತಾದರೂ, ಕೂಲಂಕಷ ಚರ್ಚೆ ನಂತರ ಸರ್ಕಾರ ಒಟ್ಟಾರೆಯಾಗಿ ಎಲ್ಲಾ ನಿಗಮಗಳು ಶೇಕಡ 15ರಷ್ಟು ದರ ಏರಿಕೆ ಮಾಡಲು ಅನುಮೋದನೆ ನೀಡಲಾಯಿತು ಎಂದು ಸರ್ಕಾರದ ಆದೇಶದಲ್ಲಿ ತಿಳಿಸಲಾಗಿದೆ.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ನೇತೃತ್ವದ ಉನ್ನತ ಮಟ್ಟದ ಸಮಿತಿ ನೀಡಿದ ವರದಿಯ ಶಿಫಾರಸಿನ ಆಧಾರದ ಮೇಲೆ ದರ ಹೆಚ್ಚಳ ಜೊತೆಗೆ ಸಂಪನ್ಮೂಲ ಕ್ರೋಡೀಕರಣಕ್ಕೂ ಕೆಲವು ಕಾರ್ಯಕ್ರಮಗಳನ್ನು ಅಳವಡಿಸಿಕೊಳ್ಳಲು ಕಳೆದ ಗುರುವಾರ ಸೇರಿದ್ದ ಸಚಿವ ಸಂಪುಟ ಅನುಮೋದನೆ ನೀಡಿದೆ.

ನಿಗಮಗಳನ್ನು ಉಳಿಸುವ ಮತ್ತು ಕಾರ್ಮಿಕರ ವೇತನ ಮತ್ತು ಇತರೆ ಭತ್ಯೆ ಭರಿಸಲು ಹಣಕಾಸು ಸಂಸ್ಥೆಗಳಿಂದ 2,000 ಕೋಟಿ ರೂ. ಸಾಲ ಪಡೆಯಲೂ ಅನುಮತಿ ನೀಡಲಾಗಿದೆ. ಸಾರಿಗೆ ನೌಕರರು ತಮ್ಮ ವೇತನ ಹೆಚ್ಚಳ ಮತ್ತು ಭತ್ಯೆ ಸೇರಿದಂತೆ ವಿವಿಧ ಬೇಡಿಕೆಗಳಿಗೆ ಒತ್ತಾಯಿಸಿ ಮುಷ್ಕರಕ್ಕೆ ಕರೆ ನೀಡಿದ ಬೆನ್ನಲ್ಲೇ ಎಚ್ಚೆತ್ತುಕೊಂಡ ಸರ್ಕಾರ ಪ್ರಯಾಣ ದರ ಏರಿಕೆ ನಿರ್ಧಾರ ಕೈಗೊಂಡಿದೆ

ಮೈಸೂರಿನಿಂದ ಇತರೆಡೆಗೆ ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ಪರಿಷ್ಕೃತ ದರ

ಪ್ರದೇಶಗಳು	ಪ್ರಸ್ತುತ ದರ	ಪರಿಷ್ಕೃತ ದರ	ಹೆಚ್ಚಳ
ಬೆಂಗಳೂರು ಕೆಬಿಎಸ್	145	167	22
ಬೆಂಗಳೂರು MRBS	139	160	21
ಚನ್ನಪಟ್ಟಣ	90	104	14
ರಾಮನಗರ	100	115	15
ಕನಕಪುರ	107	124	17
ಕೆ.ಆರ್.ನಗರ	50	58	8
ಹುಣಸೂರು	50	58	8
ಪಿರಿಯಾಪಟ್ಟಣ	70	81	11
ಹೆಚ್.ಡಿ.ಕೋಟೆ	56	65	9
ತಿ.ನರಸೀಪುರ	37	43	6
ನಂಜನಗೂಡು	34	40	6
ಚಾಮರಾಜನಗರ	72	75	3
ಗುಂಡ್ಲುಪೇಟೆ	72	75	3
ಕೊಳ್ಳೇಗಾಲ	71	75	4
ಯಳಂದೂರು	65	75	10
ಮಡಿಕೇರಿ	130	144	14
ವಿರಾಜಪೇಟೆ	130	138	8
ಸೋಮವಾರಪೇಟೆ	125	144	19
ಮಂಡ್ಯ	50	58	8
ಮದ್ದೂರು	65	75	10
ಮಳವಳ್ಳಿ	50	58	8
ಶ್ರೀರಂಗಪಟ್ಟಣ	28	33	5
ಕೆ.ಆರ್.ಪೇಟೆ	60	69	9
ನಾಗಮಂಗಲ	80	92	12
ಪಾಂಡವಪುರ	37	43	6
ಆನೇಕಲ್	184	212	28
ದೊಡ್ಡಬಳ್ಳಾಪುರ	196	226	30
ದೇವನಹಳ್ಳಿ	190	219	29
ಹೊಸಕೋಟೆ	190	219	29
ಹಾಸನ	125	144	19
ಬೇಲೂರು	163	188	25
ಹೊಳೇನರಸೀಪುರ	95	110	15
ಅರಸೀಕೆರೆ	145	167	22
ಚನ್ನರಾಯಪಟ್ಟಣ	95	110	15
ಅರಕಲಗೂಡು	120	138	18
ಸಕಲೇಶಪುರ	163	188	25
ಮಂಗಳೂರು	270	311	41

ಮೈಸೂರು–ಬೆಂಗಳೂರು

	ಪ್ರಸ್ತುತ ದರ	ನೂತನ ದರ
ಎಲೆಕ್ಟ್ರಿಕ್ ವಾಹನ	380	430
ಐರಾವತ ಕ್ಲಬ್ ಕ್ಲಾಸ್	410	460
ರಾಜಹಂಸ	250	280

ಪ್ರೊ.ಮುಜಾಫರ್ ಅಸ್ಸಾದಿ ನಿಧನ

ಕುಲಪತಿ ಪ್ರೊ. ಎನ್.ಕೆ. ಲೋಕನಾಥ್ ಇಂದು ಬೆಳಗ್ಗೆ ಅಗಲಿದ ಹಿರಿಯ ಸಹೋದ್ಯೋಗಿಯ ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛವಿರಿಸಿ ಅಂತಿಮ ನಮನ ಸಲ್ಲಿಸಿದರು. ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು, ಅಧಿಕಾರಿಗಳು, ಸಿಬ್ಬಂದಿ ಹಾಗೂ ಶಿಷ್ಯವೃಂದ ಪ್ರೊ. ಮುಜಾಫರ್ ಅಸ್ಸಾದಿ ಅವರ ನಿಧನಕ್ಕೆ ಶೋಕ ವ್ಯಕ್ತಪಡಿಸಿದ್ದಾರೆ. ಉಡುಪಿ ಜಿಲ್ಲೆ, ಶಿರ್ವದಲ್ಲಿ 1961ರ ಆಗಸ್ಟ್ 24ರಂದು ಜನಿಸಿದ ಪ್ರೊ. ಅಸ್ಸಾದಿ ಅವರು, 1989–91ರಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿದ್ದರು. ನಂತರ 1991–94ರಲ್ಲಿ ಖಾಯಂ ಉಪನ್ಯಾಸಕರಾಗಿ ಗೋವಾ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಿದ್ದರು. 1994ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದಲ್ಲಿ ರೀಡರ್ ಆಗಿ ಸೇವೆ ಆರಂಭಿಸಿ, ಪ್ರಾಧ್ಯಾಪಕರು, ವಿಭಾಗದ ಅಧ್ಯಕ್ಷರೂ ಆಗಿದ್ದರು. ವಿಶ್ವವಿದ್ಯಾನಿಲಯದ ಪ್ರಭಾರ ಕುಲಪತಿಗಳಾಗಿ ಅವರು ಒಂದೂವರೆ ವರ್ಷ ಸೇವೆ ಸಲ್ಲಿಸಿದ್ದರು.

ಶಿಕ್ಷಣ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಪ್ರೊ. ಅಸ್ಸಾದಿ ಅವರಿಗೆ 2011ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಡಿಸ್‌ಪ್ಲೇಸ್‌ಮೆಂಟ್ ಅಂಡ್ ರಿಹಾಬಿಲಿಟೇಷನ್ ಆಫ್ ಟ್ರೈಬಲ್ಸ್ ಕುರಿತ ಕರ್ನಾಟಕ ಉಚ್ಚ ನ್ಯಾಯಾಲಯದಡಿಯ ಸಮಿತಿಯ ಅಧ್ಯಕ್ಷರಾಗಿ, ಸರ್ಕಾರೇತರ ಸಂಘಟನೆಯೊಂದರ ಗವರ್ನಿಂಗ್ ಕೌನ್ಸಿಲ್ ಮೆಂಬರ್ ಆಗಿ, ಮೈಸೂರು ವಿವಿ ಟೀಚರ್ಸ್ ಅಸೋಸಿಯೇಷನ್ ಅಧ್ಯಕ್ಷರಾಗಿ, ಪಠ್ಯಪುಸ್ತಕ ಅಭಿವೃದ್ಧಿ ಸಮಿತಿ ಸದಸ್ಯರಾಗಿ, ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಪಿಯು ಸಿಎಲ್) ಕರ್ನಾಟಕ ಉಪಾಧ್ಯಕ್ಷರಾಗಿಯೂ ಅವರು ಸೇವೆ ಸಲ್ಲಿಸಿದ್ದರು.

ಹಲವು ಶೈಕ್ಷಣಿಕ ಸಂಘಗಳು ಮತ್ತು ಜರ್ನಲ್‌ಗಳ ಸಂಪಾದಕ ಮಂಡಳಿ ಸದಸ್ಯರಾಗಿದ್ದ ಪ್ರೊ. ಮುಜಾಫರ್ ಅಸ್ಸಾದಿ, ರಾಜ್ಯಶಾಸ್ತ್ರ ಕುರಿತ ಇತರ ಅಂತರರಾಷ್ಟ್ರೀಯ ಪಬ್ಲಿಕೇಷನ್‌ಗಳಲ್ಲೂ ಸೇವೆ ಸಲ್ಲಿಸಿದ್ದನ್ನು ಸ್ಮರಿಸಬಹುದು.


ಸಾಮಾಜಿಕ ಬರಹಗಾರ, ಅಂಕಣಕಾರರಾಗಿದ್ದ ಅವರು, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಕಾನ್ಫರೆನ್ಸ್‌ಗಳಲ್ಲಿ ಪಾಲ್ಗೊಂಡು ಪ್ರಬಂಧ ಮಂಡಿಸಿದ್ದರಲ್ಲದೆ, ವಿಶ್ವವಿದ್ಯಾನಿಲಯಗಳ ಸಿಂಡಿಕೇಟ್, ಅಕಾಡೆಮಿಕ್ ಕೌನ್ಸಿಲ್ ಹಾಗೂ ಶೈಕ್ಷಣಿಕ ಸಂಸ್ಥೆಗಳ ಸದಸ್ಯರಾಗಿಯೂ ಕೆಲಸ ಮಾಡಿದ್ದರು. ಇತ್ತೀಚೆಗಷ್ಟೇ ರಂಗಾಯಣದಲ್ಲಿ ಆಯೋಜಿಸಿದ್ದ 'ಅವಸಾನದತ್ತ ನೀಲಗಿರಿ ಕನ್ನಡಿಗರು' ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಪ್ರೊ. ಅಸಾದಿ ಅವರು, ಹೈಕೋರ್ಟ್ ಕಮಿಟಿ ವರದಿ ಬಿಡುಗಡೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಮುಖ್ಯಮಂತ್ರಿ ಸಿದ್ದರಾಮಯ್ಯ ಸಂತಾಪ

ಬೆಂಗಳೂರು, ಜ.4– ಪ್ರೊ.ಮುಜಾಫರ್ ಅಸ್ಸಾದಿ ಅವರ ನಿಧನಕ್ಕೆ ಸಿಎಂ ಸಿದ್ದರಾಮಯ್ಯ ಸಂತಾಪ ಸೂಚಿಸಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ನಮ್ಮೆಲ್ಲರಿಗೆ ಪ್ರೀತಿಪಾತ್ರರಾಗಿದ್ದ ಹಿರಿಯ ವಿದ್ವಾಂಸ ಮತ್ತು ಸಾಮಾಜಿಕ ಚಿಂತಕ ಪ್ರೊ. ಮುಜಾಫರ್ ಅಸ್ಸಾದಿ ಅವರ ಅನಿರೀಕ್ಷಿತ ಸಾವಿನಿಂದ ಆಘಾತಕ್ಕೀಡಾಗಿದ್ದೇನೆ.

ಪ್ರೊ.ಅಸ್ಸಾದಿ ಕೇವಲ ಒಬ್ಬ ಪ್ರಾಧ್ಯಾಪಕ ಆಗಿರಲಿಲ್ಲ. ನಾಡಿನ ಜನಪರ ಹೋರಾಟವನ್ನು ವೈಚಾರಿಕ ಚಿಂತನೆಯ ಮಾರ್ಗದರ್ಶನದೊಂದಿಗೆ ಮುನ್ನಡೆಸಿದವರು. ಅವರ ಅಗಲಿಕೆಯಿಂದ ನಾಡು ಬಡವಾಗಿದೆ, ಅವರ ಅಗಲಿಕೆಯಿಂದ ಸೃಷ್ಟಿಯಾಗಿರುವ ನಿರ್ವಾತವನ್ನು ತುಂಬುವುದು ಕಷ್ಟ ಎಂದು ಹೇಳಿದ್ದಾರೆ. ನಿರಂತರವಾದ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕರ್ನಾಟಕದಲ್ಲಿ ಮಾತ್ರವಲ್ಲ ದೇಶ–ವಿದೇಶಗಳಲ್ಲಿಯೂ ತಮ್ಮ ವಿದ್ವತ್‌ಪೂರ್ಣ ಬರವಣಿಗೆ ಮತ್ತು ಉಪನ್ಯಾಸಗಳ ಮೂಲಕ ಜನಪ್ರಿಯರಾಗಿದ್ದ ಪ್ರೊ.ಅಸ್ಸಾದಿ ಅವರು ಕನ್ನಡದ ಹೆಮ್ಮೆಯ ಪುತ್ರ.

ವರ್ಷಗಳಿಂದ ನನ್ನ ಹಿತೈಷಿಯಾಗಿ ರಾಜಕೀಯವಾಗಿ ಸದಾ ನನ್ನ ಏಳಿಗೆಯನ್ನು ಹಾರೈಸುತ್ತಿದ್ದ ಪ್ರೊ.ಅಸ್ಸಾದಿ ಅವರ ಸಾವು ವೈಯಕ್ತಿಕವಾಗಿಯೂ ನನ್ನ ಪಾಲಿಗೆ ದೊಡ್ಡ ನಷ್ಟ. ಪ್ರೊ. ಅಸ್ಸಾದಿ ಅವರನ್ನು ಕಳೆದುಕೊಂಡ ಅವರ ಕುಟುಂಬ ಮತ್ತು ಅಪಾರ ಅಭಿಮಾನಿಗಳ ದು:ಖದಲ್ಲಿ ನಾನೂ ಭಾಗಿಯಾಗಿದ್ದೇನೆ ಎಂದು ತಿಳಿಸಿದ್ದಾರೆ.



ದಿನದ ಸಂಬಳ 48 ಕೋಟಿ!

ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಜಗತ್ತಿನ ವಿವಿಧ ಕಂಪನಿಗಳ ಚುಕ್ಕಾಣಿ ವಹಿಸಿಕೊಂಡಿರುವ ಲಿಸ್ಟ್‌ನಲ್ಲಿ ಇವರು ಹೊಸಬರಾಗಿದ್ದಾರೆ. ಇದು ದೂರದೃಷ್ಟಿ ಮತ್ತು ದೃಢತೆ ಹೊಂದಿರುವ ಜನರಿಗೆ ಉದಯೋನ್ಮುಖ ಕ್ಷೇತ್ರಗಳಲ್ಲಿ ಲಭ್ಯವಿರುವ ಅವಕಾಶಗಳನ್ನು ಪ್ರತಿಬಿಂಬಿಸುತ್ತದೆ.

ಮನಿಕಂಟ್ರೋಲ್ ವರದಿಯ ಪ್ರಕಾರ, ಸಿಂಗ್ ಅವರ ಶೈಕ್ಷಣಿಕ ಅರ್ಹತೆಗಳಲ್ಲಿ ಸ್ಟ್ಯಾನ್ ಫೋರ್ಡ್ ವಿಶ್ವವಿದ್ಯಾಲಯದಿಂದ ಬಿ.ಟೆಕ್ ಮತ್ತು ಬರ್ಕ್ಲಿಯ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಿಂದ ಎಂಬಿಎ ಸೇರಿವೆ. ಈ ಬಲವಾದ ಶೈಕ್ಷಣಿಕ ನೆಲೆಯು ಹಲವಾರು ಕಂಪನಿ ಗಳಲ್ಲಿ ಒಂದು ದಶಕಕ್ಕೂ ಹೆಚ್ಚು ಅನುಭವದ ಜೊತೆಗೆ, 2010ರಲ್ಲಿ ಕ್ವಾಂಟಮ್‌ಸ್ಕೇಪ್ ಅನ್ನು ಪ್ರಾರಂಭಿಸಲು ಅವರಿಗೆ ಅಗತ್ಯವಿರುವ ಕೌಶಲ್ಯಗಳನ್ನು ನೀಡಿತು.

ಇವಿ ಸೆಕ್ಟರ್‌ನಲ್ಲಿ ಕೆಲಸ ಮಾಡುವ ಕಂಪನಿ: ಅವರ ನಾಯಕತ್ವದಲ್ಲಿ, ಕಂಪನಿಯು ಎಲೆಕ್ಟ್ರಿಕ್ ವಾಹನಗಳಿಗೆ ಶಕ್ತಿ ಶೇಖರಣಾ ಪರಿಹಾರಗಳಲ್ಲಿ ಮುಂಚೂಣಿಯಲ್ಲಿದೆ, ಸಾಂಪ್ರದಾಯಿಕ ಲಿಥಿಯಂ–ಐಯಾನ್ ಬ್ಯಾಟರಿಗಳಿಗೆ ಹೋಲಿಸಿದರೆ ಉತ್ತಮ ಕಾರ್ಯಕ್ಷಮತೆ, ವೇಗದ ಚಾರ್ಜಿಂಗ್ ಸಮಯ ಮತ್ತು ಸುಧಾರಿತ ಸುರಕ್ಷತೆಯನ್ನು ಭರವಸೆ ನೀಡುವ ಘನ–ಸ್ಥಿತಿಯ ಬ್ಯಾಟರಿಗಳ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸಿದೆ ಎಂದು ವರದಿ ಹೇಳಿದೆ.

ಜಗದೀಪ್ ಸಿಂಗ್ ಅವರು ಕ್ವಾಂಟಮ್ ಸ್ಕೇಪ್‌ನ ಸಿಇಒ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಮತ್ತು ಫೆಬ್ರವರಿ 2025ರಲ್ಲಿ ಶಿವ ಶಿವರಾಮ್‌ಗೆ ಪಾತ್ರವನ್ನು ಹಸ್ತಾಂತರಿಸಲಿದ್ದಾರೆ, ಆದರೆ ಅವರು ಕಂಪನಿಯ ನಿರ್ದೇಶಕರ ಮಂಡಳಿಯಲ್ಲಿ ಉಳಿದುಕೊಳ್ಳಲಿದ್ದಾರೆ. ಸಿಇಒ ಆಗಿ ಸಿಂಗ್ ಅವರ ಅಧಿಕಾರಾವಧಿಯಲ್ಲಿ, QuantumScape ಗಮನಾರ್ಹ ಬೆಳವಣಿಗೆಯನ್ನು ಸಾಧಿಸಿತು, ಇದು ಅವರ ದೊಡ್ಡ ಮಟ್ಟದ ವೇತನ ಪ್ಯಾಕೇಜ್‌ಗೆ ಕೊಡುಗೆ ನೀಡಿತು, ಇದರಲ್ಲಿ $2.3 ಶತಕೋಟಿ ಮೌಲ್ಯದ ಸ್ಟಾಕ್ ಆಯ್ಕೆಗಳನ್ನು ಒಳಗೊಂಡಿದೆ. ಕ್ವಾಂಟಮ್ ಸ್ಕೇಪ್‌ನ ನವೀನ ತಂತ್ರಜ್ಞಾನವು ಶುದ್ಧ ಸಾರಿಗೆಗಾಗಿ ಜಾಗತಿಕ ಪ್ರಯತ್ನದಲ್ಲಿ ಮುಂಚೂಣಿಯಲ್ಲಿದೆ. ಕಂಪನಿಯು ಬಿಲ್ ಗೇಟ್ಸ್ ಮತ್ತು ವೋಕ್ಸ್‌ವ್ಯಾಗನ್ ಸೇರಿದಂತೆ ಉದ್ಯಮದ ದೈತ್ಯರಿಂದ ಗಮನಾರ್ಹ ಹೂಡಿಕೆಯನ್ನು ಆಕರ್ಷಿಸಿದೆ.

ಕಟ್ಟುನಿಟ್ಟಿನ ಸೂಚನೆ

ಜ್ವರ ಬರಬಹುದು. ಹೊಸ ವೈರಸ್ ಬಗ್ಗೆ ಗಾಬರಿಬೀಳುವ ಅಗತ್ಯವೇನು ಇಲ್ಲ ಎಂದು ಹೇಳಿದ್ದಾರೆ. ದೇಶದಲ್ಲಿ ಉಸಿರಾಟದ ಸಮಸ್ಯೆಯ ರೋಗಿಗಳ ಡೇಟಾ ವಿಶ್ಲೇಷಿಸಿದ್ದೇವೆ. 2024ರ ಡೇಟಾದಲ್ಲಿ ಅಂತಹ ಗಣನೀಯ ಹೆಚ್ಚಳವಿಲ್ಲ. ಚಳಿಗಾಲದಲ್ಲಿ ಉಸಿರಾಟದ ಸೋಂಕುಗಳು ಸಾಮಾನ್ಯವಾಗಿ ಹೆಚ್ಚಾದರೆ. ನಮ್ಮ ಆಸ್ಪತ್ರೆಗಳು ಅಗತ್ಯವಿರುವ ಹಾಸಿಗೆಗಳೊಂದಿಗೆ ಸಂಪೂರ್ಣ ಸಿದ್ಧವಾಗಿವೆ. ಸಾಮಾನ್ಯ ಮುನ್ನೆಚ್ಚರಿಕೆ ತೆಗೆದುಕೊಳ್ಳುವಂತೆ ನಾನು ವಿನಂತಿಸುತ್ತೇನೆ. ಕೆಮ್ಮು, ನೆಗಡಿ ಇರೋರು ಇತರರೊಂದಿಗೆ ಸಂಪರ್ಕಕ್ಕೆ ಬರದಂತೆ ತಡೆಯಬೇಕು. ಶೀತ ಮತ್ತು ಜ್ವರಕ್ಕೆ ಶಿಫಾರಸು ಮಾಡಲಾದ ಸಾಮಾನ್ಯ ಔಷಧಿ ತೆಗೆದುಕೊಳ್ಳಿ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಗಾಬರಿಪಡಬೇಕಾಗಿಲ್ಲ ಎಂದಿದ್ದಾರೆ.

ಕೋರ್ಟ್ ಆವರಣದಲ್ಲಿ ದ್ವಿಚಕ್ರ ವಾಹನ ಕಳವು; ಖದೀಮನ ಬಂಧನ

ಮೈಸೂರು,ಜ.4(ಎಸ್‌ಪಿಎನ್)– ಮೈಸೂರು ಮಳಲವಾಡಿಯಲ್ಲಿರುವ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ದ್ವಿಚಕ್ರ ವಾಹನ ಕಳ್ಳತನ ಮಾಡಿದ್ದ ಆರೋಪಿಯನ್ನು ಅಶೋಕಪುರಂ ಠಾಣಾ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ 6 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ಡಿ.14ರಂದು ಮೈಸೂರು ನಗರ ಅಶೋಕಪುರಂ ಠಾಣಾ ಸರಹದ್ದಿನ ಜಯನಗರದ 5ನೇ ಕ್ರಾಸ್‌ನಲ್ಲಿರುವ ಮಳಲವಾಡಿಯಲ್ಲಿನ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ನಿಲ್ಲಿಸಿದ್ದ ಹೊಂಡಾ ಆಕ್ಟಿವಾ ಸ್ಕೂಟರ್ ಕಳ್ಳತನವಾಗಿತ್ತು. ಈ ಬಗ್ಗೆ ಅಶೋಕಪುರಂ ಪೊಲೀಸರು ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಜ.2ರಂದು ಅಶೋಕಪುರಂ ಠಾಣಾ ಸಿಬ್ಬಂದಿ ಗಸ್ತಿನಲ್ಲಿರುವಾಗ ಸಾರ್ವಜನಿಕರಿಂದ ಬಂದ ಖಚಿತ ಮಾಹಿತಿ ಮೇರೆಗೆ ಕೆ.ಜಿ.ಕೊಪ್ಪಲು ಸಮೀಪ ದ್ವಿವಾಹನ ಕಳ್ಳತನ ಮಾಡುತ್ತಿದ್ದ ಖದೀಮನನ್ನು ವಶಕ್ಕೆ ಪಡೆದು ಕೂಲಂಕುಷವಾಗಿ ವಿಚಾರಣೆ ನಡೆಸಿದಾಗ ಈ ಸಂಗತಿ ಬೆಳಕಿಗೆ ಬಂದಿದೆ.

ಈ ಪ್ರಕರಣ ಬೆಳಕಿಗೆ ಬಂದ ಹಿನ್ನಲೆಯಲ್ಲಿ ಅಶೋಕಪುರಂ ಠಾಣೆ 1, ದೇವರಾಜ ಠಾಣೆ 1, ಲಕ್ಷ್ಮೀಪುರಂ ಠಾಣೆ 2, ಕುವೆಂಪುನಗರ ಠಾಣೆ 1, ನಂಜನಗೂಡು ಟೌನ್ ಠಾಣೆ–1 ಪ್ರಕರಣ ಸೇರಿದಂತೆ ದ್ವಿಚಕ್ರ ವಾಹನ ಕಳ್ಳತನ ಪ್ರಕರಣ ಪತ್ತೆಯಾಗಿವೆ.

ಈ ಪತ್ತೆ ಕಾರ್ಯದಲ್ಲಿ ಮೈಸೂರು ನಗರ ಕೇಂದ್ರಸ್ಥಾನ, ಅಪರಾಧ ಮತ್ತು ಸಂಚಾರ ವಿಭಾಗ ಡಿಸಿಪಿ ಜಾಹ್ನವಿ, ಕೆ.ಆರ್.ವಿಭಾಗದ ಎಸಿಪಿ ರಮೇಶ್ ಕುಮಾರ್ ನೇತೃತ್ವದಲ್ಲಿ ಅಶೋಕಪುರಂ ಠಾಣೆ ಇನ್‌ಸ್ಪೆಕ್ಟರ್ ಸಿ.ರೋಹಿತ್, ಪಿಎಸ್‌ಐ ಪ್ರತಿಭಾ ಜಂಗವಾಡ, ಸಿಬ್ಬಂದಿಗಳಾದ ಶ್ರೀನಿವಾಸಪ್ರಸಾದ್, ಮೆಹಬೂಬ್ ಸಾಹೇಬ್ ಹಳ್ಳಿ, ಹೇಮಂತ್‌ಕುಮಾರ್, ಸುಹಾಸ್, ವರುಣ್, ನಳಿನಿ ಇದ್ದರು ಎಂದು ಪೊಲೀಸ್ ಆಯುಕ್ತರ ಕಚೇರಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ.7ರಂದು ಅಮಿತ್ ಶಾ ವಿರುದ್ಧ ಮೈಸೂರು ಬಂದ್‌ಗೆ ಪೌರಕಾರ್ಮಿಕರ ಬೆಂಬಲ



ಮಾಜಿ ಮೇಯರ್ ನಾರಾಯಣ ನೇತೃತ್ವದಲ್ಲಿ ನಡೆದ ಪೌರ ಕಾರ್ಮಿಕರ ಮುಖಂಡರ ಸಭೆಯಲ್ಲಿ ಜ.7ರ ಮೈಸೂರು ಬಂದ್‌ಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು.

ಮೈಸೂರು, ಜ.4(ಎಸ್‌ಪಿಎನ್)– ಡಾ.ಬಿ.ಆರ್.ಅಂಬೇಡ್ಕರ್ ವಿರುದ್ಧ ಕೇಂದ್ರ ಗೃಹಸಚಿವ ಅಮಿತ್ ಶಾ ನೀಡಿರುವ ಹೇಳಿಕೆ ಖಂಡಿಸಿ ಜ.7ರಂದು ಡಾ.ಬಿ.ಆರ್.ಅಂಬೇಡ್ಕರ್ ಅಭಿಮಾನಿಗಳ ಹೋರಾಟ ಸಮಿತಿ ಕರೆ ನೀಡಿರುವ ಮೈಸೂರು ಬಂದ್‌ಗೆ ಮೈಸೂರು ನಗರ ಮೈಸೂರು ನಗರ ಪಾಲಿಕೆ ಖಾಯಂ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ.

ಮೈಸೂರು ಜಲದರ್ಶಿನಿ ಆವರಣದಲ್ಲಿ ಮಾಜಿ ಮೇಯರ್ ನಾರಾಯಣ ನೇತೃತ್ವದಲ್ಲಿ ನಡೆದ ಪೌರ ಕಾರ್ಮಿಕರ ಮುಖಂಡರ ಸಭೆಯಲ್ಲಿ ಜ.7ರ ಮೈಸೂರು ಬಂದ್‌ಗೆ ಅಂದು ಮೈಸೂರು ನಗರದ ಸ್ವಚ್ಛತಾ ಕಾರ್ಯವನ್ನು ಪೌರಕಾರ್ಮಿಕರು ಸ್ಥಗಿತಗೊಳಿಸಿ ಬೆಂಬಲ ವ್ಯಕ್ತಪಡಿಸಲು ಮುಖಂಡರ ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದು ಪೌರಕಾರ್ಮಿಕ ಮುಖಂಡ ಸಿ.ಆರ್.ರಾಚಯ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಈ ಸಭೆಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಮುಖಂಡರಾದ ಹರಿಹರ ಆನಂದ ಸ್ವಾಮಿ, ಆರ್.ಶಿವಣ್ಣ, ಆರ್ಮುಗಂ, ಆರ್ಟಿಸ್ಟ್ ನಾಗರಾಜ್, ಆರ್.ಹರೀಶ್, ಜಯರಾಂ, ಎನ್.ಮೋಹನ್ ಕುಮಾರ್, ಕಮಲ್ ನಾಥ್, ಆರ್.ದಾಸ್, ವಕೀಲ ಆರ್.ಹರೀಶ್, ಮುತ್ತುರಾಜ್, ಟಿ.ಪಿ.ರಾಜು ಉಪಸ್ಥಿತರಿದ್ದರು. ಈ ವೇಳೆ ಕರ್ನಾಟಕ ರಾಜ್ಯ ಆದಿದ್ರಾವಿಡ ಮಹಾಸಭಾ(ಪೌರಕಾರ್ಮಿಕರು)ದ ರಾಜ್ಯಾಧ್ಯಕ್ಷ ಎ.ಸುಂದರ್, ಗೌರವಾಧ್ಯಕ್ಷ ಶಂಕರ್‌ಬಾಬು, ಪ್ರಧಾನ ಕಾರ್ಯದರ್ಶಿ ಸಿ.ಆರ್.ರಾಚಯ್ಯ, ಮುಖಂಡರಾದ ಆರ್.ಸುಬ್ರಹ್ಮಣಿ, ನಗರಾಧ್ಯಕ್ಷ ಸಿ.ಪಿ.ರಾಜೀವ್ ಬೆಂಬಲ ವ್ಯಕ್ತಪಡಿಸಿದರು.

ಮೈಸೂರು ಮಿತ್ರ

ಸದನದಲ್ಲಿ ಅಂಬೇಡ್ಕರ್‌ಗೆ ಕೇಂದ್ರ ಸಚಿವ ಅಮಿತ್ ಶಾ ಅಪಮಾನ

ಜ.7, ಮೈಸೂರು ಬಂದ್‌ಗೆ ಕರೆ ನೀಡಿದ ದಲಿತ ಚಳುವಳಿ ನವನಿರ್ಮಾಣ ವೇದಿಕೆ

ಮೈಸೂರು, ಜ.4(ಜಿಎ)–ಸದನದಲ್ಲಿ ಕೇಂದ್ರ ಸಚಿವ ಅಮಿತ್ ಶಾ ಅವರು ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಅಪಮಾನಿಸಿರುವುದನ್ನು ಖಂಡಿಸಿ ಹಾಗೂ ಸಚಿವ ಸ್ಥಾನಕ್ಕೆ ರಾಜೀನಾಮೆಗೆ ಆಗ್ರಹಿಸಿ ಜ.7ರಂದು ಮೈಸೂರು ಬಂದ್‌ಗೆ ಕರೆ ನೀಡಲಾಗಿದೆ ಎಂದು ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆಯ ಹರಿಹರ ಆನಂದಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಂದ್‌ಗೆ ವಾಣಿಜ್ಯೋದ್ಯಮಿಗಳು, ಪ್ರಗತಿಪರರು, ಹೋಟೆಲ್ ಮಾಲೀಕರು, ಕಾರ್ಮಿಕ ಸಂಘಟನೆಗಳು, ವಿವಿ ವಿದ್ಯಾರ್ಥಿಗಳು, ಶಾಲಾ ಕಾಲೇಜು ವಿದ್ಯಾರ್ಥಿಗಳು ಪರೋಕ್ಷ ಹಾಗೂ ಪ್ರತ್ಯಕ್ಷವಾಗಿ ಬೆಂಬಲ ನೀಡಬೇಕೆಂದು ಕೋರಿದರು.

ಅಮಿತ್ ಶಾ ಅವರ ವಿಕೃತ ನಡವಳಿಕೆ ವಿರುದ್ಧ ರಾಷ್ಟ್ರವ್ಯಾಪ್ತಿ ಆಕ್ರೋಶ ಭುಗಿಲೆದ್ದಿದೆ. ಹೀಗಾಗಿ ಮಾನವೀಯ ಆಶಯವನ್ನು ಹೊಂದಿರುವ ಬಹುಸಂಖ್ಯಾತ ಜನಸಾಮಾನ್ಯರ ಆಶಯಕ್ಕೆ ಪೂರಕವಾಗಿ ನಡೆಯುತ್ತಿರುವ ಹೋರಾಟ ಬೆಂಬಲಿಸಿ ಈ ಬಂದ್‌ಗೆ ಕರೆ ನೀಡಲಾಗಿದೆ ಎಂದರು.

ಅಂಬೇಡ್ಕರ್ ಅವರು ರಾಷ್ಟ್ರ ಮತ್ತು ಜಗತ್ತು ಕಂಡ ಅತ್ಯಂತ ಪ್ರಾಜ್ಞ ಮಹನೀಯರಾಗಿದ್ದಾರೆ. ಇಂತಹವರನ್ನು ಜಾತಿ ಕಾರಣದಿಂದಾಗಿ ಅಮಿತ್ ಶಾ ನಿಂದಿಸಿರುವುದರಿಂದಾಗಿ ಪರಿಶಿಷ್ಟ ಜಾತಿ ಮತ್ತು ವರ್ಗಗಳ ವಿರುದ್ಧದ ದೌರ್ಜನ್ಯ ನಿಯಂತ್ರಣ ಕಾಯ್ದೆ ಅಡಿಯಲ್ಲಿ ಬಂಧಿಸಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಅಹಿಂದ ಜವರಪ್ಪ ಸೋಮಯ್ಯ ಮಲೆಯೂರು, ದೇವಗಳ್ಳಿ ಸೋಮಶೇಖರ್, ಮಲ್ಲೇಶ್ ಚುಂಚನಹಳ್ಳಿ, ಹೊರಳವಾಡಿ ನಂಜುಂಡಸ್ವಾಮಿ, ಹರಕುಮಾರ್ ಉಪಸ್ಥಿತರಿದ್ದರು.

ಮತಯಾಚನೆ



ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕಿನ ಚುನಾವಣೆ ಹಿನ್ನೆಲೆಯಲ್ಲಿ ಹಿರಿಯ ಸಹಕಾರಿ ಕೆ.ಉಮಾಶಂಕರ್ ನೇತೃತ್ವದಲ್ಲಿ ಸರಸ್ವತಿಪುರಂನಲ್ಲಿ ಷೇರುದಾರರಲ್ಲಿ ಮತಯಾಚನೆ ಮಾಡಲಾಯಿತು. ಮಾಜಿ ಮೇಯರ್ ಆರ್.ಲಿಂಗಪ್ಪ, ಬ್ಯಾಂಕ್ ಅಧ್ಯಕ್ಷರಾದ ಪಿ.ರಾಜೇಶ್ವರಿ, ಉಪಾಧ್ಯಕ್ಷೆ ಪಿ.ಸವಿತಾ, ಎಸ್‌ಟಿ ವಿಭಾಗದ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಹೆಚ್.ಹರೀಶ್‌ಕುಮಾರ್(ಸಾಮಾನ್ಯ), ಸಿ.ರೇವಣ್ಣ, ಎಂ.ಕುಮಾರ್, ಕೆ.ಗಿರೀಶ್, ಆರ್.ಶಿವಲಿಂಗು, ರಾಜಪ್ಪ ಇನ್ನಿತರರು ಉಪಸ್ಥಿತರಿದ್ದರು.

ನಾದಮಂಟಪದಲ್ಲಿ ಇಂದು 'ಜೀವನದಲ್ಲಿ ಒತ್ತಡವನ್ನು ಸಮತೋಲನ ಮಾಡುವ' ವಿಷಯ ಕುರಿತು ಉಪನ್ಯಾಸ

ಮೈಸೂರು, ಜ.4(ಜಿಎ)–ಮೈಸೂರಿನ ಇಸ್ಕಾನ್ ಶ್ರೀ ರಾಧಾಕೃಷ್ಣ ಮಂದಿರದ ವತಿಯಿಂದ ಜನವರಿ 5ರಂದು ಸಂಜೆ 4 ಗಂಟೆಯಿಂದ 6ರವರೆಗೆ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ 'ಜೀವನದಲ್ಲಿ ಒತ್ತಡವನ್ನು ಸಮತೋಲನ ಮಾಡುವ' ವಿಷಯ ಕುರಿತು ಅಮೋಘ ಲೀಲಾದಾಸ್ ಅವರಿಂದ ಉಪನ್ಯಾಸ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಂದಿರದ ಶ್ರೀಹರಿ ಮಾಧವದಾಸ್ ಈ ವಿಷಯ ತಿಳಿಸಿ, ಜೀವನದಲ್ಲಿ ಒತ್ತಡವನ್ನು ಹೇಗೆ ನಿರ್ವಹಿಸಬೇಕು, ಆಂತರಿಕ ಶಾಂತಿಯನ್ನು ಹೇಗೆ ಗಳಿಸಬೇಕು, ಆತ್ಮಚಿಂತನೆ ಮತ್ತು ಧ್ಯಾನ ಪ್ರಕ್ರಿಯೆ ಮೂಲಕ ಸಮತೋಲನವಾದ ಜೀವನ ಹೇಗೆ ಕಾಪಾಡಬೇಕು ಎಂಬ ಬಗ್ಗೆ ಅಮೂಲ್ಯ ಹಾಗೂ ಉಪಯುಕ್ತ ಮಾಹಿತಿ ಅಮೋಘ ಲೀಲಾದಾಸ್ ಅವರು ನೀಡಲಿದ್ದಾರೆ. ಹೀಗಾಗಿ ಮೈಸೂರಿನ ಜನತೆ ಪ್ರಯೋಜನ ಪಡೆಯಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಮಹಾದೇವ ಮುರಾರಿ ದಾಸ್, ಚಂದನಾಂಗ ಶ್ಯಾಮದಾಸ್, ಅಮಲ್ ಆತ್ಮಾದಾಸ್, ಜಯಾನಂದ ಹರಿದಾಸ್, ರಾಧಾ ಗಿರಿಧರಿದಾಸ್ ಉಪಸ್ಥಿತರಿದ್ದರು.

ಸಮಾಜದಲ್ಲಿ ಜಾತಿ ಧರ್ಮಕ್ಕಿಂತ ಮಾನವೀಯತೆ ಮುಖ್ಯ

ಮೈಸೂರು,ಜ.4–ಮೈಸೂರಿನ ಬಿ.ಎಂ. ಶ್ರೀನಗರದಲ್ಲಿರುವ ಶ್ರೀಸಾಯಿರಂಗ ವಿದ್ಯಾ ಸಂಸ್ಥೆಯಲ್ಲಿ ಶ್ರವಣದೋಷ ಮಕ್ಕಳ ವಸತಿಯುತ ಶಾಲೆಯಲ್ಲಿ ಹೊಸವರ್ಷದ ಅಂಗವಾಗಿ ಎಡ್ವಿನ್ ರಿಚರ್ಡ್ ಸ್ನೇಹ ಬಳಗದ ವತಿಯಿಂದ ಮಕ್ಕಳಿಗೆ ಸಂತೋಷಕೂಟ ಭೋಜನದ ವ್ಯವಸ್ಥೆ ಮಾಡಲಾಯಿತು.

ಈ ವೇಳೆ ಸಮಾಜ ಸೇವಕ ಎಡ್ವಿನ್ ರಿಚರ್ಡ್ ಮಾತನಾಡಿ, ಸಮಾಜದಲ್ಲಿ ಜಾತಿ ಧರ್ಮಕ್ಕಿಂತ ಮಾನವೀಯತೆ ಮುಖ್ಯ, ನಾವು ಎಷ್ಟೇ ಹಣ ಅಂತಸ್ತು ಸಂಪಾದಿಸಿದರೂ ಸಹ ಕನಿಷ್ಠ ಪಾಲು ವಂಚಿತರಿಗೆ ಸಹಾಯ ಮಾಡುವ ಮನಸ್ಥಿತಿ ಬೆಳೆಸಿಕೊಳ್ಳಬೇಕು, ಸಮಾಜಮುಖಿ ಕೆಲಸ ಮಾಡುವ ಸಂಘ ಸಂಸ್ಥೆಗಳಿಗೆ ನೆರವಾಗಬೇಕು ಎಂದರು.

ಮಲ್ಲಿಕಾರ್ಜುನ್ ಮಲ್ಲಿಕ್, ಶ್ರೀನಿವಾಸ್, ಪದ್ಮನಾಭನ್ ಗುಂಡ, ಮಂಜುಗೌಡ, ಅಜಯ್ ಶಾಸ್ತ್ರಿ, ವಿಕ್ರಂ ಅಯ್ಯಂಗಾರ್, ಸಾಗರ್ ಗೌಡ, ಒಂಟಿಕೊಪ್ಪಲ್ ಗುರುರಾಜ್, ಸುಬ್ರಹ್ಮಣ್ಯ, ಪೈಲ್ವಾನ್ ಮಹೇಶ್, ರಘು, ರಾಜೇಶ್ ಸಿ.ಗೌಡ, ಆಲನಹಳ್ಳಿ ಚೇತನ್‌ಗೌಡ, ಸೋಮೆಗೌಡ, ಧನರಾಜ್, ಸುಂದರ್ ಇನ್ನಿತರರು ಇದ್ದರು.

ನೂತನ ವರ್ಷದ ದಿನದರ್ಶಿಕೆ ಬಿಡುಗಡೆ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಯಶೋಧ ಸೇವಾ ಟ್ರಸ್ಟ್‌ನ ನೂತನ ಕ್ಯಾಲೆಂಡರ್ ಅನ್ನು ಟ್ರಸ್ಟ್‌ನ ಅಧ್ಯಕ್ಷೆ ಡಾ.ಯಶೋಧರ ರಾಜು ಬಿಡುಗಡೆಗೊಳಿಸಿದರು. ಈ ವೇಳೆ ಡಾ.ಜಗದೀಶ್ ಗೌಡ ಅವರನ್ನು ಅಭಿನಂದಿಸಲಾಯಿತು. ನಾಯಕ ಸಂಘದ ರಾಜ್ಯಾಧ್ಯಕ್ಷ ದ್ಯಾವಪ್ಪನಾಯಕ, ಶೋಭ ಸತೀಶ್, ಮಂಜುಳ ರುದ್ರೇಗೌಡ, ಸಿದ್ದರಾಜು ಮತ್ತಿತರರು ಉಪಸ್ಥಿತರಿದ್ದರು.

ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ ಅಮಿತ್ ಶಾರನ್ನು ಸಂಪುಟದಿಂದ ವಜಾಗೊಳಿಸಿ

ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಕೆ



ಕೇಂದ್ರ ಗೃಹ ಸಚಿವ ಅಮಿತ್ ಶಾರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಜಿಲ್ಲಾ ಕಾಂಗ್ರೆಸ್ ಸಂಶೋಧನಾ ವಿಭಾಗದ ವತಿಯಿಂದ ಮೈಸೂರು ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಶನಿವಾರ ಮನವಿ ಸಲ್ಲಿಸಲಾಯಿತು.

ಮೈಸೂರು,ಜ.4(ಜಿಎ)–ಡಾ.ಬಿ.ಆರ್. ಅಂಬೇಡ್ಕರ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಗೃಹ ಸಚಿವ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸುವಂತೆ ಆಗ್ರಹಿಸಿ ಮೈಸೂರು ಜಿಲ್ಲಾ ನಗರ ಕಾಂಗ್ರೆಸ್ ಸಮಿತಿ, ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಹಾಗೂ ಜಿಲ್ಲಾ ಕಾಂಗ್ರೆಸ್ ಸಂಶೋಧನಾ ವಿಭಾಗದ ವತಿಯಿಂದ ಮೈಸೂರು ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಶನಿವಾರ ಮನವಿ ಸಲ್ಲಿಸಲಾಯಿತು.

ಈ ವೇಳೆ ಜಿಲ್ಲಾ ಕಾಂಗ್ರೆಸ್ ಸಂಶೋಧನಾ ವಿಭಾಗದ ಅಧ್ಯಕ್ಷ ಡಾ.ಎಂ.ನಾಗರಾಜು ಮಾತನಾಡಿ, ರಾಜ್ಯಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅಂಬೇಡ್ಕರ್ ಅವರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದು, ಇದು ಇಡೀ ದಲಿತ ಸಮುದಾಯಕ್ಕೆ ಹಾಗೂ ಭಾರತದ ನಾಗರಿಕರಿಗೆ ಅವಮಾನ ಮಾಡಿದಂತಾಗಿದೆ ಎಂದರು.

ಅಂಬೇಡ್ಕರ್ ಅವರು ವಿಶ್ವದ ಶ್ರೇಷ್ಠ ಸಂವಿಧಾನ ರಚಿಸಿದ್ದು, ಈ ಮೂಲಕ ದೇಶದ ಪ್ರತಿಯೊಬ್ಬ ಪ್ರಜೆಗೂ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಾನತೆಯನ್ನು ದೊರಕಿಸಿಕೊಟ್ಟಿದ್ದಾರೆ. ಇಂತಹ ಮಹಾನ್ ಸಂವಿಧಾನ ಶಿಲ್ಪಿಗೆ ಅಮಿತ್ ಶಾ ಅವಹೇಳನಕಾರಿ ಹೇಳಿಕೆ ನೀಡಿದ್ದು, ಇವರ ಹೇಳಿಕೆಗೆ ಬಿಜೆಪಿಯ ಹಲವಾರು ನಾಯಕರು ಸಮರ್ಥನೆ ಮಾಡಿಕೊಂಡಿರುವುದು ದುರದೃಷ್ಟಕರ ಎಂದರು.

ಅಮಿತ್ ಶಾ ಹೇಳಿಕೆ ವಿರೋಧಿಸಿ, ವಿವಿಧ ಸಂಘಟನೆಗಳು, ಪ್ರಗತಿಪರ ಚಿಂತಕರು ಹಾಗೂ ಕಾಂಗ್ರೆಸ್ ಪಕ್ಷ ಹೋರಾಟ ಮಾಡಿತ್ತು. ಅಮಿತ್ ಶಾ ತಮ್ಮ ತಪ್ಪನ್ನು ತಿದ್ದಿಕೊಂಡು ಕ್ಷಮೆ ಯಾಚಿಸದಿರುವುದು ವಿಷಾದಕರ ಸಂಗತಿ. ಈ ಹಿನ್ನೆಲೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾರ್ಗದರ್ಶನದಂತೆ ಜಿಲ್ಲಾ ಕಾಂಗ್ರೆಸ್ ಸಂಶೋಧನಾ ವಿಭಾಗದ ವತಿಯಿಂದ ಇಂದು ರಾಷ್ಟ್ರಪತಿಗಳಿಗೆ ಮೈಸೂರು ಜಿಲ್ಲಾಧಿಕಾರಿಗಳ ಮುಖಾಂತರ ಮನವಿ ಸಲ್ಲಿಸಿ, ಅಮಿತ್ ಶಾ ಅವರನ್ನು ಕೇಂದ್ರ ಸಚಿವ ಸಂಪುಟದಿಂದ ವಜಾ ಮಾಡುವಂತೆ ಒತ್ತಾಯಿಸಲಾಗಿದೆ ಎಂದು ತಿಳಿಸಿದರು.

ಅರ್ಜಿ ಆಹ್ವಾನ

ಮೈಸೂರು,ಜ.4–2024–25ನೇ ಸಾಲಿನಲ್ಲಿ ಪ್ರಥಮ ವರ್ಷದ ಪೂರ್ಣಾವಧಿ ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ) ಹಾಗೂ 3(ಬಿ)ಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಮಾಸಿಕ ವ್ಯಾಸಂಗ ವೇತನ, ಫೆಲೋಶಿಪ್‌ಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಜನವರಿ 20ರವರೆಗೆ ಅರ್ಜಿ ಸಲ್ಲಿಸಬೇಕು. ಆಸಕ್ತರು https://bcwd.karnataka.gov.in ಮೂಲಕ ಮಾಹಿತಿ ಪಡೆದುಕೊಳ್ಳಬಹುದು. ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿದ್ದು, ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ), ಹಾಗೂ 3(ಬಿ)ಗೆ ಸೇರಿರಬೇಕು. ಪ್ರವರ್ಗ–I, ರೂ.4.50 ಲಕ್ಷ 2(ಎ), 3(ಎ) ಹಾಗೂ 3(ಬಿ) ರೂ.3.50 ಲಕ್ಷ ವಾರ್ಷಿಕ ಆದಾಯ ಮಿತಿ ಹೊಂದಿರಬೇಕು. ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕು. ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಹಿಂದಿನ 2 ವರ್ಷದೊಳಗಿದ್ದು, ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಾಲಿನಿಂದ ಪ್ರಥಮ ವರ್ಷದ ಪಿಹೆಚ್.ಡಿ ಅಧ್ಯಯನದಲ್ಲಿ ತೊಡಗಿರಬೇಕು. ಮಾಹಿತಿಗೆ ದೂ.ಸಂಖ್ಯೆ:8050770004.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜ.7, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಮೈಸೂರು, ಜ.4(ಜಿಎ)–ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ವತಿಯಿಂದ ತಮ್ಮ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ಜ.7ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಮಟ್ಟದ ಅನಿರ್ದಿಷ್ಟಾವಧಿ ಹೋರಾಟ ಹಮ್ಮಿಕೊಂಡಿದ್ದಾರೆ ಎಂದು ರಾಜ್ಯ ಖಜಾಂಚಿ ಪಿ.ಎಸ್. ಸಂಧ್ಯಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಶಾ ಕಾರ್ಯಕರ್ತೆಯರು ಹಗಲಿರುಳೂ ಬಡಜನರಿಗೆ ಆರೋಗ್ಯ ಸೌಲಭ್ಯ ಒದಗಿಸಿಕೊಡಲು ಆರೋಗ್ಯ ಇಲಾಖೆಯಲ್ಲಿ ಶ್ರಮಿಸುತ್ತಿದ್ದಾರೆ. ರಾಜ್ಯದಲ್ಲಿ ಇವರ ಸಂಖ್ಯೆ ಸುಮಾರು 42 ಸಾವಿರ ಇದೆ. ಆದರೆ ಇವರು ಸ್ಕೀಂ ವರ್ಕರ್ ಎಂದು ಕೆಲಸ ಮಾಡುತ್ತಿದ್ದು, ಐದು ಸಾವಿರ ನಿಶ್ಚಿತ ಗೌರವಧನ ಮಾತ್ರ ನೀಡಲಾಗುತ್ತಿದೆ. ಅಸಹಾಯಕ ಬಡ ಮಹಿಳೆಯರು, ವಿಧವೆಯರು, ವಿಚ್ಛೇದಿತರನ್ನು ಆಶಾಗಳನ್ನಾಗಿ ಸರ್ಕಾರ ನೇಮಕ ಮಾಡಿಕೊಂಡಿದ್ದು, ಇವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿಲ್ಲ ಎಂದು ಹೇಳಿದರು.

ಪ್ರೋತ್ಸಾಹಧನ ನೀಡಲು ಆಶಾ ನಿಧಿ ಪೋರ್ಟಲ್‌ನಲ್ಲಿ ಆನ್‌ಲೈನ್ ದಾಖಲು ಮಾಡಬೇಕಾಗಿದ್ದು, ಇವರು ಮಾಡಿದ ಕೆಲಸಗಳು ದಾಖಲಾಗದೇ ಕಳೆದ ಎಂಟು ವರ್ಷಗಳಿಂದ ಪ್ರೋತ್ಸಾಹಧನ ಸಿಗುತ್ತಿಲ್ಲ. ಜೊತೆಗೆ ತಾವೇ ದುಬಾರಿ ದರದ ಮೊಬೈಲ್ ಖರೀದಿಸಬೇಕು, ಇದಕ್ಕೆ ಡಾಟಾವನ್ನೂ ತಮ್ಮ ಕೈಯ್ಯಿಂದಲೇ ಭರಿಸಬೇಕಾದ ಪರಿಸ್ಥಿತಿ ಇದೆ. ಹೀಗಾಗಿ ಈ ಸಮಸ್ಯೆ ಹೋಗಲಾಡಿಸಬೇಕು. ಇವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಇರುವ ಗೌರವಧನ, ಪ್ರೋತ್ಸಾಹಧನ ಸೇರಿಸಿ ಒಟ್ಟು ಮಾಸಿಕ 15 ಸಾವಿರ ಗೌರವಧನ ನಿಗದಿ ಆಗಬೇಕು, ಹೆಚ್ಚುವರಿ ಕೆಲಸ ಮತ್ತು ದುಬಾರಿ ಖರ್ಚು ವೆಚ್ಚಗಳಿಗೆ ಅನುಗುಣವಾಗಿ ಕನಿಷ್ಠ ಎರಡು ಸಾವಿರ ಗೌರವಧನ ಹೆಚ್ಚಳ ಮಾಡಬೇಕು ಎಂದು ಅವರು ಆಗ್ರಹಿಸಿದರು.

ಮೊಬೈಲ್ ಕೆಲಸಗಳನ್ನು ಒತ್ತಾಯಪೂರ್ವಕವಾಗಿ ಮಾಡಿಸಿಕೊಳ್ಳುವುದನ್ನು ಕೈಬಿಡಬೇಕು, ಇವರನ್ನು ಕಾರ್ಮಿಕರೆಂದು ಪರಿಗಣಿಸಿ ಕನಿಷ್ಠ ವೇತನ, ಗ್ರಾಚ್ಯುಟಿ, ಪಿಎಫ್, ಇಎಸ್‌ಐ ಸೌಲಭ್ಯ ನೀಡಬೇಕು ಎಂದು ಒತ್ತಾಯಿಸಿ ಈಗ ಅನಿರ್ದಿಷ್ಟಾವಧಿ ಹೋರಾಟ ಆರಂಭಿಸಲಾಗುತ್ತಿದೆ. ಕಳೆದ ವರ್ಷ ಫೆಬ್ರವರಿಯಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ಹೋರಾಟ ನಡೆಸಿದಾಗ ಸ್ವತಃ ಸಿಎಂ ಆಗಮಿಸಿ ಭರವಸೆ ನೀಡಿದ್ದ ಹಿನ್ನೆಲೆಯಲ್ಲಿ ಹೋರಾಟ ಅಂತ್ಯಗೊಳಿಸಲಾಗಿತ್ತು. ಆದರೆ ಭರವಸೆ ಈಡೇರಿಸಿಲ್ಲ. ಹೀಗಾಗಿ ಸಮಸ್ಯೆ ಬಗೆಹರಿಯುವವರೆಗೂ ಹೋರಾಟ ನಿಲ್ಲದೆಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷರಾದ ಭಾಗ್ಯ, ಇನ್ನಿತರ ಪದಾಧಿಕಾರಿಗಳಾದ ಮಣಿಲಾ, ಸುನೀತಾ, ಕೋಮಲಾ, ಸುಧಾ ಉಪಸ್ಥಿತರಿದ್ದರು.

ಬಾಕ್ಸಿಂಗ್, ಹಾಕಿ, ಸೇಲಿಂಗ್, ಈಜು ಕ್ರೀಡೆಗಳಲ್ಲಿ ತರಬೇತಿ

ಮೈಸೂರು,ಜ.4–ನುರಿತ ತರಬೇತುದಾರರಿಂದ 8ರಿಂದ 14 ವರ್ಷದೊಳಗಿನ ಬಾಲಕ, ಬಾಲಕಿಯರಿಗೆ ಬಾಕ್ಸಿಂಗ್, ಹಾಕಿ, ಸೇಲಿಂಗ್ ಮತ್ತು ಈಜು ಕ್ರೀಡೆಗಳಲ್ಲಿ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುತ್ತಿದ್ದು, ಸದರಿ ಕ್ರೀಡೆಗಳಲ್ಲಿ ಆಸಕ್ತ ಮೈಸೂರು ಜಿಲ್ಲೆಯ ಬಾಲಕ, ಬಾಲಕಿಯರು ಭಾಗವಹಿಸಬಹುದಾಗಿದೆ. 8ರಿಂದ 14 ವರ್ಷದೊಳಗಿರಬೇಕು, 8 ವರ್ಷದೊಳಗಿನವರು ಕನಿಷ್ಠ 3ನೇ ತರಗತಿ ಮತ್ತು 14 ವರ್ಷದೊಳಗಿನವರು ಕನಿಷ್ಠ 8, 9ನೇ ತರಗತಿ ತೇರ್ಗಡೆ ಹೊಂದಿರಬೇಕು. ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸುವವರು ಜನನ ಪ್ರಮಾಣಪತ್ರ ಮತ್ತು ಜಾತಿ ಪ್ರಮಾಣ ಪತ್ರ, ವಿದ್ಯಾಭ್ಯಾಸ ಪ್ರಮಾಣಪತ್ರ ಮತ್ತು ನಡತೆ ಪ್ರಮಾಣ ಪತ್ರ, ವಾಸಸ್ಥಳ ದೃಢೀಕರಣ ಪತ್ರ ಸಲ್ಲಿಸಬೇಕು. ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 06 ಭಾವಚಿತ್ರ, ಆಧಾರ್ ಕಾರ್ಡ್, ಕ್ರೀಡಾ ಪ್ರಮಾಣ ಪತ್ರ ಸಲ್ಲಿಸಬೇಕು, ಭಾಗವಹಿಸುವವರು ಆಯಾ ಕ್ರೀಡೆಗೆ ಸಂಬಂಧಿಸಿದ ಕ್ರೀಡಾ ಕಿಟ್ ಅನ್ನು ತರಬೇಕು. 8 ವರ್ಷದವರು 134 ಸಿ.ಎಂ. ಎತ್ತರ ಹಾಗೂ 29 ಕೆ.ಜಿ ತೂಕವನ್ನು ಹೊಂದಿರಬೇಕು, 9 ವರ್ಷದವರು 139 ಸಿ.ಎಂ. ಎತ್ತರ ಹಾಗೂ 31 ಕೆ.ಜಿ. ತೂಕವನ್ನು ಹೊಂದಿರಬೇಕು, 10 ವರ್ಷದವರು 143 ಸಿ.ಎಂ. ಎತ್ತರ ಹಾಗೂ 34 ಕೆ.ಜಿ. ತೂಕವನ್ನು ಹೊಂದಿರಬೇಕು, 11 ವರ್ಷದವರು 150 ಸಿ.ಎಂ. ಎತ್ತರ ಮತ್ತು 37 ಕೆ.ಜಿ. ತೂಕವನ್ನು ಹೊಂದಿರಬೇಕು, 12 ವರ್ಷದವರು 153 ಸಿ.ಎಂ. ಎತ್ತರ ಹಾಗೂ 40 ಕೆ.ಜಿ. ತೂಕವನ್ನು ಹೊಂದಿರಬೇಕು, 13 ವರ್ಷದವರು 155 ಸಿ.ಎಂ. ಎತ್ತರ ಮತ್ತು 42 ಕೆ.ಜಿ. ತೂಕವನ್ನು ಹೊಂದಿರಬೇಕು ಮತ್ತು 14 ವರ್ಷದವರು 160 ಸಿ.ಎಂ. ಎತ್ತರ ಹಾಗೂ 47 ಕೆ.ಜಿ. ತೂಕವನ್ನು ಹೊಂದಿರಬೇಕು. ಮಾಹಿತಿಗಾಗಿ ಬಾಕ್ಸಿಂಗ್ ಕ್ರೀಡೆಯ ದೂ.ಸಂ: 789 2766021, ಹಾಕಿ:7204 793183, ಸೇಲಿಂಗ್: 9867088865, ಈಜು: 9567345347 ಅನ್ನು ಸಂಪರ್ಕಿಸಬಹುದು.

ಮೈಸೂರು ಎಸ್‌ಪಿ ವಿಷ್ಣುವರ್ಧನ್‌ಗೆ ಅಭಿನಂದನೆ



ಹಿರಿಯ ಆಡಳಿತ ಅಧಿಕಾರಿಯಾಗಿ ಮುಂಬಡ್ತಿ ಪಡೆದ ಮೈಸೂರು ಜಿಲ್ಲಾ ಪೊಲೀಸ್ ಅಧೀಕ್ಷಕ ವಿಷ್ಣುವರ್ಧನ್ ಅವರನ್ನು ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದಿಂದ ಅಭಿನಂದಿಸಲಾಯಿತು. ಬಳಗದ ಹಿನಕಲ್ ನಂಜುಂಡ, ಭರತ್ ಕಡಕೊಳ, ಮಹದೇವು, ನಾಗೇಶ್, ಅವಿನಾಶ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ವೀರ ಮಡಿವಾಳರ ಜಾಗೃತಿ ಯುವ ಬಳಗದ ವತಿಯಿಂದ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು. ಈ ವೇಳೆ ಬಳಗದ ಸಂಸ್ಥಾಪಕ ಅಧ್ಯಕ್ಷ ಮಾದುರಾಜ್ ಮಡಿವಾಳ, ಚನ್ನಕೇಶವ, ಶ್ರೀನಿವಾಸ್, ಜ್ಯೋತಿ, ಮಹೇಶ್, ಶ್ರೀರಾಮು, ಮನು ಮತ್ತಿತರರು ಉಪಸ್ಥಿತರಿದ್ದರು.


ಮೂರೇ ವರ್ಷದಲ್ಲಿ ರಾಜ್ಯದ 28,324 ಪುರುಷರ ಆತ್ಮಹತ್ಯೆ

● ಮಹಿಳೆಯರ ಸಂಖ್ಯೆ 8,159 ● ಒಡನಾಡಿ ಪಡೆದ ಮಾಹಿತಿಯಲ್ಲಿ ಬಹಿರಂಗ ● ಇದರ ಗಂಭೀರತೆ ಅರಿಯದ ರಾಜ್ಯ ಸರ್ಕಾರ

ಮೈಸೂರು, ಜ.4(ಎಸ್‌ಪಿಎನ್)–ಕಳೆದ ಮೂರು ವರ್ಷಗಳಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿನ ತಲ್ಲಣಗಳಿಗೆ ಬೇಸತ್ತು ಇಲ್ಲವೆ ಸಮಸ್ಯೆಗಳ ಸುಳಿಯಿಂದ ಹೊರಬರಲಾಗದೇ ರಾಜ್ಯದಲ್ಲಿ 28,324 ಪುರುಷರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇದು, ಮಹಿಳೆಯರ ಆತ್ಮಹತ್ಯೆ ಪ್ರಕರಣಗಳಿಗೆ ಹೋಲಿಸಿದರೆ ಮೂರು ಪಟ್ಟು ಹೆಚ್ಚಿದೆ ಎಂದು ರಾಜ್ಯ ಪೊಲೀಸ್ ಇಲಾಖೆಯ ಅಪರಾಧ ದಾಖಲಾತಿ ವಿಭಾಗ ಬಿಡುಗಡೆಗೊಳಿಸಿರುವ ಅಂಕಿ–ಅಂಶಗಳಿಂದ ಬಹಿರಂಗಗೊಂಡಿದೆ.

ಮೈಸೂರಿನ 'ಒಡನಾಡಿ' ಸೇವಾ ಸಂಸ್ಥೆಯ ಆರ್‌ಟಿಐ ಮಾಹಿತಿದಾರರಾದ ಶೃತಿ ಎಂಬುವರು ಮಾಹಿತಿ ಹಕ್ಕು ಕಾಯ್ದೆ ಅಡಿ ಸಲ್ಲಿಸಿದ್ದ ಅರ್ಜಿಗೆ, ರಾಜ್ಯ ಅಪರಾಧ ದಾಖಲಾತಿ ವಿಭಾಗವು ಎಲ್ಲ ಜಿಲ್ಲೆಗಳು, ಪ್ರಮುಖ ನಗರಗಳು



ಹಾಗೂ ಕರ್ನಾಟಕ ರೈಲ್ವೆ ಸೇರಿ ರಾಜ್ಯದ 38 ವಿಭಾಗಗಳಡಿ ನೀಡಿರುವ ಅಂಕಿ ಅಂಶದಲ್ಲಿ ಈ ಮಾಹಿತಿ ಬಹಿರಂಗಗೊಂಡಿದ್ದು, 2021ರಿಂದ 2023ರವರೆಗಿನ ಮೂರು ವರ್ಷದ ಅವಧಿಯಲ್ಲಿ 8,159 ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

2021ರಿಂದ 2023ರವರೆಗೆ ಆತ್ಮಹತ್ಯೆ ಪ್ರಕರಣದಲ್ಲಿ ಕ್ರಮವಾಗಿ ಬೆಂಗಳೂರು ನಗರ 4,929 ಪುರುಷರು, ಬೆಂಗಳೂರು ಗ್ರಾಮಾಂತರ 1159, ಮೈಸೂರು ನಗರ 414, ಮೈಸೂರು ಗ್ರಾಮಾಂತರದಲ್ಲಿ 801, ಚಾಮರಾಜನಗರದಲ್ಲಿ 263, ಹಾಸನ 775, ಮಂಡ್ಯ 553 ಹಾಗೂ ಕೊಡಗಿನಲ್ಲಿ 672 ಪ್ರಕರಣ ಸೇರಿದಂತೆ ರಾಜ್ಯಾದ್ಯಂತ 28,324 ಪುರುಷರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.


> “ಕೌಟುಂಬಿಕ ಮತ್ತು ಔದ್ಯೋಗಿಕ ಒತ್ತಡಗಳ ನಿರ್ವಹಣೆಯಲ್ಲಿ ಸೋಲು, ಬದುಕಿನ ನಿರ್ವಹಣೆಯಲ್ಲಿ ಪುರುಷರೇ ಜೀವನ ಪ್ರೀತಿ ಮೂಡಿಸುವಲ್ಲಿ ಸಮೂಹ ಮಾಧ್ಯಮಗಳ ವೈಫಲ್ಯವೂ ಕಾರಣ. ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಪುರುಷರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ಅಂಕಿ–ಅಂಶಗಳು ಖಚಿತಪಡಿಸಿದರೂ ರಾಜ್ಯ ಸರ್ಕಾರ ಇದರ ಬಗ್ಗೆ ಸಮೀಕ್ಷೆ ನಡೆಸಿ ಪರಿಹಾರ ಕಂಡುಹಿಡಿಯುವಲ್ಲಿ ವಿಫಲವಾಗಿದೆ. ಈ ನಿಟ್ಟಿನಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಸಂಶೋಧನೆ ನಡೆಸುವುದು ಸೂಕ್ತ.
>
> –ಎಂ.ಎಲ್.ಪರಶು, ಒಡನಾಡಿ ಸಂಸ್ಥೆಯ ನಿರ್ದೇಶಕ

2021ರಿಂದ 2023ರವರೆಗೆ ಆತ್ಮಹತ್ಯೆಗೆ ಶರಣಾದ ಮಹಿಳೆಯರ ಸಂಖ್ಯೆ ಇಂತಿದೆ. ಕ್ರಮವಾಗಿ ಬೆಂಗಳೂರು ನಗರ 1776, ಬೆಂಗಳೂರು ಗ್ರಾಮಾಂತರ 379, ಮೈಸೂರು ನಗರ 138, ಮೈಸೂರು ಗ್ರಾಮಾಂತರ 211, ಚಾಮರಾಜನಗರ 83, ಹಾಸನ 206, ಮಂಡ್ಯ 171 ಹಾಗೂ ಕೊಡಗು 192 ಸೇರಿದಂತೆ ರಾಜ್ಯಾದ್ಯಂತ 8,159 ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸಾಮಾಜಿಕ ಒತ್ತಡವೇ ಕಾರಣ: ಇತ್ತೀಚಿನ ದಿನಗಳಲ್ಲಿ ಆತ್ಮಹತ್ಯೆ ಪ್ರಕರಣಗಳೇ ಹೆಚ್ಚಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿರುವ ಒಡನಾಡಿ ಸಂಸ್ಥೆಯ ನಿರ್ದೇಶಕ ಎಂ.ಎಲ್.ಪರಶು, ಕೃಷಿಗಾಗಿ ಮಾಡಿದ ಸಾಲ ತೀರಿಸಲಾಗದ ಅಸಹಾಯಕತೆ, ಮಕ್ಕಳ ಶಿಕ್ಷಣ, ಮದುವೆಗೆ ಪಡೆದ ಸಾಲ, ಒಂಟಿತನ, ಕುಡಿತ, ಅನಾರೋಗ್ಯ ಹಾಗೂ ಲೈಂಗಿಕ ಅಶಕ್ತತೆ, ಪತ್ನಿ ಹಾಗೂ ಸಂಬಂಧಿಕರಿಂದ, ಕಚೇರಿಗಳಲ್ಲಿ ಮೇಲಧಿಕಾರಿಗಳಿಂದಾಗುವ ಕಿರುಕುಳ, ಅಕ್ರಮ ಸಂಬಂಧ ಹಾಗೂ ಸಾಮಾಜಿಕ ಭದ್ರತೆ ಇಲ್ಲದ ಜೀವನ ಸೇರಿದಂತೆ ಇತರೆ ಒತ್ತಡಗಳು ಪುರುಷರ ಆತ್ಮಹತ್ಯೆಗೆ ಕಾರಣ. ಒಂದೊಂದು ಪ್ರಕರಣದ ತನಿಖಾ ವರದಿಯೂ ಸಾವಿನ ರಹಸ್ಯವನ್ನು ಬಯಲು ಮಾಡಿವೆ ಎಂದು 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.


ದೇಶ - ವಿದೇಶ

ರಹಸ್ಯ ಹಣ ಪ್ರಕರಣ: ಡೊನಾಲ್ಡ್ ಟ್ರಂಪ್‌ಗೆ ಜ.10ರಂದು ಶಿಕ್ಷೆ ಪ್ರಕಟ



ನ್ಯೂಯಾರ್ಕ್: ಮಹತ್ವದ ಬೆಳವಣಿಗೆಯಲ್ಲಿ ಅಮೆರಿಕಾದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಪ್ರಮಾಣ ವಚನಕ್ಕೂ ಮುನ್ನ ಸಂಕಷ್ಟ ಎದುರಾಗಿದೆ. ರಹಸ್ಯ ಹಣ ಪ್ರಕರಣದಲ್ಲಿ ವಿಚಾರಣೆ ನಡೆಸಿರುವ ನ್ಯಾಯಾಧೀಶರು ಜ.10ಕ್ಕೆ ಶಿಕ್ಷೆ ಪ್ರಮಾಣ ನಿಗದಿಪಡಿಸಲಿದ್ದಾರೆ. ಟ್ರಂಪ್ ಜ.20ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಕಳೆದ ವರ್ಷ ಚುನಾವಣೆಯಲ್ಲಿ ಗೆದ್ದ ಅವರು ಜನವರಿಯಲ್ಲಿ ಶ್ವೇತಭವನವನ್ನು ಪ್ರವೇಶಿಸಲಿದ್ದಾರೆ. ಆದರೆ ಅದಕ್ಕೂ ಮುನ್ನ ಅವರಿಗೆ ದೊಡ್ಡ ಬಿಕ್ಕಟ್ಟು ಎದುರಾಗಿದೆ. ಅವರ ರಿಪಬ್ಲಿಕನ್ ಪಕ್ಷವು ಆಘಾತಕ್ಕೊಳಗಾಗಿದೆ. ನ್ಯೂಯಾರ್ಕ್ ಕಾನೂನಿನಡಿಯಲ್ಲಿ ತೀರ್ಪಿಗೆ ಮೇಲ್ಮನವಿ ಸಲ್ಲಿಸಲಾಗುವುದಿಲ್ಲ ಎಂದು ಮಾಜಿ ಮ್ಯಾನ್ಹ್ಯಾಟನ್ ನ್ಯಾಯಾಧೀಶ ಡಯೇನ್ ಕೀಸೆಲ್ ಹೇಳಿದರು. ಆದರೆ ಟ್ರಂಪ್ ಮೇಲ್ಮನವಿ ಸಲ್ಲಿಸಲು ಪ್ರಯತ್ನಿಸಬಹುದು. ಮೇ ತಿಂಗಳಲ್ಲಿ ನೀಲಿ ಚಿತ್ರತಾರೆ ಸ್ಟಾರ್ಮಿ ಡೇನಿಯಲ್ಸ್‌ಗೆ 1,30,000 ಡಾಲರ್ ಪಾವತಿಸಿದ ವ್ಯವಹಾರಿಕ ದಾಖಲೆಗಳಲ್ಲಿ ಫೌಲ್ ಪ್ಲೇ 34 ಗಂಭೀರ ಅಪರಾಧಗಳಲ್ಲಿ ಟ್ರಂಪ್‌ರನ್ನು ದೋಷಿ ಎಂದು ಘೋಷಿಸಿತ್ತು. 2016ರ ಚುನಾವಣಾ ಪ್ರಚಾರದ ಅಂತಿಮ ದಿನಗಳಲ್ಲಿ ಟ್ರಂಪ್ ಅವರೊಂದಿಗಿನ ಲೈಂಗಿಕ ಸಂಬಂಧದ ಬಗ್ಗೆ ಮೌನವಾಗಿರಲು ನೀಲಿಚಿತ್ರ ತಾರೆಗೆ ಹಣ ನೀಡಲಾಗಿತ್ತು.

ನಾಪತ್ತೆಯಾಗಿದ್ದ ಪತ್ರಕರ್ತನ ಶವ ಸೆಪ್ಟಿಕ್ ಟ್ಯಾಂಕ್‌ನಲ್ಲಿ ಪತ್ತೆ; ಮೂವರ ಬಂಧನ




ಛತ್ತೀಸ್‌ಗಢ: ಹೊಸ ವರ್ಷದ ದಿನದಂದು ನಾಪತ್ತೆಯಾಗಿದ್ದ ಪತ್ರಕರ್ತರೊಬ್ಬರ ಹತ್ಯೆಗೆ ಸಂಬಂಧಿಸಿದಂತೆ ಛತ್ತೀಸ್‌ಗಢ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. 28 ವರ್ಷದ ಪತ್ರಕರ್ತ ಮುಖೇಶ್ ಚಂದ್ರಾಕರ್ ಶವ ಜ.3ರಂದು ಬಿಜಾಪುರದ ರಸ್ತೆ ಗುತ್ತಿಗೆದಾರನಿಗೆ ಸಂಬಂಧಿಸಿದ ಜಾಗದ ಸೆಪ್ಟಿಕ್ ಟ್ಯಾಂಕ್‌ನಲ್ಲಿ ಪತ್ತೆಯಾಗಿತ್ತು ಸ್ವತಂತ್ರ ಪತ್ರಕರ್ತರಾಗಿದ್ದ ಮುಖೇಶ್ ಬಸ್ತಾರ್ ಪ್ರದೇಶದಿಂದ ಎನ್‌ಡಿಟಿವಿಗಾಗಿ ಗ್ರೌಂಡ್ ರಿಪೋರ್ಟಿಂಗ್ ಮಾಡಿದ್ದರು. ಅವರು ಯೂಟ್ಯೂಬ್ ಚಾನೆಲ್ ಕೂಡ ನಡೆಸುತ್ತಿದ್ದರು. ಸ್ಥಳೀಯ ಗುತ್ತಿಗೆದಾರರ ಸೋದರ ಸಂಬಂಧಿಯಿಂದ ಕರೆ ಸ್ವೀಕರಿಸಿದ ನಂತರ ಅವರು ಜ.1ರಂದು ನಾಪತ್ತೆಯಾಗಿದ್ದರು. ಪತ್ರಕರ್ತರ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ ಎಂದು ಐಜಿ ಬಸ್ತಾರ್ ಸುಂದರರಾಜ್ ತಿಳಿಸಿದ್ದರು. ಅವರ ಕೊನೆಯ ಮೊಬೈಲ್ ಸ್ಥಳವನ್ನು ಚಟ್ಟನ್‌ಪಾರಾ ಬಸ್ತಿಯಲ್ಲಿರುವ ಗುತ್ತಿಗೆದಾರ ಸುರೇಶ್ ಚಂದ್ರಕರ್ ನಿವಾಸದಲ್ಲಿ ಪತ್ತೆ ಹಚ್ಚಲಾಗಿದೆ. ಅಲ್ಲಿ ಪೊಲೀಸರು ಕಾಂಕ್ರೀಟ್‌ನಿಂದ ಮುಚ್ಚಿದ ಸೆಪ್ಟಿಕ್ ಟ್ಯಾಂಕ್ ಅನ್ನು ಕಂಡುಹಿಡಿದರು. ಪೊಲೀಸರು ಟ್ಯಾಂಕ್ ಒಡೆದು ಮುಖೇಶ್ ಶವ ಹೊರತೆಗೆದಿದ್ದಾರೆ. ಆತನ ತಲೆ, ಬೆನ್ನಿನ ಮೇಲೆ ಗಾಯದ ಗುರುತುಗಳಿದ್ದವು.

ಇಸ್ರೇಲ್–ಹಿಜ್ಬುಲ್ಲಾ ನಡುವಿನ ಕದನ ವಿರಾಮ ಮುಂದುವರಿಯುವ ಸಾಧ್ಯತೆ

ಬೈರುತ್: ಇಸ್ರೇಲ್ ಮತ್ತು ಲೆಬನಾನ್ ಉಗ್ರಗಾಮಿ ಗುಂಪು ಹಿಜ್ಬುಲ್ಲಾ ನಡುವಿನ ಕದನ ವಿರಾಮವನ್ನು ತಡೆ ಹಿಡಿಯಲಾಗಿದೆ. ಹೀಗಾಗಿ ಒಪ್ಪಂದದ ಗಡುವಿನೊಳಗೆ ಕದನ ವಿರಾಮ ಷರತ್ತುಗಳ ಪಾಲನೆ ಅಸಂಭವವಾಗಿದೆ. ನ.27ರಂದು ನಡೆದ ಕದನ ವಿರಾಮ ಒಪ್ಪಂದದ ಪ್ರಕಾರ, ದಕ್ಷಿಣ ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಶಸ್ತ್ರಾಸ್ತ್ರಗಳನ್ನು ತ್ಯಜಿಸಬೇಕು ಮತ್ತು ಇಸ್ರೇಲಿ ಪಡೆಗಳು ಲೆಬನಾನ್‌ನಿಂದ ಹಿಂದೆ ಸರಿಯಬೇಕು. ಇದರ ಜೊತೆಗೆ ಲೆಬನಾನ್ ಸೈನ್ಯ ಮತ್ತು ವಿಶ್ವಸಂಸ್ಥೆ ಶಾಂತಿಪಾಲಕರಿಗೆ ಇಸ್ರೇಲಿ ತನ್ನ ನಿಯಂತ್ರಣವನ್ನು ಹಸ್ತಾಂತರಿಸಲು 60 ದಿನಗಳ ಗಡುವು ನೀಡಲಾಗಿತ್ತು. ಆದರೆ ಇಸ್ರೇಲ್ ಇಲ್ಲಿಯವರೆಗೆ ದಕ್ಷಿಣ ಲೆಬನಾನ್‌ನಲ್ಲಿ ತನ್ನ ಹಿಡಿತದಲ್ಲಿರುವ ಡಜನ್‌ಗಟ್ಟಲೆ ಪಟ್ಟಣಗಳ ಪೈಕಿ ಕೇವಲ ಎರಡರಿಂದ ಮಾತ್ರ ಹಿಂದೆ ಸರಿದಿದೆ ಮತ್ತು ಹಿಜ್ಬುಲ್ಲಾಗೆ ಸೇರಿದ ನೆಲೆಗಳ ಮೇಲೆ ದಾಳಿ ಮಾಡುವುದನ್ನು ಮುಂದುವರಿಸಿದೆ. ಹಿಜ್ಬುಲ್ಲಾ ಶಸ್ತ್ರಾಸ್ತ್ರಗಳನ್ನು ವಶಪಡಿಕೊಳ್ಳುವ ಮತ್ತು ಅವುಗಳನ್ನು ನಾಶಪಡಿಸುವುದಕ್ಕೂ ಮುನ್ನ ಇಸ್ರೇಲ್ ರಾಕೆಟ್‌ಗಳನ್ನು ಉಡಾಯಿಸಲು ಮತ್ತು ಶಸ್ತ್ರಾಸ್ತ್ರಗಳನ್ನು ಸಾಗಿಸಲು ಪ್ರಯತ್ನಿಸುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಕದನ ವಿರಾಮ ಉಲ್ಲಂಘನೆಯ ಬಗ್ಗೆ ಎರಡೂ ಕಡೆಗಳಿಂದ ಆರೋಪ ಕೇಳಿ ಬರುತ್ತಿರುವುದರ ನಡುವೆಯೂ ಕದನ ವಿರಾಮವು ಮುಂದುವರಿಯುವ ಸಾಧ್ಯತೆಯಿದೆ ಎಂದು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.


ಪ್ರಧಾನಿ ಪರವಾಗಿ ಅಜ್ಮೀರ್ ದರ್ಗಾಕ್ಕೆ ಚಾದರ್ ಅರ್ಪಿಸಿದ ಸಚಿವ ಕಿರಣ್ ರಿಜಿಜು



ಜೈಪುರ: ಸೂಫಿ ಸಂತ ಖಾಜಾ ಮೊಹಿನುದ್ದೀನ್ ಚಿಶ್ತಿ ಅವರ ಉರುಸ್ ಅಂಗವಾಗಿ ಪ್ರಧಾನಿ ಮೋದಿ ಕಳುಹಿಸಿದ ಚಾದರ್‌ನ್ನು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅಜ್ಮೀರ್ ದರ್ಗಾಕ್ಕೆ ಸಮರ್ಪಿಸಿದರು. ದೆಹಲಿಯಿಂದ ಜೈಪುರಕ್ಕೆ ಬಂದ ಅವರು, ಬಳಿಕ ಅಲ್ಲಿಂದ ರಸ್ತೆ ಮಾರ್ಗದ ಮೂಲಕ ಅಜ್ಮೀರ್ ತಲುಪಿದರು. ಇದಕ್ಕೂ ಮುನ್ನ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ರಿಜಿಜು, ಪ್ರಧಾನ ಮಂತ್ರಿಯವರ ಸಹೋದರತ್ವ ಹಾಗೂ ದೇಶ ಒಗ್ಗಟ್ಟಾಗಿರಬೇಕು ಎನ್ನುವ ಸಂದೇಶದೊಂದಿಗೆ ಅಜ್ಮೀರ್‌ಗೆ ತೆರಳುತ್ತಿದ್ದೇನೆ ಎಂದು ಹೇಳಿದರು.

ಹಿಂದೂ, ಮುಸ್ಲಿಂ, ಸಿಖ್, ಕ್ರಿಶ್ಚಿಯನ್, ಪಾರ್ಸಿ, ಬೌದ್ಧ ಅಥವಾ ಜೈನ್ ಎಲ್ಲರನ್ನೂ ದರ್ಗಾದಲ್ಲಿ ಸ್ವಾಗತಿಸಲಾಗುತ್ತದೆ. ಲಕ್ಷಾಂತರ ಜನರು ದರ್ಗಾಕ್ಕೆ ಭೇಟಿ ನೀಡುತ್ತಿದ್ದು, ಅವರಿಗೆ ಯಾವ ತೊಂದರೆ ಆಗದು, ಪ್ರಕ್ರಿಯೆ ಸರಳವಾಗಿರಬೇಕು. ದರ್ಗಾವನ್ನು ಶಿವ ದೇಗುಲದ ಮೇಲೆ ನಿರ್ಮಿಸಲಾಗಿದೆ ಎಂದು ಚಾದರ್ ಅರ್ಪಿಸಲಷ್ಟೇ ಬಂದಿದ್ದೇನೆ. ಏನನ್ನೂ ಪ್ರದರ್ಶಿಸಲೋ ಅಥವಾ ಏನಾದರೂ ಹೇಳಲು ಬಂದಿಲ್ಲ. ದೇಶದ ಜನರೆಲ್ಲರೂ ನೆಮ್ಮದಿಯಿಂದ ಇರಬೇಕು ಎನ್ನುವ ಪ್ರಧಾನಿ ಮೋದಿ ಅವರ ಸಂದೇಶದೊಂದಿಗೆ ತೆರಳುತ್ತಿದ್ದೇನೆ ಎಂದರು.

ಸಿರಿಯಾದೊಳಗೆ ನುಗ್ಗಿ ಕ್ಷಿಪಣಿ ಘಟಕ ನಾಶಪಡಿಸಿದ ಇಸ್ರೇಲ್



ಜೆರುಸಲೇಂ: ವಿದೇಶಗಳಿಗೆ ನುಗ್ಗಿ ಅಲ್ಲಿ ರಹಸ್ಯ ಕಾರ್ಯಾಚರಣೆ ನಡೆಸುವುದಕ್ಕೆ ಖ್ಯಾತಿ ಹೊಂದಿರುವ ಇಸ್ರೇಲ್ ಮತ್ತೆ ಅಂಥದ್ದೇ ಕಾರ್ಯಾಚರಣೆ ನಡೆಸಿದೆ. 6 ತಿಂಗಳ ಹಿಂದೆ 100 ಕಮಾಂಡೋಗಳು ಸಿರಿಯಾದೊಳಗೆ ನುಗ್ಗಿ ಅಲ್ಲಿನ ರಹಸ್ಯ ಕ್ಷಿಪಣಿ ತಯಾರಿಕಾ ಘಟಕವೊಂದರ ಮೇಲೆ ದಾಳಿ ನಡೆಸಿ ಅದನ್ನು ಧ್ವಂಸಗೊಳಿಸಿದ ಘಟನೆ ಕುರಿತು ಇಸ್ರೇಲ್ ಇದೀಗ ಮಾಹಿತಿ ಬಹಿರಂಗ ಮಾಡಿದೆ. ಇಸ್ರೇಲ್ ಮೇಲೆ ದಾಳಿಗೆಂದೇ ಕ್ಷಿಪಣಿ ತಯಾರಿಸಲು ಬೆಟ್ಟಗುಡ್ಡಗಳ ಪ್ರದೇಶದಲ್ಲಿ ನೆಲದಾಳದಲ್ಲಿ ಸಿರಿಯಾ ರಹಸ್ಯ ಘಟಕ ತೆರೆದಿತ್ತು. ಇದಕ್ಕೆ ಇರಾನ್ ಹಣಕಾಸು ನೆರವು ನೀಡಿತ್ತು. 2017ರಲ್ಲೇ ಇದರ ಮಾಹಿತಿ ಪಡೆದಿದ್ದ ಇಸ್ರೇಲ್ ಅಂದಿನಿಂದಲೂ ಅದರ ಮೇಲೆ ನಿಗಾ ಇಟ್ಟಿತ್ತು.

ಸೆ.8ರಂದು 2 ಯುದ್ಧ ಹೆಲಿಕಾಪ್ಟರ್‌ಗಳು, 21 ಯುದ್ಧ ವಿಮಾನ, 5 ಡ್ರೋನ್, 14 ಗುಪ್ತಚರ ವಿಮಾನಗಳೊಂದಿಗೆ 100 ಶಾಲ್ದಾಗ್ ಕಮಾಂಡೋಗಳು ಸಿರಿಯಾದ ರೆಡಾರ್‌ಗಳ ಕಣ್ತಪ್ಪಿಸಿ ಮೆಡಿಟರೇನಿಯನ್ ಸಮುದ್ರದ ಮೇಲೆ ಕೆಳಮಟ್ಟದಲ್ಲಿ ಹಾರಾಟ ನಡೆಸಿ ಸಿರಿಯಾದ ಕ್ಷಿಪಣಿ ಉತ್ಪಾದನಾ ಘಟಕದ ಬಳಿ ಬಂದಿಳಿದರು. ಈ ವೇಳೆ ಸಿರಿಯಾದ ಗಮನ ಬೇರೆಡೆ ಸೆಳೆಯಲು ಇಸ್ರೇಲಿ ಸೇನಾ ಪಡೆ ಸಿರಿಯಾದ ಇತರೆ ಭಾಗಗಳ ಮೇಲೆ ರಾಕೆಟ್ ದಾಳಿ ನಡೆಸಿತ್ತು.

ಸರ್ಕಾರ ಶ್ರೀ ಮಹಾ ಮೃತ್ಯುಂಜಯ ದೇವಾಲಯ ವಶಕ್ಕೆ ಪಡೆಯಲಿ

ಅಖಿಲ ಕೊಡವ ಸಮಾಜ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ.

ಮಡಿಕೇರಿ,ಜ.4– ಕಟ್ಟೆಮಾಡು ಗ್ರಾಮದ ಶ್ರೀ ಮಹಾ ಮೃತ್ಯುಂಜಯ ದೇವಾಲಯದಲ್ಲಿ ಈಗ ಅಸ್ತಿತ್ವದಲ್ಲಿರುವ ಆಡಳಿತ ಮಂಡಳಿಯನ್ನು ಉಚ್ಚಾಟಿಸಿ, ಸರಕಾರ ದೇವಾಲಯವನ್ನು ತನ್ನ ಅಧೀನಕ್ಕೆ ಪಡೆಯಬೇಕೆಂದು ಅಖಿಲ ಕೊಡವ ಸಮಾಜ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಮಣಿ, ಈಗ ಇರುವ ದೇವಾಲಯ ಆಡಳಿತ ಮಂಡಳಿ ಜಾತಿವಾದಿಯಾಗಿದ್ದು, ಸಂಘರ್ಷಕ್ಕೆ ನಾಂದಿ ಹಾಡಿದೆ. ಅತ್ಯಂತ ಪ್ರಾಚೀನವಾದ ಮಾದೇವ ದೇವಸ್ಥಾನದ ಹೆಸರನ್ನು ಬಾಡಗರಕೇರಿ ಮೃತ್ಯುಂಜಯ ದೇವಾಲಯಕ್ಕೆ ಪರ್ಯಾಯವಾಗಿ ಶ್ರೀ ಮಹಾ ಮೃತ್ಯುಂಜಯ ದೇವಾಲಯ ಎಂದು ಬದಲಾಯಿಸಿ ಆಡಳಿತ ಮಂಡಳಿ ರಚಿಸಲಾಗಿದೆ ಎಂದು ಆರೋಪಿಸಿದರು.

ಮಾದೇವ ದೇವರ ಹೆಸರಿನಡಿ ಸ್ಥಳೀಯ ಸಂಪ್ರದಾಯಕ್ಕೆ ಬದ್ಧವಾಗಿ ಆಡಳಿತ ನಡೆಸಲು ಅಖಿಲ ಕೊಡವ ಸಮಾಜ ಸರ್ಕಾರಕ್ಕೆ ಸಂಪೂರ್ಣ ಬೆಂಬಲ ನೀಡಲಿದೆ ಎಂದ ಅವರು, ಕಟ್ಟೆಮಾಡು ಪಾಪಳಕೇರಿ ಮಾದೇವ ದೇವರ ಸ್ಥಾನಕ್ಕೆ ಸುಮಾರು ಸಾವಿರ ವರ್ಷಗಳ ಇತಿಹಾಸವಿದೆ. ಕೊಡಗಿನಲ್ಲಿ ಪಾಲೇರಿ ರಾಜವಂಶ ಸ್ಥಾಪನೆಯಾಗುವ ಮೊದಲೇ ಈ ದೇವಾಲಯವಿದ್ದು, ಕೆಲವು ಕೊಡವ ಭಾಷಿಕ ಕುಟುಂಬಗಳು ವರ್ಷಾವಧಿ ಪೂಜೆ ನಡೆಸುತ್ತಾ ಬಂದಿರುವುದು ವಾಸ್ತವಾಂಶವಾಗಿದೆ ಎಂದರು.

ಕೆಲವು ಪ್ರಭಾವಿ ಜಾತಿವಾದಿಗಳು ಜನರ ದಿಕ್ಕು ತಪ್ಪಿಸಿ ಮಾದೇವ ದೇವರ ಸ್ಥಾನದ ಹೆಸರನ್ನು ಮೃತ್ಯುಂಜಯ ಎಂದು ಮರುನಾಮಕರಣ ಮಾಡಿ ಹೊರನಾಡಿನ ಸಂಪ್ರದಾಯವನ್ನು ಮೂಲ ನಿವಾಸಿಗಳ ಮೇಲೆ ಹೇರುವ ಪ್ರಯತ್ನಗಳು ನಡೆದಿದೆ ಎಂದು ಪರದಂಡ ಸುಬ್ರಮಣಿ ಆರೋಪಿಸಿದರು.

ಜಂಟಿ ಕಾರ್ಯದರ್ಶಿ ನಂದೇಟಿರ ರಾಜಾ ಮಾದಪ್ಪ ಮಾತನಾಡಿ, ದೇವಾಲಯದಲ್ಲಿ ಸಂಘರ್ಷ ನಡೆದಿದ್ದು, ಹಲ್ಲೆ ಕೂಡ ಆಗಿದೆ. ದೇವಾಲಯಗಳ ಉತ್ಸವದ ಸಂದರ್ಭ ಕೊಡವ ಸಾಂಪ್ರದಾಯಿಕ ಉಡುಪು ತೊಡಲು ಅವಕಾಶವಿದೆ. ಕೇರಳದ ದೇವಾಲಯಗಳಿಗೂ ಕೊಡವ ಉಡುಪು ತೊಡುತ್ತೇವೆ. ಎಲ್ಲೂ ಇಲ್ಲದ ಅಡ್ಡಿ ಇಲ್ಲಿ ಯಾಕೆ ಎಂದು ಪ್ರಶ್ನಿಸಿದರು. ಕೊಡವ ಉಡುಪು ತೊಟ್ಟರೆ ಯಾವುದೇ ಭಕ್ತರಿಗೆ ತೊಂದರೆಯಾಗುವುದಿಲ್ಲ. ನಮ್ಮ ಸಂಪ್ರದಾಯವನ್ನು ಪಾಲಿಸುತ್ತಿದ್ದೇವೆ ಅಷ್ಟೆ, ದೇವಾಲಯದ ಕಾರ್ಯಗಳು ಸುಸೂತ್ರವಾಗಿ ಒಗ್ಗಟ್ಟಿನಿಂದ ನಡೆಯಬೇಕೆನ್ನುವುದು ನಮ್ಮೆಲ್ಲರ ಅಪೇಕ್ಷೆಯಾಗಿದೆ. ಆದರೆ ಕೊಡವ ಸಾಂಪ್ರದಾಯಿಕ ಉಡುಪಿಗೆ ಅಡ್ಡಿಯಾಗಬಾರದು ಎಂದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಅಜ್ಜಿಕುಟ್ಟಿರ ಸುಬ್ರಮಣಿ, ಕಾರ್ಯದರ್ಶಿ ಕೀತಿಯಂಡ ವಿಜಯ ಕುಮಾರ್ ಹಾಗೂ ಜಂಟಿ ಕಾರ್ಯದರ್ಶಿ ಮೂವೇರ ರೇಖಾ ಪ್ರಕಾಶ್ ಉಪಸ್ಥಿತರಿದ್ದರು.

ದೇವಾಲಯದಲ್ಲಿ ತಳ್ಳಾಟವಾಗಿದೆ, ಹಲ್ಲೆಯಾಗಿಲ್ಲ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಅಪ್ಪಯಂಡ್ರ ಮಣಿ ಮುತ್ತಪ್ಪ.

ಮಡಿಕೇರಿ,ಜ.4– ಯಾವುದೇ ಜಾತಿ, ಜನಾಂಗ ಅಥವಾ ಒಂದು ವರ್ಗಕ್ಕೆ ಸೀಮಿತವಾದ ಸಂಪ್ರದಾಯಗಳಿಗೆ ಆದ್ಯತೆ ನೀಡದೆ ದೇವರ ಸನ್ನಿಧಿಯಲ್ಲಿ ಎಲ್ಲರೂ ಒಂದೇ ಎನ್ನುವ ಭಾವನೆಯಿಂದ ಶ್ರೀ ಮಹಾ ಮೃತ್ಯುಂಜಯ ದೇವಾಲಯ ಸಮಿತಿ ರೂಪಿಸಿರುವ ಕಟ್ಟುಪಾಡುಗಳಿಗೆ ನಾವು ಬದ್ಧ ಎಂದು ಕಟ್ಟೆಮಾಡು ಗ್ರಾಮದ ಗೌಡ ಸಮುದಾಯ ಸ್ಪಷ್ಟಪಡಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಪ್ಪಯಂಡ್ರ ಮಣಿ ಮುತ್ತಪ್ಪ ಡಿ.27ರಂದು ದೇವಾಲಯದ ಜಾತ್ರಾ ಮಹೋತ್ಸವದ ಸಂದರ್ಭ ದೇವರು ಜಳಕ್ಕೆ ಹೊರಡುವಾಗ ದೇವಾಲಯ ಸಮಿತಿಯ ನಿಯಮವನ್ನು ಮೀರಿ ಕೆಲವರು ಉದ್ದೇಶಪೂರ್ವಕವಾಗಿ ಸಾಂಪ್ರದಾಯಿಕ ಉಡುಪಿನಲ್ಲಿ ಆಗಮಿಸಿದ್ದಾರೆ. ಇದು ದೇವಾಲಯದ ಅಧಿಕಾರ ಹಿಡಿಯುವ ಹುನ್ನಾರವಾಗಿದೆ ಎಂದು ಆರೋಪಿಸಿದರು.

ಸಂಘರ್ಷ ನಡೆಯುವ ಸಂದರ್ಭ ಎರಡೂ ಕಡೆಯಿಂದ ಮಾತಿಗೆ ಮಾತು ಬೆಳೆದಿದೆ, ತಳ್ಳಾಟವಾಗಿದೆ. ಆದರೆ ಯಾರ ಮೇಲೂ ಹಲ್ಲೆಯಾಗಿಲ್ಲ, ಯಾರನ್ನೂ ದೇವಾಲಯದ ಒಳಗೆ ಬರಬೇಡಿ ಎಂದು ಹೇಳಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ವಿನಾ ಕಾರಣ ಸುಳ್ಳು ವದಂತಿ ಹಬ್ಬಿಸಲಾಗುತ್ತಿದೆ. ದೇವಾಲಯದ ಸಿಸಿ ಕ್ಯಾಮರಾದಲ್ಲಿ ಸತ್ಯಾಂಶ ಸೆರೆಯಾಗಿದ್ದು, ಯಾರು ಬೇಕಾದರೂ ಪರಿಶೀಲಿಸಬಹುದು ಎಂದು ಹೇಳಿದರು.

ಶ್ರೀ ಮಹಾ ಮೃತ್ಯುಂಜಯ ದೇವಾಲಯದ ಅಭಿವೃದ್ಧಿಗಾಗಿ ಗ್ರಾಮದ ಎಲ್ಲಾ ಜಾತಿ ಜನಾಂಗಗಳು ಒಗ್ಗಟ್ಟಿನಿಂದ ಶ್ರಮಪಟ್ಟಿವೆ. ಅಷ್ಟೇ ಒಗ್ಗಟ್ಟಿನಿಂದ ಜಾತ್ರಾ ಮಹೋತ್ಸವ ನಡೆಸಬೇಕೆನ್ನುವ ಸಂಭ್ರಮ ಮನೆ ಮಾಡಿತ್ತು. ದೇವಾಲಯದಲ್ಲಿ ಮೇಲು, ಕೀಳೆನ್ನುವ ಮನೋಭಾವನೆ ಇರಬಾರದು, ಎಲ್ಲರೂ ಒಂದೇ ಎನ್ನುವ ದೃಷ್ಟಿಯಿಂದ ಜನಾಂಗದ ಸಾಂಪ್ರದಾಯಿಕ ಉಡುಪಿಗೆ ಅವಕಾಶ ನೀಡಿರಲಿಲ್ಲ. ಇದಕ್ಕೆ ಇಡೀ ಗ್ರಾಮಸ್ಥರ ಸಮ್ಮತಿ ಇತ್ತು ಎಂದು ಅಪ್ಪಯಂಡ್ರ ಮಣಿ ಮುತ್ತಪ್ಪ ಸ್ಪಷ್ಟಪಡಿಸಿದರು.

ಪ್ರಮಾಣ ಮಾಡಲಿ: ಬಿದ್ರುಪಣೆ ಪ್ರಸನ್ನ ಮಾತನಾಡಿ ಸಾಮಾಜಿಕ ಜಾಲತಾಣದಲ್ಲಿ ವದಂತಿ ಹಬ್ಬಿಸಿರುವಂತೆ ದೇವಾಲಯದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆದಿಲ್ಲ, ದೌರ್ಜನ್ಯ ನಡೆದಿದ್ದರೆ ಶ್ರೀ ಮಹಾ ಮೃತ್ಯುಂಜಯನ ಎದುರು ಪ್ರಮಾಣ ಮಾಡಲಿ ಎಂದರು.

ದೇವಸ್ಥಾನದ ಅಭಿವೃದ್ಧಿಗಾಗಿ ಗ್ರಾಮದ ಎಲ್ಲಾ ಜಾತಿ ಜನಾಂಗದ ಮಂದಿ ಒಗ್ಗಟ್ಟಾಗಿ ರಾತ್ರಿ ಹಗಲೆನ್ನದೆ ಸ್ವಯಂ ಸೇವಕರಾಗಿ ದುಡಿದಿದ್ದಾರೆ. ಕಟ್ಟೆಮನೆ ಕುಟುಂಬಸ್ಥರೇ ಸುಮಾರು 2 ಕೋಟಿ ರೂ.ಗಳಷ್ಟು ದೇಣಿಗೆ ನೀಡಿದ್ದಾರೆ. ಜಾತ್ರೋತ್ಸವದ ಸಂದರ್ಭ ಮಹಿಳೆಯರಾದಿಯಾಗಿ ಎಲ್ಲಾ ಗ್ರಾಮಸ್ಥರು ಶ್ರಮದಾನ ಮಾಡಿದ್ದಾರೆ. ಆದರೆ ಯಾವುದೇ ಕಾರ್ಯದಲ್ಲಿ ಭಾಗಿಯಾಗದ ಮಂದಿ ಕೇವಲ ಅಧಿಕಾರಕ್ಕಾಗಿ ಸಂಘರ್ಷ ಉಂಟು ಮಾಡಿದ್ದಾರೆ ಎಂದು ಆರೋಪಿಸಿದರು. ಗೌಡರ ಅವಹೇಳನವನ್ನು ಇಡೀ ಗೌಡ ಸಮುದಾಯ ತೀವ್ರವಾಗಿ ಖಂಡಿಸುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಟ್ಟೆಮನೆ ದಿನೇಶ್, ಜೈನಿರ ಪಿ.ಸುಬ್ಬಯ್ಯ, ಕಟ್ಟೆಮನೆ ಆಶಿಕ್ ಅಪ್ಪಚ್ಚು ಹಾಗೂ ಕಾಂಗೀರ ಪೂವಯ್ಯ ಉಪಸ್ಥಿತರಿದ್ದರು.


ಗಣರಾಜ್ಯೋತ್ಸವಕ್ಕೆ ಮನ್ನೆರ ಪ್ರಶಸ್ತಿ ಆಯ್ಕೆ



ಮಡಿಕೇರಿ,ಜ.4– ದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವ ಪಥ ಸಂಚಲನಕ್ಕೆ ಕೊಡಗಿನ ಮನ್ನೆರ ಪ್ರಶಸ್ತಿ ಆಯ್ಕೆಯಾಗಿದ್ದಾರೆ. ಮನ್ನೆರ ಪ್ರಶಸ್ತಿ ಅವರು ಕರ್ನಾಟಕ ಮತ್ತು ಗೋವಾ ಬೆಟಾಲಿಯನ್ ಏರ್ ವಿಂಗ್‌ನಿಂದ ಆಯ್ಕೆಯಾಗಿದ್ದಾರೆ. ಇವರು ಮೂಲತಃ ಪೊನ್ನಂಪೇಟೆ ತಾಲೂಕು ಹರಿಹರ ಗ್ರಾಮದ ನಿವಾಸಿ ಮನ್ನೆರ ಮನು ಮತ್ತು ಸೌಮ್ಯ ದಂಪತಿ ಪುತ್ರಿಯಾಗಿದ್ದು ಪ್ರಸ್ತುತ ಮೂಡಬಿದ್ರೆಯ ಆಳ್ವಾಸ್ ಕಾಲೇಜಿನಲ್ಲಿ ದ್ವಿತೀಯ ವರ್ಷದ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾರೆ.

ಕೂಡಿಗೆ ಹಾಲಿನ ಡೈರಿ ಸದ್ಯದಲ್ಲೇ ಮೇಲ್ದರ್ಜೆಗೆ

ಹೈನುಗಾರರು ಹಾಲಿನ ಗುಣಮಟ್ಟ ಹೆಚ್ಚಿಸಲು ಸಲಹೆ



ಸಂವಾದದಲ್ಲಿ ಹಾಸನ ಹಾಲು ಒಕ್ಕೂಟ ಕೊಡಗು ಘಟಕದ ನಿರ್ದೇಶಕರಾದ ಕೆ.ಕೆ. ಹೇಮಂತ್‌ಕುಮಾರ್ ಮಾತನಾಡಿದರು.

ಕುಶಾಲನಗರ: ರಾಜ್ಯದಲ್ಲಿಯೇ ಪ್ರಥಮ ಹಾಲಿನ ಡೈರಿ ಎಂಬ ಹೆಸರು ಗಳಿಸಿರುವ ಕೂಡಿಗೆ ಹಾಲಿನ ಡೈರಿಯು ಸದ್ಯದಲ್ಲೇ ಮೇಲ್ದರ್ಜೆಗೆ ಏರಲಿದ್ದು, ಮುಂದಿನ ದಿನಗಳಲ್ಲಿ ನಮ್ಮ ಡೈರಿಯಲ್ಲಿ ಮೊಸರು ಹಾಗೂ ಮಜ್ಜಿಗೆ ಉತ್ಪನ್ನ ತಯಾರಿಕೆ ಘಟಕ ಸ್ಥಾಪಿಸುವ ಯೋಜನೆ ರೂಪಿಸಲಾಗಿದೆ ಎಂದು ಹಾಸನ ಹಾಲು ಒಕ್ಕೂಟ ಕೊಡಗು ಘಟಕದ ನಿರ್ದೇಶಕ ಕೆ.ಕೆ. ಹೇಮಂತ್ ಕುಮಾರ್ ತಿಳಿಸಿದ್ದಾರೆ.

ಕೊಡಗು ಪತ್ರಕರ್ತರ ಸಂಘದ ಕುಶಾಲನಗರ ತಾಲೂಕು ಘಟಕದಿಂದ ಶನಿವಾರ ಕೂಡಿಗೆ ಹಾಲಿನ ಡೈರಿಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

1955ರಲ್ಲಿ ರಾಜ್ಯದಲ್ಲಿಯೇ ಪ್ರಥಮ ಹಾಲಿನ ಡೈರಿಯಾಗಿ ಕೂಡಿಗೆ ಡೈರಿ ಸ್ಥಾಪನೆಗೊಂಡಿದೆ. ಇದನ್ನು ಮದರ್ ಡೈರಿ ಎಂದು ಕೂಡ ಕರೆಯಲಾಗುತ್ತದೆ ಇದೀಗ ಕಚೇರಿಯ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದು, 34 ಲಕ್ಷ ರೂ. ವೆಚ್ಚದಲ್ಲಿ ತಾತ್ಕಾಲಿಕ ಕಚೇರಿ ನಿರ್ವಹಣೆಗೆ ಕಟ್ಟಡ ನಿರ್ಮಿಸಲಾಗುವುದು. ಅಲ್ಲದೆ ಮುಂದಿನ ದಿನಗಳಲ್ಲಿ 20 ಕೋಟಿ ರೂ. ವೆಚ್ಚದಲ್ಲಿ ಕೂಡಿಗೆ ಡೈರಿಯನ್ನು ಸಂಪೂರ್ಣವಾಗಿ ಮೇಲ್ದರ್ಜೆಗೇರಿಸಲಾವುದು ಎಂದು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಸುಮಾರು 39 ಹಾಲು ಉತ್ಪಾದಕರ ಸಂಘಗಳಿದ್ದು, ಪ್ರತಿ ದಿನ ಜಿಲ್ಲೆಯಿಂದ ಸುಮಾರು 30 ಸಾವಿರ ಲೀಟರ್ ಹಾಲನ್ನು ಸಂಗ್ರಹಿಸಲಾಗುತ್ತಿದೆ. ದಿನವೊಂದಕ್ಕೆ ಸುಮಾರು 55 ಸಾವಿರ ಲೀ. ಹಾಲು ಕೂಡಿಗೆ ಡೈರಿಯಿಂದ ಮಾರಾಟವಾಗುತ್ತದೆ. ಬೇಡಿಕೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಹಾಸನ ಜಿಲ್ಲೆಯ ಅರಕಲುಗೂಡು, ರಾಮನಾಥಪುರದ ವಿವಿಧ ಹಾಲು ಉತ್ಪಾದರಕ ಸಂಘದಿಂದ 25 ಸಾವಿರ ಲೀ. ಹಾಲನ್ನು ಟ್ಯಾಂಕರ್ ಮೂಲಕ ತರಲಾಗುತ್ತಿದ್ದು, ಸಂಸ್ಕರಣೆ ಮಾಡಿ ಗ್ರಾಹಕರಿಗೆ ಉತ್ತಮ ಗುಣಮಟ್ಟದ ಹಾಲನ್ನು ವಿತರಣೆ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕೆಲವು ಕಡೆಗಳಲ್ಲಿ ಹಾಲಿನಲ್ಲಿ ಕಲಬೆರಕೆ ಪ್ರಕರಣಗಳು ಕಂಡುಬಂದಿದ್ದು, ಈ ಬಗ್ಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಇದರಿಂದ ಹಲವು ಹೈನುಗಾರರು ಉತ್ತಮ ಗುಣಮಟ್ಟದ ಹಾಲನ್ನು ಡೈರಿಗೆ ನೀಡುವ ಮೂಲಕ ಸಹಕರಿಸಬೇಕೆಂದು ಮನವಿ ಮಾಡಿದ ಅವರು, ಕಳಪೆ ಗುಣಮಟ್ಟದ ಹಾಲನ್ನು ನಾವು ತಿರಸ್ಕರಿಸಿದ್ದು, ಅಂತಹ ಹಾಲು ಕೆಲವು ಖಾಸಗಿ ಸಂಸ್ಥೆಗಳು ಮಾರಾಟ ಮಾಡುತ್ತಿದ್ದು, ಈ ಬಗ್ಗೆ ಗ್ರಾಹಕರು ಎಚ್ಚರ ವಹಿಸುವಂತೆ ಸಲಹೆ ನೀಡಿದರು.

ಸಂವಾದದಲ್ಲಿ ಕೂಡಿಗೆ ಡೈರಿ ವಿಸ್ತರಣಾ ಅಧಿಕಾರಿ ವೀಣಾ, ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಮುರುಳೀಧರ್, ಉಪಾಧ್ಯಕ್ಷ ಜಿ.ವಿ. ರವಿಕುಮಾರ್, ಕುಶಾಲನಗರ ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿಘ್ನೇಶ್ ಭೂತನಕಾಡು ಸೇರಿದಂತೆ ಜಿಲ್ಲೆಯ ವಿವಿಧ ಭಾಗದ ಪತ್ರಕರ್ತರು ಸಂವಾದದಲ್ಲಿ ಪಾಲ್ಗೊಂಡಿದ್ದರು.

ಕಾಡಾನೆ ದಾಳಿಯಿಂದ ದ್ವಿಚಕ್ರ ವಾಹನ ಜಖಂ, ಸವಾರ ಪಾರು



ಮಡಿಕೇರಿ,ಜ.4– ದ್ವಿಚಕ್ರ ವಾಹನ ಸವಾರನ ಮೇಲೆ ಕಾಡಾನೆ ದಾಳಿ ನಡೆಸಿ ವಾಹನವನ್ನು ಜಖಂಗೊಳಿಸಿದ್ದು, ಸವಾರ ಅಪಾಯದಿಂದ ಪಾರಾಗಿರುವ ಘಟನೆ ಮಡಿಕೇರಿ ತಾಲೂಕಿನ ಜೋಡುಪಾಲದಲ್ಲಿ ನಡೆದಿದೆ.

ಜೋಡುಪಾಲದ ನಿವಾಸಿ ಕಾರ್ಮಿಕ ಮುತ್ತಯ್ಯ ಎಂಬುವರು ಎಂದಿನಂತೆ ಬೆಳಗಿನ ಜಾವ ಕೆಲಸಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಜೋಡುಪಾಲದ 10ನೇ ಮೈಲ್ ಬಳಿ ಕಾಡಾನೆ ದಾಳಿ ನಡೆಸಿದೆ. ಈ ವೇಳೆ ಕಾರ್ಮಿಕ ಮುತ್ತಯ್ಯ ಅವರು ಆನೆ ದಾಳಿಯಿಂದ ತಪ್ಪಿಸಿಕೊಂಡು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಆಕ್ರೋಶಿತ ಕಾಡಾನೆ ದ್ವಿಚಕ್ರ ವಾಹನವನ್ನು ತುಳಿದು ಜಖಂಗೊಳಿಸಿದೆ. ಘಟನಾ ಸ್ಥಳಕ್ಕೆ ಅರಣ್ಯಾಧಿಕಾರಿಗಳ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಜ.13ರಿಂದ ಚಿಕ್ಕಲ್ಲೂರು ಜಾತ್ರಾ ಮಹೋತ್ಸವ

ಶಾಸಕರು, ಜಿಲ್ಲಾಧಿಕಾರಿಗಳಿಂದ ಸಿದ್ಧತೆಗಳ ಪರಿಶೀಲನೆ



ಶ್ರೀಕ್ಷೇತ್ರ ಚಿಕ್ಕಲ್ಲೂರು ಹಳೇ ಮಠದ ಆವರಣದಲ್ಲಿ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಮಾತನಾಡಿದರು.

ಚಾಮರಾಜನಗರ, ಜ.4– ಕೊಳ್ಳೇಗಾಲ ತಾಲೂಕಿನ ಚಿಕ್ಕಲ್ಲೂರಿನಲ್ಲಿ ಜ.13ರಿಂದ 5 ದಿನಗಳ ಕಾಲ ನಡೆಯುವ ಘನನೀಲ ಸಿದ್ದಾಪ್ಪಾಜಿಯವರ ಜಾತ್ರಾ ಮಹೋತ್ಸವದ ಪೂರ್ವಸಿದ್ಧತೆಗಳನ್ನು ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್ ಹಾಗೂ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಪರಿಶೀಲಿಸಿದರು.

ಕೊಳ್ಳೇಗಾಲ ತಾಲೂಕಿನ ಶ್ರೀಕ್ಷೇತ್ರ ಚಿಕ್ಕಲ್ಲೂರು ಹಳೇ ಮಠದ ಆವರಣದಲ್ಲಿ ನಡೆದ ಜಾತ್ರಾ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಕ್ಷೇತ್ರದಲ್ಲಿನ ಮೂಲ ಸೌಲಭ್ಯಗಳ ಕುರಿತು ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಪರಿಶೀಲನೆ ನಡೆಸಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ಐತಿಹಾಸಿಕ ಪರಂಪರೆಯುಳ್ಳ ಚಿಕ್ಕಲ್ಲೂರು ಜಾತ್ರಾ ಮಹೋತ್ಸವಕ್ಕೆ ಜಿಲ್ಲೆ ಹಾಗೂ ಹೊರ ಜಿಲ್ಲೆಗಳಿಂದ ಲಕ್ಷಾಂತರ ಭಕ್ತಾಧಿಗಳು ಆಗಮಿಸಲಿದ್ದು, ಜನರ ಧಾರ್ಮಿಕ ಭಾವನೆಗಳನ್ನು ಗೌರವಿಸಬೇಕಿದೆ. ಕ್ಷೇತ್ರದಲ್ಲಿ ಕುಡಿಯುವ ನೀರು, ಸ್ವಚ್ಚತೆ, ರಸ್ತೆ ಸೇರಿದಂತೆ ಇನ್ನಿತರ ಮೂಲಸೌಕರ್ಯಗಳ ಸಂಪೂರ್ಣ ಅಭಿವೃದ್ಧಿಗೆ ಪೈಲಟ್ ಪ್ರಾಜೆಕ್ಟ್ ಯೋಜನೆ ರೂಪಿಸಬೇಕು ಎಂದರು.

ಕುಡಿಯುವ ನೀರಿಗಾಗಿ ಅಗತ್ಯವಿರುವೆಡೆ ಪೈಪ್ ಲೈನ್ ವ್ಯವಸ್ಥೆ ಮಾಡಬೇಕು. ಜಾತ್ರಾ ಸಮಯದಲ್ಲಿ ರಸ್ತೆಬದಿ ವ್ಯಾಪಾರ ಮಾಡುವವರಿಗೆ ಸ್ಥಳ ಗುರುತು ಮಾಡಿಕೊಡಬೇಕು. ಸ್ವಚ್ಚತೆ ಕಾಪಾಡುವಂತೆ ತಿಳಿ ಹೇಳಬೇಕು. ಶ್ರೀಕ್ಷೇತ್ರದ ಸಮಗ್ರ ಅಭಿವೃದ್ಧಿ ಸಂಬಂಧ ಮಲೆ ಮಹದೇಶ್ವರ ಬೆಟ್ಟದಲ್ಲಿ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿಗಳ ಗಮನ ಸೆಳೆಯಲಾಗುವುದು ಎಂದು ತಿಳಿಸಿದರು.

ಶಾಸಕ ಎಂ.ಆರ್.ಮಂಜುನಾಥ್ ಮಾತನಾಡಿ, ಚಿಕ್ಕಲ್ಲೂರು ರಸ್ತೆ ಅಭಿವೃದ್ಧಿಗಾಗಿ 25 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಇನ್ನು 2–3 ತಿಂಗಳಲ್ಲಿ ಕ್ಷೇತ್ರಕ್ಕೆ ಸುಸಜ್ಜಿತ ರಸ್ತೆ ನಿರ್ಮಿಸಲಾಗುವುದು. ಜಾತ್ರೆಗೆ ಆಗಮಿಸುವ ಭಕ್ತಾಧಿಗಳಿಗೆ ಯಾವುದೇ ತೊಂದರೆಯಾಗದಂತೆ ಅಧಿಕಾರಿಗಳು ನಿಗಾ ವಹಿಸಬೇಕು ಎಂದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಚಿಕ್ಕಲ್ಲೂರು ಜಾತ್ರಾ ಮಹೋತ್ಸವದ ಅಂಗವಾಗಿ ಜ.13ರಂದು ಚಂದ್ರಮಂಡಲೋತ್ಸವ, 14ರಂದು ಹುಲಿವಾಹನೋತ್ಸವ, 15ರಂದು ಮುಡಿಸೇವೆ ಮತ್ತು ರುದ್ರಾಕ್ಷಿ ಮಂಟಪ ಉತ್ಸವ, 16ರಂದು ಗಜವಾಹನೋತ್ಸವ ಹಾಗೂ ಪಂಕ್ತಿ ಸೇವೆ ಹಾಗೂ 17ರಂದು ಮುತ್ತರಾಯ ಸೇವೆಗಳು ನಡೆಯಲಿವೆ. 5 ದಿನಗಳ ಕಾಲ ನಡೆಯಲಿರುವ ಜಾತ್ರಾ ಮಹೋತ್ಸವದಲ್ಲಿ ಯಾವುದೇ ಲೋಪಗಳಿಗೆ ಅವಕಾಶವಾಗದಂತೆ ಕ್ರಮವಹಿಸಲು ಅಧಿಕಾರಿಗಳ ಸಮಿತಿ ರಚಿಸಿ ಕಾರ್ಯಗಳನ್ನು ಹಂಚಿಕೆ ಮಾಡಲಾಗಿದೆ. ಭಕ್ತಾಧಿಗಳಿಗೆ ಕುಡಿಯುವ ನೀರು, ಸ್ವಚ್ಚತೆ, ಸೇರಿದಂತೆ ಎಲ್ಲಾ ಮೂಲಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಈ ಬಾರಿ 170 ಕೆ.ಎಸ್.ಆರ್.ಟಿ.ಸಿ ಬಸ್‌ಗಳನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಜಾತ್ರೆ ನಡೆಯುವ 5 ದಿನಗಳಲ್ಲಿಯೂ ನಿರಂತರ ವಿದ್ಯುತ್ ವ್ಯವಸ್ಥೆ ಕಲ್ಪಿಸುವಂತೆ ಚೆಸ್ಕಾಂ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಜಾತ್ರಾ ಸ್ಥಳದಲ್ಲಿ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆಯಬೇಕು. ಆಂಬುಲೆನ್ಸ್ ಸನ್ನದ್ಧ ಸ್ಥಿತಿಯಲ್ಲಿರಬೇಕು. ಆರೋಗ್ಯ ಅಧಿಕಾರಿಗಳು ನೀರಿನ ಮಾದರಿ ಸಂಗ್ರಹಿಸಿ ಪರೀಕ್ಷೆಗೊಳಪಡಿಸಬೇಕು. ಜಾತ್ರೆಯಲ್ಲಿ ಪ್ರಸಾದದ ಗುಣಮಟ್ಟ ಪರಿಶೀಲಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತ ಅವರು ಮಾತನಾಡಿ, ಪೊಲೀಸ್ ಬಂದೋಬಸ್ತ್ ಬಗ್ಗೆ ವಿವರಿಸಿದರು.

ಜಿಪಂ ಸಿಇಒ ಮೋನಾ ರೋತ್, ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್, ಡಿವೈಎಸ್‌ಪಿ ಧರ್ಮೇಂದ್ರ, ತಹಶೀಲ್ದಾರ್ ಬಸವರಾಜು, ಚಿಕ್ಕಲ್ಲೂರು ಮಠದ ಜ್ಞಾನಾನಂದ ಚನ್ನರಾಜೇ ಅರಸ್, ಭರತ್ ರಾಜೇ ಅರಸ್, ಸನ್ಮತಿ ಅರಸ್, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಮಾಧ್ಯಮ ಅಕಾಡೆಮಿ ಪ್ರಶಸ್ತಿಯಲ್ಲಿ ಚಾ.ನಗರ ಪತ್ರಕರ್ತರ ಕಡೆಗಣನೆ: ಆಯ್ಕೆ ಪಟ್ಟಿ ತಡೆ ಹಿಡಿಯಲು ಪತ್ರಕರ್ತರ ಸಂಘ ಮನವಿ



ಕರ್ನಾಟಕ ಮಾಧ್ಯಮ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಗೆ ಜಿಲ್ಲೆಯ ಪತ್ರಕರ್ತರನ್ನು ಕಡೆಗಣಿಸಲಾಗಿದೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಜ.4– ಕರ್ನಾಟಕ ಮಾಧ್ಯಮ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಗೆ ಜಿಲ್ಲೆಯ ಪತ್ರಕರ್ತರನ್ನು ಆಯ್ಕೆ ಮಾಡದೆ ಕಡೆಗಣಿಸಲಾಗಿದೆ. ಆದ್ದರಿಂದ ಆಯ್ಕೆ ಪಟ್ಟಿಯನ್ನು ತಡೆಹಿಡಿಯಬೇಕು ಎಂದು ಕೋರಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಯಿತು.

ಶುಕ್ರವಾರ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರನ್ನು ಭೇಟಿ ಮಾಡಿದ ಸಂಘದ ಪದಾಧಿಕಾರಿಗಳು, 2019 ರಿಂದ 2024 ರವರೆಗೆ ಮಾಧ್ಯಮ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಯ ಆಯ್ಕೆಯಲ್ಲಿ ನಿರಂತರವಾಗಿ ಜಿಲ್ಲೆಯ ಪತ್ರಕರ್ತರನ್ನು ಕಡೆಗಣಿಸಲಾಗಿದೆ ಎಂದು ಮನವರಿಕೆ ಮಾಡಿದರು.

ಚಾಮರಾಜನಗರ ಜಿಲ್ಲೆಯಾಗಿ 28 ವರ್ಷವಾಗಿದ್ದು, ಇದುವರೆಗೆ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೂವರಿಗೆ ಮಾತ್ರ ಮಾಧ್ಯಮ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಜಿಲ್ಲೆಯ ಪತ್ರಕರ್ತರಿಗೆ ನಿರಂತರವಾಗಿ ಅನ್ಯಾಯವಾಗುತ್ತಿದೆ. ಈ ಬಾರಿಯೂ ಅದು ಮುಂದುವರಿದಿದೆ ಎಂದು ಮನವಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪ್ರಶಸ್ತಿ ಆಯ್ಕೆ ಸಂಬಂಧ ಜಿಲ್ಲೆಗೆ ಆಗುತ್ತಿರುವ ಅನ್ಯಾಯದ ಬಗ್ಗೆ ತಮ್ಮ ಗಮನಕ್ಕೆ ತರಲಾಗಿದೆ. ಆದರೂ ಈ ಬಾರಿಯೂ ಜಿಲ್ಲೆಯ ಪತ್ರಕರ್ತರನ್ನು ಕಡೆಗಣಿಸಿರುವುದು ಬೇಸರದ ಸಂಗತಿ. ಈಗಾಗಲೇ ಪ್ರಕಟಿಸಿರುವ ಪಟ್ಟಿಯನ್ನು ತಡೆಹಿಡಿಯುವ ಮೂಲಕ ಜಿಲ್ಲೆಗೆ ಆಗಿರುವ ಅನ್ಯಾಯವನ್ನು ಸರಿಪಡಿಸಬೇಕೆಂದು ಕೋರಿದ್ದಾರೆ.

ಅಕಾಡೆಮಿಯು ಜಿಲ್ಲೆಯನ್ನು ಕಡೆಗಣಿಸುತ್ತ ಹೋಗುವುದು ಸರಿಯಲ್ಲ. ಸಣ್ಣ ಪುಟ್ಟ ಜಿಲ್ಲೆಗಳ ಪತ್ರಕರ್ತರನ್ನು ಪ್ರಶಸ್ತಿಯಿಂದ ವಂಚಿಸುವುದು ಸೂಕ್ತವಲ್ಲ. ಜಿಲ್ಲೆಗೆ ಒಬ್ಬ ಪತ್ರಕರ್ತರಿಗಾದರೂ ಪ್ರಶಸ್ತಿ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಮನವಿ ಸ್ವೀಕರಿಸಿ ಮಾತನಾಡಿದ ಜಿಲ್ಲಾಧಿಕಾರಿ, ಪ್ರಶಸ್ತಿಗೆ ಜಿಲ್ಲೆಯ ಪತ್ರಕರ್ತರನ್ನು ಕಡೆಗಣಿಸಿರುವುದು ಸರಿಯಲ್ಲ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅವರೊಡನೆ ಮಾತನಾಡುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಸಂಘದ ಅಧ್ಯಕ್ಷರಾದ ದೇವರಾಜು ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಪ್ರಸಾದ್ ಲಕ್ಕೂರು, ಪದಾಧಿಕಾರಿಗಳಾದ ಎ.ಡಿ.ಸಿಲ್ವಾ, ಆರ್.ಎನ್.ಸಿದ್ದಲಿಂಗಸ್ವಾಮಿ, ಮಹೇಂದ್ರ, ರಾಜೇಂದ್ರ, ಗಂಗಾಧರ್, ಬಿಳಿಗಿರಿ ಶ್ರೀನಿವಾಸ್, ಲಿಂಗಪ್ಪ, ಬಾಲಚಂದ್ರ, ಹರವೆ ಮಹೇಶ್, ಮಂಜು ಇತರರಿದ್ದರು.

ಬಸ್ ಪ್ರಯಾಣ ದರ ಹೆಚ್ಚಳ ಖಂಡಿಸಿ ಕರ್ನಾಟಕ ಸೇನಾಪಡೆ ತಮಟೆ ಚಳವಳಿ



ಬಸ್ ಪ್ರಯಾಣ ದರ ಹೆಚ್ಚಿಸಿರುವುದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ಚಾಮರಾಜನಗರದಲ್ಲಿ ತಮಟೆ ಚಳವಳಿ ನಡೆಸಲಾಯಿತು.

ಚಾಮರಾಜನಗರ, ಜ.4– ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣ ದರ ಶೇ.15ರಷ್ಟು ಹೆಚ್ಚಿಸಿರುವುದನ್ನು ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ತಮಟೆ ಚಳವಳಿ ನಡೆಸಲಾಯಿತು.

ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ಸರ್ಕಾರ, ನಿಗಮದ ಸಚಿವರ ವಿರುದ್ಧ ಘೋಷಣೆ ಕೂಗಿ ಅಕ್ರೋಶ ವ್ಯಕ್ತಪಡಿಸಿದರು.

ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ಸರ್ಕಾರವು ಬಸ್ ಪ್ರಯಾಣ ದರವನ್ನು ಶೇ.15ರಷ್ಟು ಹೆಚ್ಚಿಸಿರುವುದರಿಂದ ಸಾರ್ವಜನಿಕರಿಗೆ ತೀವ್ರ ಹೊರೆಯಾಗಿದೆ. ಈಗಾಗಲೇ ಎಲ್ಲಾ ರೀತಿಯ ದಿನಸಿ ಪದಾರ್ಥಗಳು, ಎಣ್ಣೆ, ಕಾಳುಗಳು, ಆಹಾರ ಪದಾರ್ಥಗಳು, ಡೀಸೆಲ್, ಪೆಟ್ರೋಲ್, ನೋಂದಣಿ ಶುಲ್ಕ ಮತ್ತು ಮುದ್ರಾಂಕ ಶುಲ್ಕಗಳನ್ನು ಹೆಚ್ಚಿಸಲಾಗಿದ್ದು, ಜನತೆಗೆ ತುಂಬಾ ತೊಂದರೆಯಾಗಿದೆ. ಕೂಡಲೇ ಬಸ್ ಪ್ರಯಾಣ ದರ ಹೆಚ್ಚಳವನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಪಣ್ಯದಹುಂಡಿ ರಾಜು, ನಿಜಧ್ವನಿ ಗೋವಿಂದ, ಲಿಂಗರಾಜು, ರವಿಚಂದ್ರ ಪ್ರಸಾದ್, ರಾಚಪ್ಪ, ತಾಂಡವಮೂರ್ತಿ, ವೀರಭದ್ರ ಇತರರು ಭಾಗವಹಿಸಿದ್ದರು.

ಇಂದು ವಿದ್ಯಾರ್ಥಿ ವೇತನ ವಿತರಣೆ

ಕೊಳ್ಳೇಗಾಲ: ಶ್ರೀ ಚೌಡೇಶ್ವರಿ ದೇವಾಂಗ ಶೈಕ್ಷಣಿಕ ಮತ್ತು ಧಾರ್ಮಿಕ ದತ್ತಿ ಸಂಸ್ಥೆ ವತಿಯಿಂದ ನಾಳೆ(ಜ.5) ಬೆಳಗ್ಗೆ 10.30ಕ್ಕೆ ವಿದ್ಯಾರ್ಥಿ ವೇತನ ವಿತರಣೆ, ಪ್ರತಿಭಾ ಪುರಸ್ಕಾರ, ಶುಶ್ರೂಷಕರಿಗೆ ಮತ್ತು ಪೊಲೀಸರಿಗೆ ಸನ್ಮಾನ ಸಮಾರಂಭ ಏರ್ಪಡಿಸಲಾಗಿದೆ. ಕೊಳ್ಳೇಗಾಲದ ಶ್ರೀ ಚೌಡೇಶ್ವರಿ ಕಲ್ಯಾಣ ಮಂಟಪದಲ್ಲಿ ನಡೆಯಲಿರುವ ಸಮಾರಂಭವನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಲಿದ್ದು, ಸಂಸ್ಥೆಯ ಅಧ್ಯಕ್ಷ ಸಿ.ಎಂ.ಪರಮೇಶ್ವರಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಕುಲದ ಶೆಟ್ಟಿಗಾರರು, ಮಾಜಿ ಶಾಸಕ ಎಸ್.ಬಾಲರಾಜು, ತಹಸೀಲ್ದಾರ್ ಬಸವರಾಜು, ರಾಜ್ಯ ಆಂಧ್ರ ದೇವಾಂಗ ಸಂಘದ ನಿರ್ದೇಶಕ ಎನ್.ಪಿ.ಸುರೇಶ್ (ಗೊಟ್ಟಿಗೆರೆ ಸೂರಿ) ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದು, ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂಟಪದ ಅಧ್ಯಕ್ಷ ಎಸ್.ಮಂಜುನಾಥ್, ಕಾರ್ಯದರ್ಶಿ ವಿ.ರವೀಂದ್ರ, ಶ್ರೀ ರಾಜರಾಜೇಶ್ವರಿ ಮಹಿಳಾ ಸಂಘದ ಅಧ್ಯಕ್ಷೆ ಶ್ರೀಮತಿ ಮಹದೇವಮ್ಮ ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದು ಸಂಸ್ಥೆಯ ಕಾರ್ಯದರ್ಶಿ ಜಿ.ಶ್ರೀನಿವಾಸ್ ತಿಳಿಸಿದ್ದಾರೆ.

ಇಂದು, ನಾಳೆ ಅಯ್ಯಪ್ಪಸ್ವಾಮಿ ಜಾತ್ರೆ, ಕೊಂಡೋತ್ಸವ

ಗುಂಡ್ಲುಪೇಟೆ, ಜ.4– ಪಟ್ಟಣದ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ ಸಂಘದ ವತಿಯಿಂದ ಅಯ್ಯಪ್ಪ ಸ್ವಾಮಿಯವರ ಜಾತ್ರೆ ಮತ್ತು ಕೊಂಡೋತ್ಸವ ಜ.5 ಮತ್ತು 6 ರಂದು ವಿಜೃಂಭಣೆಯಿಂದ ನೆರವೇರಲಿದೆ.

ಕೊಂಡ ಮಹೋತ್ಸವದ ಅಂಗವಾಗಿ ಜ.5ರ ಬೆಳಗ್ಗೆ 9 ರಿಂದ ಗಣಪತಿ ಹೋಮ ಇತ್ಯಾದಿ ಹಾಗೂ ಸಂಜೆ 5 ಗಂಟೆಗೆ ಶ್ರೀ ಅಯ್ಯಪ್ಪ ಸ್ವಾಮಿಯವರ ಬೆಳ್ಳಿಯ ಮೂರ್ತಿಯನ್ನು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ರಾತ್ರಿ 9ರ ನಂತರ ಭಜನೆ ಕಾರ್ಯಕ್ರಮ ಹಾಗೂ ಜ.6ರ ಮುಂಜಾನೆ ಕೊಂಡ ಮಹೋತ್ಸವ ನಡೆಯಲಿದೆ.

ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ದೇವಸ್ಥಾನ ಪ್ರಕಟಣೆ ಕೋರಿದೆ.




ಗುಂಡ್ಲುಪೇಟೆ ಪಟ್ಟಣದ ಅಯ್ಯಪ್ಪಸ್ವಾಮಿ ದೇವಸ್ಥಾನ ಸಂಘದ ವತಿಯಿಂದ ಭಕ್ತರಿಗೆ ಕರಪತ್ರ ವಿತರಿಸಿ ಕಾಣಿಕೆ ಸಂಗ್ರಹಿಸಲಾಯಿತು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ಸಂತೇಮರಹಳ್ಳಿ ಉಪ ವಿಭಾಗ ವ್ಯಾಪ್ತಿಯ ಚಂದಕವಾಡಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಕಾಮಗಾರಿ ನಿಮಿತ್ತ ಜ.6 ರಂದು ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಹಿರೆಕೆರೆ, ಕಾಳಿಕಾಂಬ ಕಾಲೋನಿ, ಚಂದಕವಾಡಿ, ರೇಚಂಬಳ್ಳಿ, ಸರಗೂರು ಮೋಳೆ, ಅಯ್ಯನ ಪುರ, ಮಲ್ಲೇದೇವನಹಳ್ಳಿ, ನವೋದಯ, ಹೊಂಡರಬಾಳು, ಜ್ಯೋತಿ ಗೌಡನಪುರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂ.ಸಂ.1912 ಸಂಪರ್ಕಿಸುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲ್ಯ ಕಸಿಯುವ ಬಾಲ್ಯ ವಿವಾಹ



ಸ್ವರಾಜ್ ಜೈನ್
ಮೊ.9448219639

ಬಾಲ್ಯದಲ್ಲಿ ಮಕ್ಕಳಿಗೆ ತಮ್ಮ ಹಕ್ಕುಗಳು ದೊರೆತು, ಸ್ವಾಭಾವಿಕವಾಗಿ ತಮ್ಮ ಬಾಲ್ಯವನ್ನು ಸಂತೋಷದಿಂದ ಕಳೆಯಲು ಪೋಷಕರು ಹಾಗೂ ಸಮಾಜ ಅದಕ್ಕೆ ಪೂರಕವಾದ ವಾತಾವರಣ ನಿರ್ಮಾಣ ಮಾಡಿ ಪ್ರತಿ ಮಗು ಅತ್ಯಂತ ಘನತೆ ಮತ್ತು ಸ್ವಯಂ ಗೌರವದಿಂದ ಬದುಕಲು, ಮಕ್ಕಳ ಸ್ನೇಹಿ ವಾತಾವರಣವನ್ನು ನಿರ್ಮಾಣ ಮಾಡುವುದು ಸಮಾಜದ ಹಾಗೂ ನಮ್ಮೆಲ್ಲರ ಆದ್ಯ ಕರ್ತವ್ಯವೂ ಆಗಿರುತ್ತದೆ. ಇಂತಹ ಸಂದರ್ಭದಲ್ಲಿ ನಾವು ಹತ್ತು ಹಲವು ರೀತಿಯ ಸಾಮಾಜಿಕ ಪಿಡುಗುಗಳಿಗೆ ಮಕ್ಕಳನ್ನು ಒಳಪಡಿಸಿರುವುದನ್ನು ಗಮನಿಸಿದ್ದೇವೆ.

ಬಾಲ್ಯವಿವಾಹದಂತಹ ಒಂದು ಸಾಮಾಜಿಕ ಪಿಡುಗು ಪ್ರಸ್ತುತದಲ್ಲಿರುವುದು ವಿದ್ಯಾವಂತ ಹಾಗೂ ನಾಗರಿಕ ಸಮಾಜವನ್ನು ಒಂದು ರೀತಿ ತಲೆತಗ್ಗಿಸುವ ಹಾಗೆ ಮಾಡಿರುವುದು ಇದಕ್ಕೆ ಹೊಣೆಗಾರರು ಯಾರೆಂದು ಹೇಳಲು ಸಾಧ್ಯವೇ, ಅಂದ ಹಾಗೆ ಮಕ್ಕಳು ತಮ್ ತಾವೇ ಈ ರೀತಿಯಾದ ಕೃತ್ಯಗಳಲ್ಲಿ ಭಾಗಿಯಾಗಲು ಸಾಧ್ಯವಾಗುವುದಿಲ್ಲ ಇದಕ್ಕೆ ತನ್ನ ಸುತ್ತಮುತ್ತಲಿನ ಪರಿಸರ ಹಾಗೂ ಆಂತರಿಕ ಮತ್ತು ಬಾಹ್ಯ ಜನರು ಕಾರಣವಾಗಿರಬಹುದು, ಇಂತಹ ಸಾಮಾಜಿಕ ಪಿಡುಗುಗಳಲ್ಲಿ ಒಂದಾದ ಬಾಲ್ಯ ವಿವಾಹವೂ ಇಡೀ ಸಮಾಜವು ತಲೆತಗ್ಗಿಸುವ ರೀತಿಯಲ್ಲಿ ಸಮಾಜದ ಸ್ವಾಸ್ಥ್ಯವನ್ನು ನಿದ್ದೆಗೆಡಿಸುತ್ತಿದೆ, ವೈಜ್ಞಾನಿಕವಾಗಿ ಇಷ್ಟೆಲ್ಲಾ ಮುಂದುವರೆದಿದ್ದರೂ ಇಂತಹ ಸಾಮಾಜಿಕ ಅನಿಷ್ಟ ಪದ್ಧತಿ ಪ್ರಸ್ತುತದಲ್ಲಿ ಜಾರಿ ಇರುವುದು ಮಾನವ ಸಮಾಜದ ಮೂರ್ಖತನಕ್ಕೆ ಕೈಗನ್ನಡಿಯಂತಿದೆ,

ಹಲವು ಪ್ರಕರಣಗಳಲ್ಲಿ ನಾವು ಗಮನಿಸಿದಂತೆ ಪೋಷಕರು ತಮ್ಮ ಮಕ್ಕಳಿಗೆ ಬಹುಬೇಗ ತಮ್ಮ ಜವಾಬ್ದಾರಿಗಳನ್ನು ಕಳೆದುಕೊಂಡು ತಾವು ತಮ್ಮ ಮಕ್ಕಳು ಇಬ್ಬರು ಸಂತೋಷದ ಜೀವನ ನಡೆಸುವ ಸಂದರ್ಭ ಬರಲಿ ಎಂದು ಆಶಿಸುತ್ತಾರೆ(ಕಾಯ್ದೆ ಕಾನೂನುಗಳ ಅಡಿಯಲ್ಲಿ ಇದು ಸರಿ ತಪ್ಪುಗಳನ್ನು ಅವರು ಗಣನೆಗೆ ತೆಗೆದುಕೊಂಡಿರುವುದಿಲ್ಲ), ಹಲವು ಪ್ರಕರಣಗಳಲ್ಲಿ ಪೋಷಕರು ಯೋಚಿಸುತ್ತಾರೆ ತಮ್ಮ ಮಕ್ಕಳು ಋತುಮತಿಯಾದ ಮೇಲೆ ಪ್ರೀತಿ ಪ್ರೇಮ ಪ್ರಣಯ ಹಾಗೂ ಇತರ ಆಕರ್ಷಣೆಗೆ ಒಳಗಾಗಿ ಮುಂದುವರೆದು ಆಗುವ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ ಇಲ್ಲದಿರುವಾಗ ಅಂತಹ ಸಂದರ್ಭದಲ್ಲಿ ಪೋಷಕರು ಇಂತಹ ನಿರ್ಣಯಗಳನ್ನು ತೆಗೆದುಕೊಳ್ಳುವುದು ಸಾಮಾನ್ಯವಾಗಿರುತ್ತದೆ(Under Age Marriage),

ಹೀಗೆ ಮುಂದುವರೆದು ಬೇರೆ ಪ್ರಕರಣಗಳನ್ನು ನಾವು ಗಮನಿಸಿದಂತೆ ಇತ್ತೀಚಿನ ಸಾಮಾಜಿಕ ಜಾಲತಾಣಗಳಾದ ಇನ್ಸ್ಟಾಗ್ರಾಮ್ ಫೇಸ್ಬುಕ್ ಹಾಗೂ ಇತರ ಮಾಧ್ಯಮಗಳಿಂದ ಪ್ರಭಾವಕ್ಕೆ ಒಳಗಾಗಿ ಪ್ರೀತಿ ಪ್ರೇಮ ಪ್ರಣಯಗಳಂತಹ ಆಕರ್ಷಣೆಗೆ ಒಳಗಾಗಿ ತಾವೇ ಬಾಲ್ಯ ವಿವಾಹದಂತ ಪ್ರಕರಣದಲ್ಲಿ ಸ್ವಯಂ ಭಾಗಿಯಾಗಿರುತ್ತಾರೆ. ಇದರ ಜೊತೆಗೆ ಏಕಪೋಷಕರಿರುವ ಮಕ್ಕಳು ಹಾಗೂ ಒಡೆದ ಕುಟುಂಬಗಳ (Broken family) ಮಕ್ಕಳು ಅದೇ ರೀತಿ ಹೆಚ್ಚು ಪ್ರೀತಿ ಮತ್ತು ವಾತ್ಸಲ್ಯ ನೀಡಿರುವ ಕುಟುಂಬಗಳ ಮಕ್ಕಳು (More love and affection) ಹಾಗೆ ಪ್ರೀತಿ ವಾತ್ಸಲ್ಯದಲ್ಲಿ ಕೊರತೆ ಕಂಡು ಬರುವ ಕುಟುಂಬಗಳ ಮಕ್ಕಳು (Less Love and Affection) ಅತಿ ಮುಖ್ಯವಾಗಿ ಪ್ರೀತಿ ಪ್ರೇಮ ಪ್ರಣಯ ಮತ್ತು ಆಕರ್ಷಣೆಗೆ ಒಳಗಾಗಲು ಬಹು ಮುಖ್ಯ ಕಾರಣ ಯಾವಾಗ ಕುಟುಂಬದಲ್ಲಿ ತಮ್ಮ ಮಕ್ಕಳ ಬಗ್ಗೆ ಕಾಳಜಿ ಮತ್ತು ವಾತ್ಸಲ್ಯ ತೋರದೆ ಕಡೆಗಣಿಸಿದ ಸಂದರ್ಭದಲ್ಲಿ ಸಹಜವಾಗಿ ಆ ರೀತಿಯ ಮಕ್ಕಳು ಪ್ರೀತಿ ಪ್ರೇಮ ಪ್ರಣಯ ಎಂದು ಯಾರೂ ತಮ್ಮನ್ನು ಕಾಳಜಿ ಮಾಡುತ್ತಾರೆ ಆ ಕಡೆ ವಾಲುವುದು (Love & Affair) ಸಹಜ. ಇದರ ಪರಿಣಾಮ ಯಾವಾಗ ನಾವು ನಂಬಿದ ಆ ವ್ಯಕ್ತಿಯಿಂದ ಮೋಸ ಹೋದೆ ಎಂದು ಗೊತ್ತಾದಾಗ ಪಶ್ಚಾತಾಪ ಪಟ್ಟಿರುವುದನ್ನು ನಾವು ನಮ್ಮ ಸಮಾಜದಲ್ಲಿ ಗಮನಿಸಿದ್ದೇವೆ, ಬಾಲ್ಯವಿವಾಹದಂತಹ ಪ್ರಕರಣಗಳನ್ನು ದಾಖಲಿಸುವ ಸಂದರ್ಭದಲ್ಲಿ ಇರುವ ಧಾವಂತ ಮತ್ತು ಅವಸರ ಇದನ್ನು ತಾರ್ಕಿಕವಾಗಿ ಅಂತ್ಯ ಕಾಣಿಸುವಲ್ಲಿ ಭಾಗಿದಾರರು ವೈಫಲ್ಯರಾಗಿರುವುದನ್ನು ಕಾಣಬಹುದು.

ಇತ್ತೀಚಿನ ದಿನಮಾನಗಳಲ್ಲಿ ಪೋಷಕರ ಪಾತ್ರ ಸಹ ಬಹಳ ಮುಖ್ಯ. ಕಾರಣ, ಪೋಷಕರು ನಿರಂತರವಾಗಿ ತಮ್ಮ ಮಕ್ಕಳ ಮೇಲೆ ನಿಗಾ ವಹಿಸುವುದು ಹಾಗೂ ಪೋಷಕರ ನಡವಳಿಕೆಗಳು ಸಹ ತಮ್ಮ ಮಕ್ಕಳ ಮೇಲೆ ಪ್ರಭಾವ ಬೀರಬಹುದು ಉದಾಹರಣೆಗೆ ಮನೆಯಲ್ಲಿ ಹಿರಿಯರು ಅಸ್ವಾಭಾವಿಕವಾದ ಸಂಬಂಧಗಳಲ್ಲಿ ಭಾಗಿಯಾಗಿದ್ದರೆ ಮಕ್ಕಳು ಸಹ ಸ್ವಾಭಾವಿಕವಾಗಿ ಪೋಷಕರನ್ನು ಧಿಕ್ಕರಿಸಿ ಹೊರಬಂದಿರುವುದನ್ನು ನಾವು ಗಮನಿಸಿದ್ದೇವೆ. ದೇಶದಲ್ಲಿ ಬಾಲ್ಯವಿವಾಹ ಮುಕ್ತ ಸಮಾಜ ನಿರ್ಮಾಣಕ್ಕೆ ಸಾಮೂಹಿಕವಾದ ಹಾಗೂ ಸಾಮುದಾಯಿಕವಾದ ಸಹಕಾರದ ಜೊತೆಗೆ ದೇಶದ ಕಾನೂನುಗಳು ಸಹ ಇದಕ್ಕೆ ಸಂಬಂಧಿಸಿದಂತೆ ಜಾರಿ ಇದ್ದರೂ ಇದರ ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬದ್ಧತೆ ಇರುವ ಅಧಿಕಾರಿಗಳ ಸಂಖ್ಯೆ ಕೂಡ ವಿರಳತೆ ಎಂದು ದೂರುವುದಕ್ಕಿಂತ ಇದರ ದುರ್ಬಲತೆಗೆ ಕಾರಣವಾದ ಇದರ ಅನುಷ್ಠಾನಕ್ಕೆ ಇರುವ ಕಾನೂನು ಕಾಯ್ದೆಗಳು ಪ್ರಬಲವಾಗಬೇಕಾದರೆ ಬಾಲ್ಯವಿವಾಹ ನಿಷೇಧ ಅಧಿನಿಯಮ 2006 ಹಾಗೂ 2007 ರ ಅಧಿನಿಯಮ ಸಂಖ್ಯೆ 6 ಇಂತಹ ಪ್ರಯತ್ನ ಶಿಕ್ಷಾರ್ಹ ಎನ್ನುತ್ತದೆ.

ಬಾಲ್ಯವಿವಾಹವನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದಕ್ಕೆ ದಂಡನೆ: ಯಾವುದೇ ಬಾಲ್ಯ ವಿವಾಹವನ್ನು ನೆರವೇರಿಸುವ, ನಿರ್ದೇಶಿಸುವ ಸಂಘಟನೆ ಅಥವಾ ಯಾವುದೇ ವ್ಯಕ್ತಿಗಳು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಠಿಣ ಕಾರಾಗೃಹವಾದ ಮತ್ತು ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಗುರಿಯಾಗುತ್ತಾರೆಂದು ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಹೇಳಿರುತ್ತದೆ.

ಬಾಲ್ಯವಿವಾಹವನ್ನು ಶಾಸ್ತ್ರೋಕ್ತವಾಗಿ ನೆರವೇರಿಸುವುದಕ್ಕೆ ಉತ್ತೇಜನ ನೀಡುವುದಕ್ಕಾಗಿ ಅಥವಾ ಅನುಮತಿಸಿರುವುದಕ್ಕಾಗಿ ದಂಡನೆ, ಬಾಲ್ಯವಿವಾಹವನ್ನು ನಿಷೇಧಿಸುವ ನಿರ್ಬಂಧಾಜ್ಞೆ ಹೊರಡಿಸುವುದಕ್ಕೆ ನ್ಯಾಯಾಲಯಕ್ಕೆ ಅಧಿಕಾರವಿದೆ. ಇದರಲ್ಲಿ ಯಾವುದೇ ಸಂಘಟನೆ ಅಥವಾ ವ್ಯಕ್ತಿಗಳ ಸಂಘದ ಸದಸ್ಯರು ಸೇರಿದಂತೆ ಯಾವುದೇ ವ್ಯಕ್ತಿಯ ವಿರುದ್ಧ ನಿರ್ಬಂಧಾಜ್ಞೆಯನ್ನು ಹೊರಡಿಸತಕ್ಕದ್ದು ಎಂದು ನ್ಯಾಯಾಲಯವು ಹೇಳುತ್ತದೆ. ಹೀಗೆ ಕಾನೂನಿನ ಅಸ್ತ್ರವನ್ನು ಪ್ರಬಲವಾಗಿ ಅನುಸರಿಸಿ ಅನುಷ್ಠಾನ ಮಾಡಿದರೆ ಖಂಡಿತ ಮುಂದೊಂದು ದಿನವಲ್ಲ ಈಗಲೇ ಬಾಲ್ಯವಿವಾಹ ಪ್ರಕರಣಗಳನ್ನು ಶೂನ್ಯಕ್ಕೆ ತರಬಹುದು. ಇದಕ್ಕೆ ಸಮಾಜದ ಪ್ರಜ್ಞಾವಂತ ಯುವಸಮೂಹವೂ ಹಾಗೂ ಎಲ್ಲಾ ವರ್ಗದ ಸಮುದಾಯಗಳು ಕೈಜೋಡಿಸಿ ಭಾಗವಹಿಸಿದರೆ ಉದ್ದೇಶ ಸಾಧನೆ ಬಲು ಸುಲಭ.



ರಾಘವೇಂದ್ರ ಜೋಯಿಸ್
ಮೈಸೂರು

ಮಕ್ಕಳ ಭವಿಷ್ಯ ಬೆಳಗಲಿ



ಇದು ಸ್ಪರ್ಧಾತ್ಮಕ ಯುಗ. ಇಂದಿನ ಮಕ್ಕಳು ಇಲ್ಲಿ ಬದುಕು ಕಂಡುಕೊಳ್ಳಬೇಕೆಂದರೆ, ಯಶಸ್ಸು ಗಳಿಸಬೇಕಾದರೆ ಅವರು ಎಷ್ಟು ಕಲಿತರೂ ಕಡಿಮೆಯೇ. ಶೈಕ್ಷಣಿಕವಾಗಿ ಶಾಲೆಯಲ್ಲಿ ಕಲಿಯುವುದು, ಅತ್ಯುತ್ತಮ ಅಂಕಗಳನ್ನು ಪಡೆಯುವುದು ಎಲ್ಲಾ ಒಂದು ಕಡೆ ಆದರೆ, ಪ್ರಚಲಿತ ವಿದ್ಯಮಾನಗಳನ್ನು ಅರಿಯುವುದು, ವ್ಯಕ್ತಿತ್ವ ವಿಕಸನ ಮಾಡಿಕೊಳ್ಳುವತ್ತ ಯತ್ನಿಸುವುದು, ಜೀವನದ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು, ಕೆಲಸಕ್ಕೆ ಬೇಕಾದ ಕೌಶಲ ಬೆಳೆಸಿಕೊಳ್ಳುವುದೂ ಕೂಡ ಮತ್ತೊಂದೆಡೆ ಬಹು ಮುಖ್ಯ ಆಗುತ್ತದೆ.


ಕೇವಲ ದುಡಿಮೆ ಮಾಡಿ ಬದುಕಲು ಬೇಕಾದಷ್ಟು ಹಣ ಸಂಪಾದಿಸಿದರೆ ಸಾಕು, ಅದಕ್ಕೆ ಏನು ಬೇಕೋ ಅದನ್ನು ಕಲಿಯೋಣ ಎನ್ನುವ ಧೋರಣೆ ಬೇಡ. ಬದುಕು ಅದಕ್ಕಿಂತಲೂ ಮಹತ್ವ ಹೊಂದಿದೆ. ಒಳ್ಳೆಯ ಸಂಸ್ಕಾರವುಳ್ಳ ವ್ಯಕ್ತಿಯಾಗಿ, ಜೀವನದಲ್ಲಿ ಮಹತ್ತರವಾದ ಸಾಧನೆ ಮಾಡಿ ಒಳ್ಳೆಯ ಹೆಸರು ಮಾಡಿ ಬದುಕಿನಲ್ಲಿ ಸಾರ್ಥಕತೆ ಕಂಡುಕೊಳ್ಳಬೇಕು. ಹಾಗಾಗಬೇಕಾದರೆ ಮಕ್ಕಳು, ಅವರ ಪೋಷಕರು ಅದಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಕೆಲವು ಸಲಹೆಗಳು

- ನಿಮ್ಮ ಹಾಗೂ ನಿಮ್ಮ ಸಾಮರ್ಥ್ಯದ ಬಗ್ಗೆ ನಿಮಗೆ ಮೊದಲು ಅಚಲವಾದ ನಂಬಿಕೆ ಇರಬೇಕು.
- ದೊಡ್ಡ ದೊಡ್ಡ ಕನಸು ಕಾಣಿರಿ, ತಪ್ಪೇನಿಲ್ಲ. ಆದರೆ ಅದನ್ನು ನನಸು ಮಾಡುವ ನಿಟ್ಟಿನಲ್ಲಿ ಬೇಕಾಗುವ ಪೂರ್ವ ತಯಾರಿ ಮತ್ತು ಕಠಿಣ ಪರಿಶ್ರಮ ಇರಲಿ. ಆವಾಗ ನಿಮ್ಮ ಕನಸ್ಸು ನನಸಾಗುವುದರಲ್ಲಿ ಸಂದೇಹ ಇಲ್ಲ.
- ಕನಸು ನನಸಾಗುವ ಹಾದಿಯಲ್ಲಿ ಬರುವ ಅಡೆತಡೆಗಳಿಗೆ ಅಂಜದೆ, ಅಳುಕದೆ ಧೈರ್ಯದಿಂದ ಮುನ್ನುಗ್ಗುವುದನ್ನು ಕಲಿಯಿರಿ. ಯಶಸ್ಸು ಖಂಡಿತಾ ನಿಮ್ಮದಾಗುತ್ತದೆ.
- ಸಣ್ಣ ಸಣ್ಣ ಯಶಸ್ಸನ್ನೂ, ಸಾಧನೆಯನ್ನೂ ಸಂಭ್ರಮ ಪಡುವುದು ಕಲಿಯಿರಿ.
- ಹಾಗೆಯೇ ಸೋಲನ್ನೂ ಕೂಡ ಸವಾಲಾಗಿ ಸ್ವೀಕರಿಸಿ ಮುನ್ನಡೆಯುವ ಛಾತಿ ಹಾಗೂ ಧನಾತ್ಮಕ ಚಿಂತನೆಗಳನ್ನು ಬೆಳೆಸಿಕೊಳ್ಳಿ.
- ತಪ್ಪುಗಳೇ ಮಾಡದೇ ಯಶಸ್ಸು ಸಿಗುವುದಿಲ್ಲ. ನಿಮ್ಮ ತಪ್ಪುಗಳಿಂದ ಬೇಸರಿಸಿಕೊಳ್ಳಬೇಡಿ. ತಪ್ಪುಗಳಿಂದ ಕಲಿಯಿರಿ. ಮತ್ತೆ ಮರುಕಳಿಸದಂತೆ ಎಚ್ಚರ ವಹಿಸಿರಿ.
- ನಿಮ್ಮ ತಂದೆ, ತಾಯಿ, ಗುರು-ಹಿರಿಯರನ್ನು ಗೌರವದಿಂದ ಕಾಣುವುದನ್ನು ಕಲಿಯಿರಿ. ಅವರ ಬುದ್ಧಿ ಮಾತುಗಳನ್ನು ಕೇಳಿಸಿಕೊಳ್ಳಿ.
- ಅತಿಯಾದ ಮೊಬೈಲ್ ಬಳಕೆ ಒಳ್ಳೆಯದಲ್ಲ. ಮೊಬೈಲ್ ಅನ್ನು ಮಿತವಾಗಿ ಬಳಸಿ ಹಾಗೂ ಜ್ಞಾನಾರ್ಜನೆಗೆ ಅದನ್ನು ಹೆಚ್ಚು ಹೆಚ್ಚು ಬಳಸಿರಿ.
- ಶಿಕ್ಷಣದ ಜೊತೆ ಜೊತೆಯಲ್ಲೇ ಯಾವುದಾದರೂ ಕ್ರೀಡೆಗಳಲ್ಲಿ ತೊಡಗಿಸಿಕೊಳ್ಳಿ, ಸಂಗೀತ, ನೃತ್ಯ ಅಥವಾ ನಿಮಗಿಷ್ಟವಾದ ಹವ್ಯಾಸ ಬೆಳೆಸಿಕೊಳ್ಳಿ.
- ಬಿಡುವಿನ ವೇಳೆಯಲ್ಲಿ ಒಳ್ಳೆಯ ಪುಸ್ತಕ, ದಿನಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಿ. ಪ್ರಚಲಿತ ವಿದ್ಯಮಾನಗಳ ಬಗ್ಗೆ ಸ್ವಲ್ಪ ಗೊತ್ತಿರಲಿ.
- ಉದ್ಯೋಗಕ್ಕೆ ಬೇಕಾದ ನೈಪುಣ್ಯತೆ, ಜ್ಞಾನ, ಸಂವಹನ ಕೌಶಲ್ಯತೆ ಬೆಳೆಸಿಕೊಳ್ಳಿ.
- ನಮ್ಮ ಧರ್ಮ, ಆಚಾರ, ವಿಚಾರ, ಸಂಸ್ಕಾರ, ಸಂಸ್ಕೃತಿ ಬಗ್ಗೆ ತಿಳಿದುಕೊಳ್ಳಿ. ಅದನ್ನು ಉಳಿಸಿ ಬೆಳೆಸಲು ನಿಮ್ಮ ಕೊಡುಗೆ ಇರಲಿ.
- ಇನ್ನೊಬ್ಬರ ಏಳ್ಗೆ ನೋಡಿ ಅಸಹನೆ, ಮತ್ಸರ ಬೇಡ. ಬದಲಿಗೆ ಇನ್ನೊಬ್ಬರ ಸಾಧನೆಗೆ ಬೆನ್ನು ತಟ್ಟಿ ಪ್ರೋತ್ಸಾಹಿಸಿ, ಎಲ್ಲರನ್ನೂ ಪ್ರೀತಿಯಿಂದ ಕಾಣುವ ಗುಣ ಬೆಳೆಸಿಕೊಳ್ಳಿ. ತಾಳ್ಮೆ ಇರಲಿ.
- ವಿದ್ಯೆಗೆ ವಿನಯವೇ ಭೂಷಣ. ವಿದ್ಯೆಯ ಜೊತೆಯಲ್ಲೇ ವಿನಯ ಬೆಳೆಸಿಕೊಳ್ಳಿ, ಇಲ್ಲದಿದ್ದಲ್ಲಿ ನಿಮಗೆ ಎಷ್ಟೇ ವಿದ್ಯೆ ಇದ್ದರೂ ಗೌರವವಿರುವುದಿಲ್ಲ.

ಈ ಕೆಲವು ಅಂಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿದರೆ ಖಂಡಿತವಾಗಿಯೂ ಜೀವನದಲ್ಲಿ ಗುರಿ ತಲುಪಿ ಸಾಧನೆ ಮಾಡಲಿಕ್ಕಾಗುವುದಲ್ಲದೆ, ಒಳ್ಳೆಯ ವ್ಯಕ್ತಿತ್ವವುಳ್ಳ ಸಂಸ್ಕಾರವಂತ ವ್ಯಕ್ತಿಯಾಗಿ ಸಮಾಜದಲ್ಲಿ ಗೌರವ ಸಂಪಾದಿಸಿಕೊಂಡು ಸಾರ್ಥಕತೆಯ ಜೀವನ ಕಂಡುಕೊಳ್ಳಬಹುದು. ಆದರೆ ಇವೆಲ್ಲಾ ಮಕ್ಕಳಿಂದ ಮಾತ್ರ ಸಾಧ್ಯವಾಗದ ಮಾತು. ಏಕೆಂದರೆ ಮಕ್ಕಳಲ್ಲಿ ಇಷ್ಟೂ ಅರ್ಥ ಮಾಡಿಕೊಂಡು ಜೀವನದಲ್ಲಿ ಅಳವಡಿಸಿಕೊಳ್ಳುವ ಸಾಮರ್ಥ್ಯ ಆ ವಯಸ್ಸಿನಲ್ಲಿ ಸಹಜವಾಗಿ ಇರುವುದಿಲ್ಲ. ಆದ್ದರಿಂದ ಮಕ್ಕಳನ್ನು ಉತ್ತಮ ವ್ಯಕ್ತಿಯನ್ನಾಗಿ ರೂಪಿಸುವ ಜವಾಬ್ದಾರಿ ಪೋಷಕರ ಮತ್ತು ಶಿಕ್ಷಕರ ಹೆಗಲ ಮೇಲಿದೆ. ಈ ನಿಟ್ಟಿನಲ್ಲಿ ಅವರು ಸರಿಯಾದ ಸಮಯದಲ್ಲಿ ಸೂಕ್ತ ಮಾರ್ಗದರ್ಶನ ನೀಡಿ ಮಕ್ಕಳನ್ನು ಪ್ರಜ್ಞಾವಂತ ವ್ಯಕ್ತಿಯನ್ನಾಗಿ ರೂಪಿಸುವತ್ತ ಪ್ರಯತ್ನಿಸುವುದು ಅತ್ಯಗತ್ಯ.

ವಾರಭವಿಷ್ಯ



5.01.2025 ರಿಂದ 11.01.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಧನುಸ್ಸು, ಚಂದ್ರ- ಕುಂಭ, ಮೀನ-ಮೇಷ, ವೃಷಭ, ಕುಜ-ಕಟಕ, ಬುಧ-ಧನುಸ್ಸು, ಗುರು-ವೃಷಭ, ಶುಕ್ರ-ಕುಂಭ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)
ವಿದ್ಯಾರ್ಥಿಗಳಿಗೆ ಶಿಕ್ಷಣ ಕ್ಷೇತ್ರದಲ್ಲಿ ಸಫಲತೆ. ವ್ಯಾಪಾರ-ವ್ಯವಹಾರಗಳು ಚುರುಕಾಗಿ ನಡೆಯುವುದು. ಉತ್ತಮ ಚಿಂತನೆಗಳಿಂದ ಸಮಾಜದಲ್ಲಿ ಗೌರವ ಪ್ರಾಪ್ತಿ. ಎಡರು-ತೊಡರುಗಳನ್ನು ಮೀರಿ ಅಮೂಲ್ಯ ಸಂಪತ್ತನ್ನು ಗಳಿಸುವ ಸಂಭವವಿದೆ. ಸಾಹಿತ್ಯ, ಸಂಗೀತ, ಸೌಂದರ್ಯದ ಬಗ್ಗೆ ಒಲವು. ರಾಜಕಾರಣಿಗಳಿಗೆ ಕೂಟ ನೀತಿಗಳಲ್ಲಿ ಗೆಲುವು. ವಾರದ ಕಡೆಗೆ ಮರ್ಯಾದೆಗೆ ಧಕ್ಕೆ ತರುವ ಕೆಲಸಕ್ಕೆ ಕೈಹಾಕದಿರಿ.
ಶ್ರೀ ಕಾರ್ತಿಕೇಯ ಸ್ತುತಿ. ಶುಭ ಸಂಖ್ಯೆ-2

ವೃಷಭ (ಇ.ಉ.ಎ.ಓ.ವ.ವಿ.ವು.ವೆ.ವೊ)
ವಾರದ ಆದಿಗೆ ಆಪ್ತೇಷ್ಟರ ಮಿಲನ, ಅವರ ಸತ್ಕಾರಕ್ಕೆ ಧನ ವ್ಯಯ. ಜವಳಿ, ಹತ್ತಿ ವ್ಯಾಪಾರಸ್ಥರಿಗೆ ಅಧಿಕ ಲಾಭ. ಸಂದರ್ಭೋಚಿತ ಮಾತಿನಿಂದ ಕಾರ್ಯವನ್ನು ಸಾಧಿಸಿಕೊಳ್ಳುವಿರಿ. ಮಾತೃ ವಾತ್ಸಲ್ಯ ದೊರಕುವುದು. ಹಲವರಿಗೆ ಸಮುದ್ರೋಲ್ಲಂಘನ ಯೋಗವಿದೆ. ಕೃಷಿಕರಿಗೆ ಉತ್ತಮ ಫಸಲು ಹಾಗೂ ಬೆಲೆ ದೊರಕುವುದು. ಅಗ್ನಿ ಅವಘಡಗಳಿಂದ ಎಚ್ಚರವಾಗಿರಿ.
ಶ್ರೀ ರಾಜರಾಜೇಶ್ವರಿ ಅಷ್ಟಕ ಪಠಿಸಿ. ಶುಭ ಸಂಖ್ಯೆ-8

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)
ಅಗತ್ಯಕ್ಕೆ ತಕ್ಕಂತೆ ಹಣ ಹರಿದು ಬರುವುದು. ಸಾಲಗಾರರು ಮನೆ ಬಾಗಿಲಿಗೆ ಬರುವರು. ಚಂದ್ರ ಸಂಚಾರ ಚೆನ್ನಾಗಿದೆ. ಮನೋ ವಾಂಛಿತ ಕೆಲಸಗಳು ನಿಮ್ಮ ಅನುಕೂಲಕ್ಕೆ ತಕ್ಕಂತೆ ನಡೆಯುವುದು. ದಿನ ಚರ್ಯೆಯಲ್ಲಿ ಮೆಡಿಟೇಶನ್ ಅಳವಡಿಸಿಕೊಳ್ಳಿ. ಈಶ್ವರಾಜ್ಞೆಯನ್ನು ಮೀರಲಾದೀತೆ. ಧರ್ಮದಾರಿ ತೋರುತ್ತದೆ. ಕರ್ಮ ಗುರಿ ಮುಟ್ಟಿಸುತ್ತದೆ. ಆರೋಗ್ಯ ಸಮಸ್ಯೆ ಕಾಡಬಹುದು.
ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-1

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)
ವಾರದ ಆದಿಗೆ ಅನಿವಾರ್ಯವಲ್ಲದ ಕೆಲಸಗಳನ್ನು ಮುಂದೂಡಿ. ಕೇಳಿಸಿಕೊಂಡಿದ್ದಕ್ಕೆಲ್ಲ ಮಹತ್ವ ಕೊಡಬೇಡಿ. ಕುಟುಂಬದಲ್ಲಿ ಗೊಂದಲ ಉಂಟಾಗುವುದರಿಂದ ಹಿರಿಯರ ಹಿತ ನುಡಿ ಪಾಲಿಸಿ. ವಾರದ ಉತ್ತರಾರ್ಧಕ್ಕೆ ವಿವಿಧ ಮೂಲಗಳಿಂದ ಹಣ ಒದಗಿ ಕಾರ್ಯಾನುಕೂಲವಾಗುವುದು. ಹೊಸ ವಸ್ತುಗಳನ್ನು ಮನೆಗೆ ತರುವಿರಿ. ಹೊಸ ಮಿತ್ರರ ಪರಿಚಯವಾಗುವುದು. ವಿದ್ಯುತ್ ವಸ್ತುಗಳಿಂದ ಜಾಗೃತರಾಗಿರಿ.
ಶ್ರೀ ಶಿವ ಪಂಚಾಕ್ಷರಿ ಜಪಿಸಿ. ಶುಭ ಸಂಖ್ಯೆ- 7

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)
ವ್ಯಾಪಾರ ವ್ಯವಹಾರಗಳಲ್ಲಿ ಗಣನೀಯ ಪ್ರಗತಿಯನ್ನು ಕಾಣುವಿರಿ. ನಿರೀಕ್ಷಿತ ಹಣ ಕೈಸೇರುವುದು. ಮಕ್ಕಳ ವಿದ್ಯಾಭ್ಯಾಸದ ಖರ್ಚುಗಳು ಎದುರಾಗುವುದು. ಸ್ನೇಹಿತರೊಡನೆ ವ್ಯವಹಾರದ ಮಾತುಕತೆ ನಡೆದು, ಅದೃಷ್ಟ ಒಲಿದು ಬರುವುದು. ಅಸಹಾಯಕರಿಗೆ ಸಹಾಯ ಮಾಡಿ ಒಳಿತಾಗುವುದು. ದಸ್ತಾವೇಜು ಬರಹಗಾರರಿಗೆ ಉತ್ತಮ ಕಕ್ಷಿದಾರರು ದೊರೆಯುವರು. ವಾರಾಂತ್ಯಕ್ಕೆ ಖರ್ಚುಗಳು ಮಿತಿ ಮೀರುವುದು.
ಶ್ರೀಸೂರ್ಯ ನಮಸ್ಕಾರ. ಶುಭ ಸಂಖ್ಯೆ-5

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)
ವಾರದಾರಂಭಕ್ಕೆ ಕುಟುಂಬ ಸದಸ್ಯರ ಜೊತೆ ಸಮಯ ಕಳೆಯುವುದರಿಂದ ಮನೋಲ್ಲಾಸ. ನಿಮ್ಮ ಮಿತ್ರ ವೃಂದ ಬೆಳೆಯುವುದು. ಹೊಸ ಅಧಿಕಾರ ಗ್ರಹಣ ಮಾಡಲು ಸಿದ್ಧರಾಗಿರಿ. ರಿಯಲ್ ಎಸ್ಟೇಟ್‌ನವರಿಗೆ ಸ್ಥಿರ ಆಸ್ತಿ ವ್ಯವಹಾರಗಳಿಂದ ಭಾಗ್ಯದ ಬಾಗಿಲು ತೆರೆಯುವುದು. ಕಲಾವಿದರಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವ ಸಾಧ್ಯತೆ ಇದೆ. ನರ ಸೆಳೆತದಿಂದ ತೊಂದರೆ ಆದೀತು.
ಶ್ರೀಮನ್ನಾರಾಯಣ ಸ್ತುತಿ. ಶುಭ ಸಂಖ್ಯೆ-4

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)
ಯೋಚಿಸಿದ್ದೆಲ್ಲವನ್ನೂ ಮಾತನಾಡಬೇಡಿ. ಯೋಚಿಸಿ ಮಾತನಾಡಿ. ಸಂಬಂಧಗಳು ಕಹಿಯಾದೀತು. ಕೃಷಿ ಉಪಕರಣ ಮಾರಾಟಗಾರರಿಗೆ ಹೇರಳ ಧನಲಾಭವಾಗುವುದು. ರೈತರಿಗೆ ಧಾನ್ಯ ಸಂಗ್ರಹದ ಸಂಭ್ರಮ. ಲೇವಾದೇವಿ ಸಂಸ್ಥೆಗಳಿಗೆ ಆದಾಯ ದ್ವಿಗುಣವಾಗುವುದು. ವಾರಾಂತ್ಯಕ್ಕೆ ಚಂದ್ರ ದೃಷ್ಟಿಯ ಫಲವಾಗಿ ಯುವಕ-ಯುವತಿಯರಿಗೆ ಪ್ರೇಮಾಂಕುರವಾಗುವುದು.
ಶ್ರೀದೇವಿ ಉಪಾಸನೆ. ಶುಭ ಸಂಖ್ಯೆ-3

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ
ಸಪ್ತಾಹದ ಆದಿಗೆ ಶುಭ ಕಾರ್ಯಕ್ಕೆ ಪ್ರೇರಣೆ. ಮಂಗಳ ದ್ರವ್ಯಗಳು ಮನೆಗೆ ಬರುವುದು. ಆಸ್ತಿ ವಿಭಾಗ ವಿಚಾರಗಳು ಶುಭಾಂತ್ಯವಾಗುವುದು. ಆರೋಗ್ಯವು ಸುಧಾರಿಸಲಿದೆ. ಗುರು ಹಿರಿಯರಿಂದ ಅಧ್ಯಾತ್ಮ ಜ್ಞಾನ ಗಳಿಕೆ. ದುಡುಕಿನ ನಿರ್ಧಾರಕ್ಕೆ ಚತುರ್ಥ ಶನಿದೇವ ಕಾರಣ. ವಾಹನ ವ್ಯವಹಾರದಲ್ಲಿ ನಷ್ಟವನ್ನು ಅನುಭವಿಸುವಿರಿ. ಮಂಡಿ ನೋವು ಕಾಡುವುದು.
ಶ್ರೀ ಆಂಜನೇಯ ದರ್ಶನ. ಶುಭ ಸಂಖ್ಯೆ-6

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)
ಕುಟುಂಬದಲ್ಲಿ ಸಾಮರಸ್ಯದ ವಾತಾವರಣ, ಮನಸ್ಸಿಗೆ ಮುದ ನೀಡುವ ಪ್ರಸಂಗಗಳಿಂದ ವಾರಕ್ಕೆ ಸ್ವಾಗತ. ಆಸ್ತಿ ವಿಚಾರದಲ್ಲಿ ಸ್ಥಳೀಯ ಮುಖ್ಯಸ್ಥರ ಮಧ್ಯಸ್ಥಿಕೆಯಿಂದ ಅನುಕೂಲ ಫಲಿತಾಂಶ. ಉನ್ನತ ಶಿಕ್ಷಣಕ್ಕೆ ವಿದೇಶಕ್ಕೆ ತೆರಳುವ ಸಂಭವವಿದೆ. ವಾರ ಮಧ್ಯೆ ಉದರ ಸಂಬಂಧಿ ಕಾಯಿಲೆ ವೈದ್ಯರ ಭೇಟಿ, ಉದಾಸೀನ ಸಲ್ಲದು. ಸಂಸಾರ ಸಮೇತ ಪುಣ್ಯ ಕ್ಷೇತ್ರ ಸಂದರ್ಶನದಿಂದ ವಾರಕ್ಕೆ ತೆರೆ.
ಶ್ರೀರಾಘವೇಂದ್ರ ಆರಾಧನೆ. ಶುಭ ಸಂಖ್ಯೆ-9


ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)
ವಾರದ ಆದಿಗೆ ಗುರು-ಹಿರಿಯರ ಭೇಟಿ ಮಾಡಿ, ನಿಮ್ಮ ಅಭಿವೃದ್ಧಿಗೆ ಪೂರಕವಾಗುವುದು. ನಿಮ್ಮ ಸ್ವಂತ ಕೆಲಸಗಳನ್ನು ಆಜ್ಞಾಪೂರ್ವಕವಾಗಿ ಪೂರೈಸಿಕೊಳ್ಳುವಿರಿ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯುವುದು. ಹೊಸ ವ್ಯಾಪಾರ, ವ್ಯವಹಾರ ಪ್ರಾರಂಭಿಸಲು ಗುರುಬಲವಿದೆ. ಸರ್ಕಾರಿ ಕೆಲಸಗಳು ನಿಧಾನಗತಿಯಲ್ಲಿ ಸಾಗುವುದು. ಆಸ್ತಿ ಹಂಚಿಕೆ ವಿಷಯದಲ್ಲಿ ಸಹೋದರರಲ್ಲಿ ಒಮ್ಮತ ಮೂಡದು.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ-3

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)
ನಮ್ಮ ದೈನಂದಿನ ಆಗು ಹೋಗುಗಳಿಗೆ ಗ್ರಹಗಳ ಚಲನೆಯೇ ಕಾರಣ. ವಾರದ ಆದಿಗೆ ನಿಮ್ಮ ರಾಶಿಗೆ ಪ್ರವೇಶಿಸುವ ಮನೋಕಾರಕ ಚಂದ್ರ ಮೈ ಮನಗಳಲ್ಲಿ ಹೊಸ ಹುರುಪನ್ನು ನೀಡಲಿದ್ದಾನೆ. ಶ್ರದ್ಧಾವಾನ್ ಲಭತೇ ಫಲ ಎಂಬಂತೆ ನಿಮ್ಮ ನಿರಂತರ ಪರಿಶ್ರಮ ಮುಂದುವರೆಯಲಿ. ಮಾತಿನಂತೆ ನಡೆದು ಮನ್ನಣೆಗೆ ಪಾತ್ರರಾಗುವಿರಿ. ಆದಾಯಕ್ಕೆ ಕೊರತೆ ಇರದು. ಆದರೆ ದುಂದುವೆಚ್ಚಗಳನ್ನು ನಿಯಂತ್ರಿಸಿ.
ಓಂ ನಮೋ ನಾರಾಯಣ ಮಂತ್ರ ಜಪಿಸಿ. ಶುಭ ಸಂಖ್ಯೆ-2


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)
ಸಪ್ತಾಹದ ಆದಿಗೆ ಚಂದ್ರಗ್ರಹ ಪ್ರಭಾವದಿಂದ ಹೋಟೆಲ್, ಕೇಟರಿಂಗ್, ಪ್ರವಾಸೋದ್ಯಮ ವ್ಯವಹಾರಗಳಿಗೆ ಉತ್ತಮ ಧನ ಸಂಚಯವಾಗುವುದು. ಹಲವರಿಗೆ ಸಮುದ್ರೋಲ್ಲಂಘನ ಯೋಗವಿದೆ. ಮಾತೆ ಮುತ್ತು, ದುಡುಕಿ ಮಾತನಾಡದಿರಿ. ಆಹಾರ-ವಿಹಾರಗಳಲ್ಲಿ ಸಂಯಮವಿರಲಿ. ಕರುಳು ಸಂಬಂಧಿ ಕಾಯಿಲೆಗೆ ಗುರಿಯಾಗುವ ಸಾಧ್ಯತೆ ಇರುತ್ತದೆ. ಬೆಳೆದು ನಿಂತ ಮಕ್ಕಳು ಸ್ವೇಚ್ಛಾಚಾರಿಗಳಾಗುವರು.
ಶ್ರೀ ದತ್ತಗುರು ಪ್ರಾರ್ಥನೆ. ಶುಭ ಸಂಖ್ಯೆ -8

ಮಕ್ಕಳ ಚಿತ್ರಕಥೆ: 'ನೀನು ಇನ್ನೂ ಸ್ನಾನ ಮಾಡೇ ಇಲ್ವಾ...?'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ರಾಮಣ್ಣ ಪೂಜೆ ಮಾಡುವುದಕ್ಕಾಗಿ ಸಮುದ್ರ ತೀರದ ಪುಣ್ಯ ಸ್ನಾನಕ್ಕೆ ಹೋಗಿದ್ದರು. ಸೂರ್ಯೋದಯಕ್ಕೆ ಮುಂಚಿತವಾಗಿಯೇ ಪೂಜೆ ಪ್ರಾರಂಭವಾಗಬೇಕಿತ್ತು. ಪುರೋಹಿತರು ಅವರಿಗೆ ಹತ್ತಿರದಲ್ಲೇ ಇದ್ದು ಸಮುದ್ರ ಸ್ನಾನ ಮಾಡಲು ಹೇಳಿ, ಪೂಜೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು.




ಸಿದ್ಧತೆಯೇನೋ ಮುಗಿಯಿತು ಆದರೆ ಸ್ನಾನ ಮಾಡಲು ಹೋದ ರಾಮಣ್ಣ ಎಷ್ಟು ಹೊತ್ತಾದರೂ ಬರಲಿಲ್ಲ. ಇದರಿಂದ ಪುರೋಹಿತರು ಚಿಂತೆಗೀಡಾದರು.




ಸಮುದ್ರ ಸ್ನಾನಕ್ಕೆ ಹೋದ ವ್ಯಕ್ತಿ ಏನಾದರೂ ಅಪಘಾತಕ್ಕೀಡಾದರೋ...? ಎಂದು ಹೆದರಿ ಅವರೇ ಸಮುದ್ರ ದಡಕ್ಕೆ ಹುಡುಕಿಕೊಂಡು ಹೊರಟರು.



ಅಲ್ಲಿ ರಾಮಣ್ಣ ಸಮುದ್ರವನ್ನೇ ನೋಡುತ್ತಾ ಸುಮ್ಮನೆ ಕೈಕಟ್ಟಿಕೊಂಡು ನಿಂತುಬಿಟ್ಟಿದ್ದರು. ಪುರೋಹಿತರು "ನೀನು ಇನ್ನೂ ಸ್ನಾನ ಮಾಡೇ ಇಲ್ವಾ...?" ಎಂದು ಪ್ರಶ್ನಿಸಿದಾಗ ರಾಮಣ್ಣ, "ಅಲೆಗಳು ಒಂದೇ ಸಮನೆ ಬರುತ್ತಿವೆ..... ಅಲೆಗಳು ಸ್ವಲ್ಪ ನಿಂತಮೇಲೆ ಸ್ನಾನ ಮಾಡೋಣಾ.... ಎಂದು ಕಾಯುತ್ತಿದ್ದೇನೆ...!" ಎಂದರು.



ಆಗ ಪುರೋಹಿತರು, "ನಾನು ಹುಟ್ಟಿದಾಗಿನಿಂದ ಇಲ್ಲೇ ವಾಸವಾಗಿದ್ದೇನೆ..... ಇದುವರೆಗೂ ಸಮುದ್ರದ ಅಲೆಗಳು ಕಡಿಮೆಯಾಗಿರುವುದನ್ನು ಎಂದೂ ಕಂಡಿಲ್ಲಾ.... ಅಲೆ ಕಡಿಮೆಯಾದ ನಂತರವೇ ಸ್ನಾನಮಾಡುತ್ತೇನೆಂದು ನಿಂತರೆ ನೀನು ಜೀವನ ಪರ್ಯಂತ ನಿಂತೇ ಇರುತ್ತೀಯಾ...!" ಎಂದರು.



ಪುರೋಹಿತರು ತಮ್ಮ ಮಾತನ್ನು ಮುಂದುವರೆಸುತ್ತಾ, "ಸಮುದ್ರದಲ್ಲಿ ಅಲೆಗಳು, ಜೀವನದಲ್ಲಿ ಏರಿಳಿತಗಳು ಎಂದೂ ನಿಲ್ಲುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಿ. ಹೋಗಿ ಬೇಗ ಸ್ನಾನ ಮಾಡಿಕೊಂಡುಬನ್ನಿ......!" ಎಂದು ಹೇಳಿಕಳುಹಿಸಿದರು.

ನೀತಿ:- ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಬೇಕು. ಸಮಸ್ಯೆಗಳಿಗೆ ಹೆದರಿ ಓಡಿಹೋಗುವುದರಿಂದ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಸಮಸ್ಯೆಗಳು ಕರಗುವುದು ಅದನ್ನು ಎದುರಿಸಿದಾಗ ಮಾತ್ರ...! ಪಲಾಯನ ಮಾಡಿದಾಗಲ್ಲ.

7ನೇ ವರ್ಷದ ಹನುಮ ಜಯಂತಿ ಅಂಗವಾಗಿ

ಕೋಟೆಯಲ್ಲಿ ವಿಜೃಂಭಣೆಯ ಶೋಭಾಯಾತ್ರೆ




ಶೋಭಾಯಾತ್ರೆಗೆ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮೇಶ್ವರ ಸ್ವಾಮೀಜಿ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಹನುಮ ಭಕ್ತರನ್ನು ಕಾಣಬಹುದು.

ಹೆಚ್.ಡಿ.ಕೋಟೆ, ಜ.4– 7ನೇ ವರ್ಷದ ಹನುಮ ಜಯಂತಿ ಅಂಗವಾಗಿ ಪಟ್ಟಣದಲ್ಲಿ ಶೋಭಾಯಾತ್ರೆ ಸಾವಿರಾರು ಭಕ್ತರ ಜೈಕಾರಗಳೊಂದಿಗೆ ಶನಿವಾರ ವಿಜೃಂಭಣೆಯಿಂದ ನೆರವೇರಿತು.

ಹನುಮ ಜಯಂತಿ ಅಂಗವಾಗಿ ಪಟ್ಟಣದ ಆಂಜನೇಯಸ್ವಾಮಿ ದೇವಾಲಯದಲ್ಲಿ ಮುಂಜಾನೆಯಿಂದಲೇ ವಿಶೇಷ ಪೂಜೆಗಳು ನಡೆದವು. ಬಳಿಕ ಪಟ್ಟಣದ ಗದ್ದಿಗೆ ಸರ್ಕಲ್ ಬಳಿಯ ಭಂಡಾರಿ ಅಮ್ಮನವರ ದೇವಸ್ಥಾನ ಬಳಿ ಆಂಜನೇಯನ ಬೃಹತ್ ವಿಗ್ರಹಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಶೋಭಾಯಾತ್ರೆಗೆ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮೇಶ್ವರ ಸ್ವಾಮೀಜಿ ಚಾಲನೆ ನೀಡಿದರು.

ಬಳಿಕ ಮಂಗಳವಾದ್ಯ, ನಂದಿ ಕಂಬ, ವೀರಗಾಸೆ, ಚಂಡೆ, ಕಂಸಾಳೆ, ಆದಿವಾಸಿಗಳ ಕುಣಿತ, ಡಿಜೆ ಸೇರಿದಂತೆ ಹಲವು ಜಾನಪದ ಕಲಾ ತಂಡಗಳೊಂದಿಗೆ ಮೆರವಣಿಗೆ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಾಗಿ ಪಟ್ಟಣದ ಶ್ರೀವರದರಾಜಸ್ವಾಮಿ ದೇವಾಲಯದ ಬಳಿ ಸಮಾಪ್ತಿಯಾಯಿತು. ಈ ವೇಳೆ ಯುವಕರು ಜೈ ಶ್ರೀರಾಮ್ ಘೋಷಣೆ ಮೊಳಗಿಸಿದರು. ಅಲ್ಲದೇ ವಿಶೇಷವಾಗಿ ಮಹಿಳೆಯರು ದಾರಿಯುದ್ದಕ್ಕೂ ನೃತ್ಯ ಪ್ರದರ್ಶಿಸಿದರು. ದಾರಿಯುದ್ದಕ್ಕೂ ಭಕ್ತರಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು. ಮೆರವಣಿಗೆ ಬಳಿಕ ಸಾವಿರಾರು ಭಕ್ತರಿಗೆ ಅನ್ನದಾನದ ವ್ಯವಸ್ಥೆ ಮಾಡಲಾಗಿತ್ತು. ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಹನುಮ ಜಯಂತಿ ಶೋಭಾಯಾತ್ರೆ ಅಂಗವಾಗಿ ಕೋಟೆ ಪಟ್ಟಣ ಸಂಪೂರ್ಣ ಕೇಸರಿಮಯವಾಗಿತ್ತು.

ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಸೋಮೇಶ್ವರ ಸ್ವಾಮೀಜಿ, ಪರಂಪರೆಗೆ ಹೆಸರಾದ ನಮ್ಮ ಭಾರತ ದೇಶ ದೇವರ ನಾಡಾಗಿ ನಿರ್ಮಾಣವಾಗಿದ್ದು, ಇದನ್ನು ಸದೃಢಗೊಳಿಸವಲ್ಲಿ ಯುವಕರ ಪಾತ್ರ ಮುಖ್ಯವಾಗಿದೆ ಎಂದರು.

ಮೆರವಣಿಗೆಯಲ್ಲಿ ಶಾಸಕ ಅನಿಲ್, ಸಮಾಜ ಸೇವಕ ಕೆ.ಎಂ.ಕೃಷ್ಣನಾಯಕ, ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ಬಿಜೆಪಿ ತಾಲೂಕು ಅಧ್ಯಕ್ಷ ಶಂಬೇಗೌಡ, ಹನುಮ ಸೇವಾ ಸಮಿತಿ ಅಧ್ಯಕ್ಷ ಚಂದ್ರಮೌಳಿ, ಮಾಜಿ ಅಧ್ಯಕ್ಷ ಡೈರಿ ಶ್ರೀಕಾಂತ್, ಕೋಶಾಧ್ಯಕ್ಷ ಮುತ್ತುರಾಜ್, ಕಾರ್ಯದರ್ಶಿ ಬಿಡುಗಲು ರಾಜು, ಜಯಂತ್, ಪ್ರಧಾನ ಕಾರ್ಯದರ್ಶಿ ರಾಜಣ್ಣ, ನಂದೀಶ್, ಮಹೇಶ್, ಸುರೇಶ್, ಪ್ರಶಾಂತ್, ಆರ್‌ಎಸ್‌ಎಸ್ ಶಂತೋಷ್, ವಿಎಚ್‌ಪಿ ಸಂತೋಷ್, ರಾಹುಲ್, ಅಶೋಕ್, ಅಶೋಕ್ ಕೇರಳ ಸಮಾಜ, ಸುಧಾಕರ್, ರೂಪೇಶ್, ಪಂಡಿತ್ ಜೀ, ಲಿಖಿತ್, ಪೂರ್ಣೇಶ್, ಪ್ರಮೋದ್, ಮುಖಂಡರಾದ ರುದ್ರಪ್ಪ, ಮೊತ್ತ ಬಸವರಾಜಪ್ಪ, ವೆಂಕಟಸ್ವಾಮಿ, ದೊಡ್ಡ ನಾಯಕ, ಬ್ಯಾಂಕ್ ವೀರಪ್ಪ, ನಾಗಣ್ಣ, ನಟರಾಜ್, ಜೆ.ಪಿ.ಶಿವರಾಜ್, ಪ್ರಶಾಂತ, ಪ್ರಸನ್ನ, ಮನೋಜ್, ಅನಿಲ್, ರಾಕೇಶ್, ಗೋಪಾಲ ಸ್ಟುಡಿಯೋ ಪ್ರಕಾಶ್, ಮಧು ಕುಮಾರ್, ಆಸಿಫ್, ಐಡಿಯಾ ವೆಂಕಟೇಶ್, ಮಿಲ್ ನಾಗರಾಜು, ಗಿರಿಜಾ, ಸತೀಶ್, ಪಿಂಕು, ತಾರ, ವೀರೇಂದ್ರ ಅಂಗಡಿ ಸತೀಶ, ಮಣಿಕಂಠ, ಸಾವಿರಾರು ಭಕ್ತರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಗುದ್ದಲಿ ಪೂಜೆ ನೆರವೇರಿಸಿದರು.

ಬೆಟ್ಟದಪುರ, ಜ.4– ಪಿರಿಯಾಪಟ್ಟಣ ತಾಲೂಕಿನ ಮುತ್ತಿನ ಮುಳ್ಳುಸೋಗೆ ಹಾಗೂ ಆವರ್ತಿ ಗ್ರಾಮದಲ್ಲಿ ಕುಶಾಲನಗರ ಕೂಗಾಲು ಮಾರ್ಗದ 5 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಚಿವ ಕೆ.ವೆಂಕಟೇಶ್ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ತಾಲೂಕಿನ ಹಲವು ಗ್ರಾಮಗಳ ರಸ್ತೆಗಳು ಮಳೆಯಿಂದ ಹಾಳಾಗಿದ್ದು, ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳ ಗಮನ ಸೆಳೆದು ಹೆಚ್ಚಿನ ಅನುದಾನ ತಂದು ಶೀಘ್ರ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದರು.

ಆವರ್ತಿ ಗ್ರಾಪಂ ಸದಸ್ಯ ಎಂ.ಬಿ.ಶಿವಕುಮಾರ್ ಮಾತನಾಡಿ, ಸಚಿವರು ತಾಲೂಕಿಗೆ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಕಾರ್ಯ ಕೈಗೊಂಡಿದ್ದಾರೆ. ಅಲ್ಲದೇ ಕರಡಿ ಲಕ್ಕನಕೆರೆ ಭಾಗದ 150 ಕೆರೆ ತುಂಬಿಸುವ ಯೋಜನೆ ಜಾರಿಗೂ ಮುಂದಾಗಿದ್ದಾರೆ ಎಂದರು.

ಈ ವೇಳೆ ಆವರ್ತಿ ಗ್ರಾಪಂ ಅಧ್ಯಕ್ಷೆ ಶಶಿಕಲಾ, ಕೊಪ್ಪ ಗ್ರಾಪಂ ಅಧ್ಯಕ್ಷೆ ಗೀತಾ, ಕಾಂಗ್ರೆಸ್ ಮುಖಂಡರಾದ ಕೆ.ಹೊಲದಪ್ಪ, ಕಲ್ಯಾಣಪ್ಪ, ರಹಮದ್ ಜಾನ್ ಬಾಬು, ಕಾವೇರಿ, ಶೇಖರ, ಯೋಗಣ್ಣ, ಸ್ಟುಡಿಯೋ ಮಹದೇವಪ್ಪ, ರಘು, ಧರ್ಮಣ್ಣ, ನಿವೃತ್ತ ಶಿಕ್ಷಕ ಬಸವರಾಜ ನಾಯಕ್, ಧನರಾಜ್, ತಹಸೀಲ್ದಾರ್ ನಿಸರ್ಗ ಪ್ರಿಯ, ತಾಪಂ ಇಒ ಸುನೀಲ್ ಕುಮಾರ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮಮತಾ, ಜಿಪಂನ ಮಲ್ಲಿಕಾರ್ಜುನ್, ಕೃಷಿ ಇಲಾಖೆಯ ಪ್ರಸಾದ್, ಹಿಂದುಳಿದ ವರ್ಗದ ಇಲಾಖೆಯ ಕೃಷ್ಣೇಗೌಡ, ಪಿಡಬ್ಲ್ಯುಡಿ ಇಲಾಖೆಯ ಕುಮಾರ್, ಗುತ್ತಿಗೆದಾರ ದಿನೇಶ್ ಕುಮಾರ್, ಬಿಟಿಕೆ ಕೊಪ್ಪಲು ಕೃಷ್ಣೇಗೌಡ, ಪುಟ್ಟರಾಜ ಸೇರಿದಂತೆ ಇನ್ನಿತರರಿದ್ದರು.

ಚಾಲಕನ ಮೇಲೆ ಮಾರಣಾಂತಿಕ ಹಲ್ಲೆ

ನಂಜನಗೂಡು, ಜ.4– ನಗರದ ವಾಹನ ನಿಲ್ದಾಣದಲ್ಲಿ ಟೆಂಪೋ ನಿಲ್ಲಿಸಿಕೊಂಡು ಮಲಗಿದ್ದ ವಾಹನ ಚಾಲಕನ ಮೇಲೆ ದುಷ್ಕರ್ಮಿಗಳು ಮಾರಣಾಂತಿಕವಾಗಿ ಹಲ್ಲೆ ನಡೆಸಿರುವ ಘಟನೆ ಶುಕ್ರವಾರ ರಾತ್ರಿ ನಡೆದಿದೆ.

ನಗರದ ಆರ್.ಪಿ.ರಸ್ತೆ 7ನೇ ಕ್ರಾಸ್ ನಿವಾಸಿ, ಟೆಂಪೋ ಚಾಲಕ ಸುರೇಶ್ ಗಾಯಗೊಂಡವರು. ಈತ ತಾಲೂಕಿನ ನಗರ್ಲೆ ಗ್ರಾಮದ ನಿವಾಸಿ ಶಫೀಉಲ್ಲಾ ಖಾನ್ ಅವರಿಗೆ ಸೇರಿದ ಟೆಂಪೋ ಓಡಿಸಿಕೊಂಡು ಜೀವನ ನಡೆಸಿದ್ದರು ಎನ್ನಲಾಗಿದೆ. ಶುಕ್ರವಾರ ಕಾಲೇಜೊಂದರ ಪ್ರವಾಸ ಮುಗಿಸಿಕೊಂಡು ತಡರಾತ್ರಿ ನಂಜನಗೂಡಿಗೆ ಆಗಮಿಸಿ ಟೆಂಪೋ ನಿಲ್ದಾಣದಲ್ಲಿ ವಾಹನ ನಿಲ್ಲಿಸಿ ಮಾಲೀಕರಿಗೆ ಕರೆ ಮಾಡಿ ಮಾತನಾಡಿ ಮಲಗಿದ್ದರು. ಆದರೆ ಬೆಳಗ್ಗೆ ಸ್ಥಳೀಯರು ಟೆಂಪೋ ಮಾಲೀಕರಿಗೆ ಕರೆ ಮಾಡಿ ನಿಮ್ಮ ವಾಹನದ ಚಾಲಕನ ತಲೆಗೆ ಇಟ್ಟಿಗೆಯಿಂದ ಹಲ್ಲೆ ನಡೆಸಿದ್ದು ಗಂಭೀರವಾಗಿ ಗಾಯಗೊಂಡಿದ್ದಾನೆ ಎಂದು ತಿಳಿಸಿದ್ದಾರೆ.

ತಕ್ಷಣ ಸ್ಥಳಕ್ಕಾಗಮಿಸಿದ ಟಂಪೋ ಮಾಲೀಕ ಶಫೀಉಲ್ಲಾ ಖಾನ್ ಗಂಭೀರವಾಗಿ ಗಾಯಗೊಂಡು ವಾಹನದ ಹಿಂಬದಿ ಸೀಟಿನಲ್ಲಿ ಬಿದ್ದಿದ್ದ ಚಾಲಕ ಸುರೇಶ್‌ನನ್ನು ಆಸ್ಪತ್ರೆಗೆ ದಾಖಲಿಸಿದರು. ಬಳಿಕ ಚಾಲಕನ ಮೇಲೆ ತಮ್ಮದೇ ವಾಹನದ ಕ್ಲೀನರ್ ಸೂರಿ ಎಂಬಾತ ಹಲ್ಲೆ ಮಾಡಿ ಆತನ ಬಳಿಯಿದ್ದ 9500 ರೂ. ಕಸಿದು ಪರಾರಿಯಾಗಿದ್ದಾನೆ ಎಂದು ದೂರು ನೀಡಿದ್ದು, ಈ ಸಂಬಂಧ ನಂಜನಗೂಡು ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂದಾಯ ಅದಾಲತ್: ಹಲವು ಸಮಸ್ಯೆ ಇತ್ಯರ್ಥ



ತಿ.ನರಸೀಪುರದಲ್ಲಿ ಕಂದಾಯ ಅದಾಲತ್ ನಡೆಯಿತು

ತಿ.ನರಸೀಪುರ, ಜ.4– ಪಟ್ಟಣದ ತಾಲೂಕು ಕಚೇರಿ ಆವರಣದಲ್ಲಿ ಶನಿವಾರ ತಹಸೀಲ್ದಾರ್ ಸುರೇಶಾಚಾರ್ ನೇತೃತ್ವದಲ್ಲಿ ನಡೆದ ಕಂದಾಯ ಅದಾಲತ್‌ನಲ್ಲಿ ಸಾರ್ವಜನಿಕರ ಹಲವು ಸಮಸ್ಯೆಗಳನ್ನು ಸ್ಥಳದಲ್ಲೇ ಇತ್ಯರ್ಥ ಪಡಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಹಸೀಲ್ದಾರ್ ಸುರೇಶಾಚಾರ್, ಜನರು ಸರ್ಕಾರಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಒಂದೇ ವೇದಿಕೆಯಲ್ಲಿ ಇಲಾಖೆಯ ಎಲ್ಲಾ ಅಧಿಕಾರಿಗಳನ್ನು ಕ್ರೋಢಿಕರಿಸಿ ಸಾರ್ವಜನಿಕರ ಕೆಲಸ ಮಾಡಲು ಕಂದಾಯ ಅದಾಲತ್ ಹಮ್ಮಿಕೊಳ್ಳಲಾಗಿದೆ. ಹಾಗಾಗಿ ಇಲಾಖೆಗೆ ಸಂಬಂಧಿಸಿದ ಪಹಣಿ ತಿದ್ದುಪಡಿ, ಪೋಡಿ, ದುರಸ್ತಿ, ಪಿಂಚಣಿ ಯೋಜನೆಗಳು ಸೇರಿದಂತೆ ಹಲವು ಕೆಲಸಗಳನ್ನು ಮಾಡಲು ನಿರ್ಧರಿಸಲಾಗಿದೆ ಎಂದರು.

ನ್ಯಾಯಾಲಯದಲ್ಲಿ ಯಾವುದೇ ತಕರಾರಿಲ್ಲದ ಪ್ರಕರಣಗಳನ್ನು ಸ್ಥಳದಲ್ಲೇ ಇತ್ಯರ್ಥಪಡಿಸಲು ನಿರ್ಧರಿಸಲಾಗಿದೆ. ಸಾರ್ವಜನಿಕರು ಕಾರ್ಯಕ್ರಮವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಕಸಬಾ 85, ತಲಕಾಡು 66, ಬನ್ನೂರು 106, ಮೂಗೂರು 71, ಸೋಸಲೆ 29 ಸೇರಿದಂತೆ ಒಟ್ಟು 357 ಪೌತಿ ಖಾತೆ ಅರ್ಜಿಗಳು, ಕಸಬಾ 11, ತಲಕಾಡು 3, ಬನ್ನೂರು 31, ಮೂಗೂರು 7 ಮತ್ತು ಸೋಸಲೆ 9 ಸೇರಿದಂತೆ 61 ಆರ್‌ಟಿಸಿ ತಿದ್ದುಪಡಿ ಅರ್ಜಿಗಳು ಮತ್ತು ಕಸಬಾ 131, ತಲಕಾಡು 102, ಬನ್ನೂರು 230, ಮೂಗೂರು 149, ಸೋಸಲೆ 17 ಅರ್ಜಿಗಳ ಸೇರಿದಂತೆ 685 ಒಟ್ಟು ಆರ್‌ಟಿಸಿ ದುರಸ್ತಿ ಪ್ರಕರಣಗಳನ್ನು ಇತ್ಯರ್ಥಪಡಿಸಿ 1399 ಫಲಾನುಭವಿಗಳ ಸಮಸ್ಯೆ ಪರಿಹರಿಸಲಾಯಿತು. ಇನ್ನು ಕೆಲವು ಪ್ರಕರಣಗಳಿಗೆ ಸ್ಥಳದಲ್ಲೇ ಆದೇಶ ನೀಡಲಾಯಿತು.

ಗ್ರೇಡ್–2 ತಹಸೀಲ್ದಾರ್ ರಾಜಕಾಂತ್, ಆರ್‌ಆರ್‌ಟಿ ಶಿರಸ್ತೇದಾರ್ ಮಂಜುಳಾ, ತಲಕಾಡು ಉಪ ತಹಸೀಲ್ದಾರ್ ಈ.ಕುಮಾರ್, ಲಕ್ಷ್ಮೀ, ಶೋಭಾ, ಕಸಬಾ ಕಂದಾಯ ನಿರೀಕ್ಷಕರಾದ ಮಹೇಂದ್ರ, ನಾಗೇಂದ್ರ, ಸಿದ್ದರಾಜು, ಬಸವರಾಜು, ಗ್ರಾಮಲೆಕ್ಕಿಗ ಸಂಘದ ಅಧ್ಯಕ್ಷ ಎಂ.ಎಸ್.ಆನಂದ್, ಉಪಾಧ್ಯಕ್ಷ ಶ್ರೀನಿವಾಸಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವರಾಮು, ಸೋಮಶೇಖರ್, ಸಂತೋಷ್, ಪ್ರಮೋದ್, ಸುನೀಲ್, ಯಶವಂತ, ಪದ್ಮ, ಚೈತ್ರ, ಲಕ್ಷ್ಮಿ, ಜಬೀನಾ ಇತರರಿದ್ದರು.

ಟೈಲರ್ ಸಂಘದ ಕ್ಯಾಲೆಂಡರ್ ಬಿಡುಗಡೆ



ಹುಣಸೂರು, ಜ.4– ವೃತ್ತಿಪರರು ಸಂಘಟಿತರಾದಾಗ ಮಾತ್ರ ಸಂಘಗಳು ಅಭಿವೃದ್ಧಿ ಕಾಣಲು ಸಾಧ್ಯ ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಟೈಲರ್ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ವೃತ್ತಿ ಯಾವುದೇ ಇರಲಿ ಕಾರ್ಮಿಕರು ಒಗ್ಗಟ್ಟು ಪ್ರದರ್ಶನ ಮಾಡಿದಾಗ ಮಾತ್ರ ಸಂಘಟನೆ ಬಲಗೊಳ್ಳಲಿದೆ ಎಂದರು.

ಕಾರ್ಯಕ್ರಮದಲ್ಲಿ ನಗರಸಭಾಧ್ಯಕ್ಷ ಶರವಣ, ಸದಸ್ಯರಾದ ಕೃಷ್ಣರಾಜಗುಪ್ತ, ಶ್ರೀನಾಥ್, ತಾಲೂಕು ಟೈಲರ್ ಸಂಘದ ಅಧ್ಯಕ್ಷ ಲೋಕೇಶ್, ಪ್ರಧಾನ ಕಾರ್ಯದರ್ಶಿ ಶಾಂತಮೂರ್ತಿ, ಗೌರವ ಅಧ್ಯಕ್ಷ ದಾನೇಗೌಡ, ಉಪಾಧ್ಯಕ್ಷ ನಾಗೇಂದ್ರ, ಖಜಾಂಚಿ ಮಹದೇವ್ ರಾವ್, ಕಾರ್ಯದರ್ಶಿ ಸ್ವಾಮಿ, ಕಾರ್ಯಕಾರಿ ಸಮಿತಿ ಸದಸ್ಯರಾದ ನವೀನ್, ಅನಂತ ಪದ್ಮನಾಭ, ಬಿ.ಎಸ್.ಶಿವಕುಮಾರ್, ಹೆಚ್.ಎಂ.ರಾಘವೇಂದ್ರ, ವೆಂಕಟೇಶ, ಹೆಚ್.ವಿ.ದಿನೇಶ್ ಇದ್ದರು.

ಮಾರುತಿ ಓಮಿನಿ, ಎಕ್ಸ್‌ಯುವಿ ನಡುವೆ ಡಿಕ್ಕಿ

ಹುಣಸೂರು ಬಳಿ 9 ಮಂದಿಗೆ ತೀವ್ರ ಗಾಯ



ಹುಣಸೂರು, ಜ.4– ಮಾರುತಿ ಓಮಿನಿ ಮತ್ತು ಎಕ್ಸ್‌ಯುವಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ 9 ಮಂದಿ ತೀವ್ರವಾಗಿ ಗಾಯಗೊಂಡಿರುವ ಘಟನೆ ಶನಿವಾರ ಸಂಜೆ ರಾಷ್ಟ್ರೀಯ ಹೆದ್ದಾರಿ 275ರ ತಾಲೂಕಿನ ಕಾಡನಕೊಪ್ಪಲು–ಸೋಮನಹಳ್ಳಿ ನಡುವೆ ನಡೆದಿದೆ.

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕಿನ ಜೆ.ಬಿ.ಹಳ್ಳಿ ಗ್ರಾಮದ ನಿವಾಸಿಗಳಾದ ಫಾರುಖ್, ಉಲ್ಲೇಶ್, ಚಂದ್ರು, ನರಸಿಂಹ, ಖಾದರ್ ಪಾಷ, ನಾಗರಾಜು, ತಿಮ್ಮಪ್ಪ ಜಿಲನ್ ಪಾಷ ಸೇರಿದಂತೆ 9 ಮಂದಿ ಘಟನೆಯಲ್ಲಿ ಗಾಯಗೊಂಡಿದ್ದಾರೆ.

ಚಿತ್ರದುರ್ಗ ಮೂಲದ 9 ಮಂದಿ ಯುವಕರು ಮಾರುತಿ ಓಮಿನಿ (ಕೆಎ.47, ಎಂ.4798)ಯಲ್ಲಿ ಕೊಡಗಿನ ಪ್ರವಾಸಿ ತಾಣ ವೀಕ್ಷಸಲು ತೆರಳುತ್ತಿದ್ದರು. ಈ ವೇಳೆ ಮಡಿಕೇರಿಯಿಂದ ಮೈಸೂರಿಗೆ ಎಕ್ಸ್‌ಯುವಿ(ಕೆಎ.51, ಎಂವಿ.0781)ನಲ್ಲಿ ದಂಪತಿಗಳಿಬ್ಬರು ತೆರಳುತ್ತಿದ್ದರು. ಈ ವೇಳೆ ಕಾಡನಕೊಪ್ಪಲು ಮತ್ತು ಸೋಮನಹಳ್ಳಿ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ್ದು, ಮಾರುತಿ ಓಮಿನಿಯಲ್ಲಿದ್ದ 9 ಮಂದಿ ತೀವ್ರವಾಗಿ ಗಾಯಗೊಂಡು ಮೈಸೂರಿನ ಅಪೋಲೋ, ಡಿಆರ್‌ಎಂ ಹಾಗೂ ಹುಣಸೂರಿನ ಕಾವೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನು ಎಕ್‌ಯುವಿ ಕಾರಿನಲ್ಲಿದ್ದ ದಂಪತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ಸಂಬಂಧ ಹುಣಸೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪೊಲೀಸರು ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವಕ್ಕೆ ಚಾಲನೆ



ಮೂಗೂರು, ಜ.4– ಇಲ್ಲಿನ ಶ್ರೀತ್ರಿಪುರ ಸುಂದರಿ ಅಮ್ಮನವರ ಜಾತ್ರಾ ಮಹೋತ್ಸವಕ್ಕೆ ಹಸ್ತಾನ ಅಂಕುರಾರ್ಪಣೆ ಮೂಲಕ ಗ್ರಾಮಸ್ಥರ ಸಮ್ಮುಖದಲ್ಲಿ ವಿದ್ಯುಕ್ತವಾಗಿ ಶುಕ್ರವಾರ ಸಂಜೆ ಚಾಲನೆ ನೀಡಲಾಯಿತು.

ಸಮೀಪದ ಹೊಸಹಳ್ಳಿ ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಚಿಗುರು ಕುಡಿಯುವ ಕ್ಷೇತ್ರದ ಅಮ್ಮನವರ ದೇಗುಲದಲ್ಲಿ ಕಂಕಣಧಾರಿ ಅರ್ಚಕರು ವಿಶೇಷ ಪೂಜೆ ಸಲ್ಲಿಸಿ, ನಂತರ ಮೂಗೂರು ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಗ್ರಾಮದ ಎಲ್ಲಾ ಸಮುದಾಯದ ಮುಖಂಡರು ಛತ್ರಿ, ಚಾಮರ, ಮಂಗಳವಾದ್ಯಗಳೊಂದಿಗೆ ಆಗಮಿಸಿ ಅಮ್ಮ ನವರ ಹಸ್ತಾನ ಅಂಕುರಾರ್ಪಣೆಗೆ ಪೂಜೆ ಸಲ್ಲಿಸುವ ಮೂಲಕ ಅದ್ದೂರಿ ಸ್ವಾಗತ ಕೋರಿದರು.

ಗ್ರಾಮದ ಮುಖ್ಯ ರಸ್ತೆ ಮೂಲಕ ದೇವಾಲಯಕ್ಕೆ ಹೋಗುವ ಮಾರ್ಗದ ಉದ್ದಕ್ಕೂ ತಳಿರು ತೋರಣ, ಬಣ್ಣ ಬಣ್ಣದ ರಂಗೋಲಿ ಚಿತ್ತಾರದಿಂದ ಸಿಂಗರಿಸಲಾಗಿತ್ತು. ಇದೇ ವೇಳೆ ಪ್ರತಿ ವರ್ಷದಂತೆ ಈ ಬಾರಿಯೂ ಪಟಾಕಿ ಸಿಡಿಸಿ ಗ್ರಾಮಸ್ಥರು ಸಂಭ್ರಮಿಸಿದರು. ದೇವಾಲಯದ ಆವರಣದಲ್ಲಿ ಪ್ರಸಾದ ವಿತರಿಸಲಾಯಿತು. ಅರ್ಚಕ ಮನೆತನದವರು ಕಂಕಣಧಾರಿ ಅರ್ಚಕರಿಗೆ ದೇಗುಲದ ಬಳಿ ಪಾದಪೂಜೆ ನೆರವೇರಿಸಿದರು. ಬಳಿಕ ದೇವಾಲಯದಲ್ಲಿ ಅಮ್ಮನವರಿಗೆ ಮಹಾಮಂಗಳಾರತಿ ಮಾಡಲಾಯಿತು. ಈ ವೇಳೆ ಗ್ರಾಮದ ಎಲ್ಲಾ ಸಮುದಾಯದ ಮುಖಂಡರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಜಿ.ಬಿ.ಸರಗೂರು ಗ್ರಾಪಂ ಅಧ್ಯಕ್ಷರಿಗೆ ಸನ್ಮಾನ



ಈರೇಗೌಡ ಅವರನ್ನು ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅಭಿನಂದಿಸಿದರು.

ಹೆಚ್.ಡಿ.ಕೋಟೆ, ಜ.4– ತಾಲೂಕಿನ ಜಿ.ಬಿ.ಸರಗೂರು ಗ್ರಾಪಂ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಈರೇಗೌಡರನ್ನು ತಮ್ಮ ನಿವಾಸದಲ್ಲಿ ಮಾಜಿ ಶಾಸಕ ಬೀಚನಹಳ್ಳಿ ಚಿಕ್ಕಣ್ಣ ಅಭಿನಂದಿಸಿದರು.

ಮಾಜಿ ಶಾಸಕ ಚಿಕ್ಕಣ್ಣ ಮಾತನಾಡಿ, ಪಕ್ಷದ ಮುಖಂಡರು, ಗ್ರಾಮಸ್ಥರು ಮತ್ತು ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗ್ರಾಪಂ ವ್ಯಾಪ್ತಿಯ ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಶ್ರಮಿಸುವಂತೆ ಶುಭ ಹಾರೈಸಿದರು.

ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷರಾದ ಮಮತಾ ರಾಮೇಗೌಡ, ಶಿವರಾಜ್, ವಿಜಯಕುಮಾರ್, ಸುಧಾ ಬಸವರಾಜು, ಉಪಾಧ್ಯಕ್ಷೆ ವೆಂಕಟಮ್ಮ, ಸದಸ್ಯರಾದ ತಿಮ್ಮಾಚಾರ್, ಗೌರಮ್ಮ, ಈರಾಜ್, ಕುಮಾರ್, ಮುಖಂಡರಾದ ರಾಮೇಗೌಡ, ಕೆಂಡಗಣ್ಣೇಗೌಡ, ಮಹದೇವು, ಮಹೇಶ್, ಭೈರೇಗೌಡ, ಸುರೇಂದ್ರ ಡಿ.ಗೌಡ, ನಾರಾಯಣಗೌಡ, ಚಲುವ, ಜಿಯಾರ ನಾಗನಾಯಕ ಇತರರಿದ್ದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕ್ಯಾಲೆಂಡರ್ ಬಿಡುಗಡೆ



ತಿ.ನರಸೀಪುರದಲ್ಲಿ ನಡೆದ ಸಾವಿತ್ರಿ ಬಾಪುಲೆ ಜಯಂತಿಯಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಬಿಇಒ ಶಿವಮೂರ್ತಿ ಬಿಡುಗಡೆಗೊಳಿಸಿದರು. ಈ ವೇಳೆ ತಾಯೂರು ಸುಬ್ಬಣ್ಣ, ನಾಗೇಶ್, ಪುಟ್ಟಸ್ವಾಮಿ, ಕುಪ್ಯ ಪುಟ್ಟಸ್ವಾಮಿ, ಶಿವಶಂಕರ ಮೂರ್ತಿ, ನಾಗೇಂದ್ರ ವಿಶಾಲಾಕ್ಷಿ, ಗೌರಮ್ಮ, ಗೌರಮ್ಮಣ್ಣಿ, ಸುಬ್ರಹ್ಮಣ್ಯ, ಮಲ್ಲಣ್ಣ, ಸೋಮಶೇಖರ್, ಗಜೇಂದ್ರ, ರೇವಣ್ಣ, ಸಿದ್ಧಮಲ್ಲಪ್ಪ, ಶಿವಣ್ಣ, ಮಹದೇವಸ್ವಾಮಿ, ಶ್ರೀಧರ, ನಾಗರಾಜು, ಪ್ರಸನ್ನ ಕುಮಾರ್, ಮಹದೇವಸ್ವಾಮಿ ಇತರರಿದ್ದರು.

ನೇರಳಕುಪ್ಪೆಯಲ್ಲಿ ಸಾವಿತ್ರಿಬಾಯಿ ಫುಲೆ ಜಯಂತಿ



ನೇರಳಕುಪ್ಪೆ ಶಾಲೆಯಲ್ಲಿ ಸಾವಿತ್ರಿಬಾಯಿ ಫುಲೆ ಜಯಂತಿ ನಡೆಯಿತು.

ಹನಗೋಡು, ಜ.4– ಪುರುಷ ಪ್ರಧಾನವಾಗಿದ್ದ ಸಮಾಜದಲ್ಲಿ ಮಹಿಳೆಯರಿಗೆ ಶಿಕ್ಷಣ ಕಡೆಗಾಣಿಸುತ್ತಿದ್ದನ್ನು ಮನಗಂಡು ಮಹಿಳೆಯರಿಗೆ ಶಾಲೆ ತೆರೆದು ಅಕ್ಷರಾಭ್ಯಾಸ ಮಾಡಿಸಿದ ಸಾವಿತ್ರಿ ಬಾಯಿಫುಲೆ ಅವರ ಇತಿಹಾಸ ಅಜರಾಮರ ಎಂದು ಮುಖ್ಯ ಶಿಕ್ಷಕ ಕುಮಾರಸ್ವಾಮಿ ತಿಳಿಸಿದರು.

ಇಲ್ಲಿನ ನೇರಳಕುಪ್ಪೆ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ಸಾವಿತ್ರಿಬಾಯಿ ಫುಲೆ ಜಯಂತಿಯಲ್ಲಿ ಮಾತನಾಡಿದ ಅವರು, ಮಹಿಳೆಯರು ಅಡುಗೆ ಮನೆಗೆ ಮಾತ್ರ ಸೀಮಿತಗೊಳಿಸಿದ್ದ ಕಾಲಘಟ್ಟದಲ್ಲಿ ಇಡೀ ಜಗತ್ತು ತಿರುಗಿ ನೋಡುವಂತೆ ಮಾಡಿ ಮಹಿಳೆಯರಿಗೆ ಅಕ್ಷರಾಭ್ಯಾಸ ಮಾಡಿಸುವ ಮೂಲಕ ಸಾಧನೆ ಮಾಡಿದ ಸಾವಿತ್ರಿಬಾಯಿ ಫುಲೆಯವರ ಜೀವನ ಚರಿತ್ರೆ, ಆದರ್ಶ, ನಡೆದು ಬಂದ ದಾರಿ ಎಲ್ಲವೂ ಇಂದಿನ ಮಕ್ಕಳು ತಿಳಿದುಕೊಳ್ಳಬೇಕಾಗಿದೆ ಎಂದು ತಿಳಿಸಿದರು.

ಅಕ್ಷರದ ಸವಿ ನೀಡಿದ ಫುಲೆ ಎಲ್ಲರಿಗೂ ಆದರ್ಶವಾಗಿದ್ದಾರೆ. ಅವರು ತೋರಿದ ಮಾರ್ಗದಲ್ಲಿ ನಾವುಗಳು ನಡೆಯಬೇಕಿದೆ ಎಂದರು. ಕಾರ್ಯಕ್ರಮದಲ್ಲಿ ಸಹಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ತೋಟಗಾರಿಕಾ ಇಲಾಖೆಯಿಂದಲೇ ಗೊಬ್ಬರ ಎತ್ತುವಳಿ: ತಹಸೀಲ್ದಾರ್



ತಹಸೀಲ್ದಾರ್ ನೇತೃತ್ವದಲ್ಲಿ ಹರಾಜು ಪ್ರಕ್ರಿಯೆ ನಡೆಯಿತು.

ಚುಂಚನಕಟ್ಟೆ, ಜ.4– ತೋಟಗಾರಿಕೆ ಇಲಾಖೆಯಿಂದಲೇ ಗೊಬ್ಬರ ಎತ್ತುವಳಿ ಮಾಡಲಾಗುವುದು ಎಂದು ಸಾಲಿಗ್ರಾಮ ತಹಸೀಲ್ದಾರ್ ನರಗುಂದ ತಿಳಿಸಿದರು.

ಚುಂಚನಕಟ್ಟೆ ದನಗಳ ಜಾತ್ರೆಯಲ್ಲಿ ಸಂಗ್ರಹವಾಗುವ ಗೊಬ್ಬರ ಹರಾಜು ಈ ಹಿಂದೆ ಕಡಿಮೆ ಬಿಡ್ ಆದ ಕಾರಣ ರದ್ದಾಗಿತ್ತು. ಹೀಗಾಗಿ ಮರು ಹರಾಜು ದೇವಾಲಯದ ಆವರಣದಲ್ಲಿ ತಹಸೀಲ್ದಾರ್ ನೇತೃತ್ವದಲ್ಲಿ ನಡೆಯಿತು.

ದನಗಳ ಜಾತ್ರಾ ಮಾಳವನ್ನು 6 ವಿಭಾಗಗಳಲ್ಲಿ ಹರಾಜು ಹಾಕಲಾಗಿದ್ದು, ಮೊದಲನೇ ವಿಭಾಗ ಪ್ರವಾಸಿ ಮಂದಿರ 1900 ರೂ., 2ನೇ ವಿಭಾಗ ಕೊನ್ನಯ್ಯನ ಹಳ್ಳ 30,100ರೂ., 3ನೇ ವಿಭಾಗ ಮಂಟಪದ ಬೋರೆ 17,000ರೂ., 4ನೇ ವಿಭಾಗ ಉಳ್ಳಂಬರಿ ಕಂಡು 3200 ರೂ., 5ನೇ ವಿಭಾಗ ಕರಿಕಲ್ಲು ಮಂಟಪ 16,500 ರೂ., 6ನೇ ವಿಭಾಗ ದೊಡ್ಡ ಮಾಳ 3,100 ರೂ.ಗೆ ಬಿಡ್ ಆಯಿತು.

ತಹಸೀಲ್ದಾರ್ ನರಗುಂದ ಮಾತನಾಡಿ, 1, 2 ಮತ್ತು 3ನೇ ವಿಭಾಗಳನ್ನು ಬಿಡ್ ಆಗಿರುವವರಿಗೆ ನೀಡಲಾಗುವುದು. ಆದರೆ ಅತೀ ಕಡಿಮೆ ಮೊತ್ತಕ್ಕೆ ಬಿಡ್ ಆಗಿರುವ 4, 5, 6ನೇ ವಿಭಾಗವನ್ನು ತೋಟಗಾರಿಕೆ ಇಲಾಖೆಯವರಿಗೆ ನೀಡಬೇಕೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದು, ಈ ಬಾರಿಯ ಗೊಬ್ಬರ ಹರಾಜು ಪ್ರಕ್ರಿಯೆ ಮುಗಿದಿದೆ ಎಂದು ಮಾಹಿತಿ ನೀಡಿದರು.

ಈ ವೇಳೆ ದೇವಾಲಯದ ಇಒ ರಘು, ಪಾರುಪತ್ತೇದಾರ ಯತಿರಾಜ್, ಉಪ ತಹಸೀಲ್ದಾರ್ ಶರತ್ ಕುಮಾರ್, ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಸಿಬ್ಬಂದಿಗಳಾದ ರಾಕೇಶ್, ನವ್ಯ ಇತರರಿದ್ದರು.

ಮಿನಿ ವಿಧಾನಸೌಧ ನಿರ್ಮಾಣಕ್ಕೆ 8.60 ಕೋಟಿ ಬಿಡುಗಡೆ

ದುಂಡು ಮೇಜಿನ ಸಭೆಯಲ್ಲಿ ಶಾಸಕ ಅನಿಲ್ ಮಾಹಿತಿ



ಸರಗೂರಲ್ಲಿ ನಡೆದ ಸಭೆಯಲ್ಲಿ ಶಾಸಕ ಅನಿಲ್ ಮಾತನಾಡಿದರು.

ಸರಗೂರು, ಜ.4– ಇಲ್ಲಿನ ಬಿಡುಗಲು ಗ್ರಾಮದ ಸರ್ವೆ ನಂ.3ರಲ್ಲಿರುವ 2.18 ಎಕರೆ ಜಾಗದಲ್ಲಿ ಮಿನಿ ವಿಧಾನಸೌಧ ನಿರ್ಮಾಣವಾಗಲಿದ್ದು, ಸರ್ಕಾರದಿಂದ 8.60 ಕೋಟಿ ರೂ. ಬಿಡುಗಡೆಯಾಗಿದೆ ಎಂದು ಶಾಸಕ ಅನಿಲ್ ತಿಳಿಸಿದರು.

ಪಟ್ಟಣದ ಶಿವರಾತ್ರೀಶ್ವರ ಶಿವಾನುಭವ ಮಂದಿರದಲ್ಲಿ ಸರಗೂರು ತಾಲೂಕು ಸರ್ವತೋಮುಖ ಅಭಿವೃದ್ಧಿ ಹೋರಾಟ ಸಮಿತಿ ಆಯೋಜಿಸಿದ್ದ ದುಂಡು ಮೇಜಿನ ಸಭೆಯಲ್ಲಿ ಮಾತನಾಡಿದ ಅವರು, ಬಿದರಹಳ್ಳಿ ಗ್ರಾಮದ ಸರ್ವೆ ನಂ.60/2 ಮತ್ತು 60/3 ರಲ್ಲಿರುವ 2 ಎಕರೆ ಜಮೀನಿನಲ್ಲಿ ಸರ್ಕಾರಿ ಆಸ್ಪತ್ರೆ, ಹಂಚೀಪುರ ಗ್ರಾಮದ ಸರ್ವೆ ನಂ.8ರಲ್ಲಿರುವ 2 ಎಕರೆ ಜಾಗದಲ್ಲಿ ಅಗ್ನಿಶಾಮಕ ಠಾಣೆ, ಸರ್ವೆ ನಂ.110 ಮತ್ತು 114ರಲ್ಲಿ ತಾಲೂಕು ನ್ಯಾಯಾಲಯ ಮತ್ತು ನ್ಯಾಯಾಧೀಶರ ವಸತಿ ಕಟ್ಟಡಗಳು ನಿರ್ಮಾಣವಾಗಲಿದೆ ಎಂದರು.

ಮಿನಿ ವಿಧಾನಸೌಧ ಕಟ್ಟಡ ಪ್ರಾರಂಭವಾಗಿ ಮುಗಿಯುವವರೆಗೆ ತೋಟಗಾರಿಕೆ, ಆಹಾರ, ಸರ್ವೆ ಸೇರಿದಂತೆ ಇನ್ನಿತರ ಇಲಾಖೆಗಳು ಹೆಚ್.ಡಿ.ಕೋಟೆಯಿಂದ ಸರಗೂರಿಗೆ ಸ್ಥಳಾಂತರಿಸುವಂತೆ ಸಭೆಯಲ್ಲಿ ಬಂದ ಮನವಿಗೆ ಉತ್ತರಿಸಿದ ಶಾಸಕರು ಸರಗೂರಲ್ಲಿ ಜಾಗದ ಅಭಾವವಿದೆ ಎಂದು ತಿಳಿಸಿದರು.

ಸಮಿತಿ ಅಧ್ಯಕ್ಷ ನಾಗೇಂದ್ರ ಮಾತನಾಡಿ, ನುಗು ಜಲಾಶಯಕ್ಕೆ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರ ಕಚೇರಿ ಮತ್ತು ಇತರೆ ಸಿಬ್ಬಂದಿ ಕಚೇರಿಯನ್ನು ಹುಲ್ಲಳ್ಳಿಯಿಂದ ನುಗು ಜಲಾಶಯದ ಬಳಿಗೆ ಸ್ಥಳಾಂತರಿಸಬೇಕು. ಪ್ರವಾಸೋದ್ಯಮ ಅಭಿವೃದ್ಧಿಗಾಗಿ ನುಗು ಜಲಾಶಯ ಉದ್ಯಾನವನ ನಿರ್ಮಾಣ, ನುಗು ಸಫಾರಿ ಹಾಗೂ ಜಲಾಶಯದ ಹಿನ್ನೀರಿನಲ್ಲಿ ಬೋಟಿಂಗ್ ಆರಂಭಿಸಬೇಕು. ಸರಗೂರು ತಾಲೂಕಿನಲ್ಲಿ ಕೌಶಲ್ಯಾಭಿವೃದ್ಧಿ ಕೈಗೊಳ್ಳಲು ಐಟಿಐ ಕಾಲೇಜು ನಿರ್ಮಾಣವಾಗಬೇಕು. ಕುರ್ಣೆಗಾಲ ಕಾಡಬೇಗೂರು ಕಾಡಂಚಿನಿಂದ ಕೇರಳ ರಾಜ್ಯಕ್ಕೆ ನೂತನ ರಸ್ತೆ ನಿರ್ಮಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಡಿ.ಎಂ.ನಂಜುಂಡಪ್ಪ ವರದಿಯಂತೆ ತಾಲೂಕು ಅತಿ ಹಿಂದುಳಿದಿದ್ದು ಆರ್ಥಿಕ ಪುನಶ್ಚೇತನ, ಉದ್ಯೋಗ ಸೃಷ್ಟಿ, ಕುಡಿಯುವ ನೀರು ಪೂರೈಕೆ, ಶಿಕ್ಷಣ, ಕೆರೆಗಳ ಸಂರಕ್ಷಣೆ, ಗ್ರಾಮಾಂತರ ರಸ್ತೆಗಳ ಅಭಿವೃದ್ಧಿ ಹಾಗೂ ಸರಗೂರು ತಾಲೂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ 2025–26ನೇ ಸಾಲಿನ ಬಜೆಟ್‌ನಲ್ಲಿ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಹಕ್ಕೋತ್ತಾಯ ಮಂಡಿಸಿದರು.

ಸಭೆಯಲ್ಲಿ ಸರಗೂರು ವರ್ತಕರ ಸಂಘ, ದಸಂಸ, ರೈತ ಸಂಘ, ಮಾನವ ಹಕ್ಕುಗಳ ಪದಾಧಿಕಾರಿಗಳು, ರೈತ ಮುಖಂಡರು ಹಾಗೂ ಇನ್ನಿತರರು ಮಾತನಾಡಿದರು. ತಹಸೀಲ್ದಾರ್ ಮೋಹನಕುಮಾರಿ, ಸಮಿತಿ ಪ್ರಧಾನ ಕಾರ್ಯದರ್ಶಿ ಮಹೇಶ್, ಉಪಾಧ್ಯಕ್ಷ ರವಿ, ಶಿವಣ್ಣ, ಬ್ರಹ್ಮದೇವ್, ಖಜಾಂಚಿ ನಟರಾಜು, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ಶಿವಕುಮಾರ್, ಸದಸ್ಯರಾದ ವಿನಯ್, ನೂರಾಳನಾಯಕ, ವಿನಾಯಕ ಪ್ರಸಾದ್, ಕೃಷ್ಣ, ಮಂಜೇಗೌಡ, ನಂದನ್ ಕುಮಾರ್, ತಾಪಂ ಮಾಜಿ ಅಧ್ಯಕ್ಷ ಗಿರೀಶ್, ಬಸವ ಬಳಗದ ಅಧ್ಯಕ್ಷ ಗಣಪತಿ, ಮುಖಂಡರಾದ ಶಂಭುಲಿಂಗ ನಾಯಕ, ಭೀಮರಾಜು, ಶಿವರಾಜು, ಬಸವಣ್ಣ, ರೈತ ಸಂಘದ ಅಧ್ಯಕ್ಷ ಚೆನ್ನನಾಯಕ, ಮಹದೇವನಾಯಕ, ಶ್ರೀನಿವಾಸ್, ಗೋವಿಂದರಾಜು, ಸಣ್ಣಸ್ವಾಮಿ, ವರ್ತಕರ ಸಂಘದ ಅಧ್ಯಕ್ಷ ಪ್ರಸಾದ್, ಮಾಜಿ ಅಧ್ಯಕ್ಷ ಶ್ರೀನಿವಾಸ್, ರಾಮು, ಪುಟ್ಟಣ್ಣ, ಎಸ್‌ಐ ನಂದೀಶ್ ಕುಮಾರ್ ಸೇರಿದಂತೆ ಇನ್ನಿತರರಿದ್ದರು.

ಲಕ್ಷ್ಮಮ್ಮ ನಿಧನ



ಹುಣಸೂರು, ಜ.4– ತಾಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಕೆ.ಪಿ.ಕೃಷ್ಣಚಾರ್ ಅವರ ಸಹೋದರಿ, ಜಲಸಂಪನ್ಮೂಲ ಇಲಾಖೆ ನಿವೃತ್ತ ನೌಕರರಾದ ಲಕ್ಷ್ಮಮ್ಮ(61) ಶುಕ್ರವಾರ ರಾತ್ರಿ ನಿಧನ ರಾದರು. ಮೃತರು ಪುತ್ರ, ಸೊಸೆ ಸೇರಿದಂತೆ ಅಪಾರ ಬಂಧು ಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ವಿಶ್ವಕರ್ಮ ಸ್ಮಶಾನದಲ್ಲಿ ಶನಿವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭಾರತೀಯ ಸಂಸ್ಕೃತಿಯು ಜ್ಞಾನದ ಆಧಾರಸ್ತಂಭವಾಗಿದೆ

ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅಭಿಮತ



ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಇಂದಿನಿಂದ ಆರಂಭವಾದ ಎರಡು ದಿನಗಳ ದಕ್ಷಿಣ ಅಧಿಕೃತ ಭಾಷಾ ಸಮ್ಮೇಳನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬಿಹಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಉದ್ಘಾಟಿಸಿದರು.

ಮೈಸೂರು, ಜ.4(ಆರ್‌ಕೆ)–ನಮ್ಮ ಭಾರತೀಯ ಸಂಸ್ಕೃತಿಯು ಇತಿಹಾಸ ಮತ್ತು ಜ್ಞಾನದ ಆಧಾರದ ಮೇಲೆ ನಿಂತಿದೆ ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ ಅಭಿಪ್ರಾಯಪಟ್ಟಿದ್ದಾರೆ.

ಕೇಂದ್ರ ಗೃಹ ಸಚಿವಾಲಯದ ಅಧಿಕೃತ ಭಾಷಾ ವಿಭಾಗವು ಕೇಂದ್ರೀಯ ಭಾಷಾ ಸಂಸ್ಥಾನದ ಸಹಯೋಗದಲ್ಲಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಇಂದಿನಿಂದ ಆರಂಭವಾದ ಎರಡು ದಿನಗಳ ದಕ್ಷಿಣ ಅಧಿಕೃತ ಭಾಷಾ ಸಮ್ಮೇಳನ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಸಶಕ್ತ ಪರಂಪರೆ ಹೊಂದಿರುವ ನಮ್ಮ ದೇಶದ ಸಂಸ್ಕೃತಿಯು ಇತಿಹಾಸ ಮತ್ತು ಜ್ಞಾನದ ಮೇಲೆ ನಿಂತಿರುವುದರಿಂದಲೇ ವಿದೇಶಿಗರು ಭಾಷೆ ಕಲಿಯಲು ಇಲ್ಲಿಗೆ ಬರುತ್ತಾರೆ. ಜ್ಞಾನಿಗಳಾದ ಭಾರತೀಯರು ಸಮಾಜದ ಸ್ವಾಸ್ಥ್ಯದ ಕಡೆಗೂ ಗಮನ ಹರಿಸಬೇಕು ಎಂದರು.

ದೇಶದ ಬಹು ಸಂಸ್ಕೃತಿಯ ರಾಯಭಾರಿಯಾಗಿರುವ ಎಲ್ಲಾ ಭಾಷೆಗಳನ್ನೂ ಕಲಿತಾಗ ಮಾತ್ರ ವೈವಿಧ್ಯತೆ ಅರಿಯಲು ಸಾಧ್ಯ. ನಾವು ಪ್ರಪಂಚದ ಯಾವುದೇ ದೇಶದ ಭಾಷೆಯನ್ನಾದರೂ ಕಲಿಯಬಹುದು. ಆದರೆ, ನಮ್ಮ ದೇಶದ ಭಾಷೆಯನ್ನು ಪ್ರೀತಿಸಬೇಕೇ ಹೊರತು, ದ್ವೇಷಿಸಬಾರದು ಎಂದು ಅವರು ಸಲಹೆ ನೀಡಿದರು.

ದಕ್ಷಿಣ ಭಾರತದ ಭಾಷಿಗರಿಗಷ್ಟೇ ಅಲ್ಲದೆ, ಅಂತರರಾಷ್ಟ್ರೀಯ ಭಾಷೆಯಾಗಿಯೂ ಹಿಂದಿ ಪ್ರವರ್ಧಮಾನಕ್ಕೆ ಬರುತ್ತಿದೆ. ಕೇಂದ್ರ ಸರ್ಕಾರವು ಮಾತೃ ಭಾಷಾ ಕಲಿಕೆ ಹಾಗೂ ಅಭಿವೃದ್ಧಿಗೆ ಒತ್ತು ನೀಡುತ್ತಿದೆ ಎಂದ ನಿತ್ಯಾನಂದ ರೈ ಅವರು, ರಾಷ್ಟ್ರೀಯ ಏಕೀಕರಣದಲ್ಲಿ ಹಿಂದಿ ಪಾತ್ರ ಮಹತ್ವದ್ದಾಗಿದ್ದು, ಮಹಾತ್ಮಗಾಂಧೀಜಿ ಅವರೂ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆ ಸ್ಥಾಪಿಸಿದ್ದರು ಎಂದರು.

ಸಮ್ಮೇಳನದಲ್ಲಿ ಭಾಗವಹಿಸಿದ್ದ ಬಿಹಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು ಮಾತನಾಡಿ, ಭಾರತದಲ್ಲಿ ಹಿಂದಿಯನ್ನು ಒಂದು ಸಂಪರ್ಕ ಭಾಷೆಯಾಗಿ ಬಳಸಬೇಕಿದೆ. ಯಾವುದೇ ಭಾಷೆ ಕಲಿತರೂ ಸಹ ಜ್ಞಾನವನ್ನು ವೃದ್ಧಿಸುತ್ತದೆಯಾದ್ದರಿಂದ ಭಾಷೆ ಮೇಲಿನ ಅಂಧಕಾರ, ತಾರತಮ್ಯ ಸಲ್ಲದು ಎಂದರು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಪ್ರತಿಯೊಬ್ಬ ಕನ್ನಡಿಗ, ಭಾರತೀಯ ಎಂಬ ತತ್ವವು ನಮ್ಮ ನಾಡಗೀತೆಯಲ್ಲೇ ಇದೆ. ಒಂದು ಲೋಕಸಭಾ ಕ್ಷೇತ್ರದಲ್ಲಿ ಕನ್ನಡ, ಕೊಡವ, ಅರೆಭಾಷೆಗಳಿವೆ. ಬಹು ಭಾಷೆ ಮತ್ತು ಸಂಸ್ಕೃತಿಯೇ ಶಕ್ತಿಯಾಗಿದೆ ಎಂದರು.

ಇದೇ ವೇಳೆ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ಕೇರಳ, ತಮಿಳುನಾಡು, ಪಾಂಡಿಚೇರಿ, ಲಕ್ಷದ್ವೀಪದ ಕೇಂದ್ರ ಸರ್ಕಾರದ ಕಚೇರಿಗಳು, ಬ್ಯಾಂಕ್‌ಗಳಲ್ಲಿ ಭಾಷಾ ಅನುಷ್ಠಾನಗೊಳಿಸುತ್ತಿರುವ 32 ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು.

ಪಂಜಾಬ್ ನ್ಯಾಷನಲ್ ಬ್ಯಾಂಕ್ ಕಾರ್ಯ ನಿರ್ವಾಹಕ ನಿರ್ದೇಶಕ ಬಿನೋದ್ ಕುಮಾರ್, ತಮಿಳುನಾಡು ಕೇಂದ್ರೀಯ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಂ.ಕೃಷ್ಣನ್, ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಶರಣಪ್ಪ ವಿ.ಹಲಸೆ, ಅಧಿಕೃತ ಭಾಷಾ ವಿಭಾಗದ ಜಂಟಿ ನಿರ್ದೇಶಕ ರಾಜೇಶ್ ಕುಮಾರ್ ಶ್ರೀವಾತ್ಸವ್, ಉಪ ಕಾರ್ಯದರ್ಶಿ ಅನಿಲ್ ಕುಮಾರ್, ಬೆಂಗಳೂರು ವಿಭಾಗೀಯ ನಿರ್ದೇಶಕ ಅನಿರ್ಬನ್ ಕುಮಾರ್ ಬಿಸ್ವಾಸ್, ಸಿಐಐಎಲ್ ನಿರ್ದೇಶಕ ಪ್ರೊ. ಶೈಲೇಂದ್ರ ಮೋಹನ್ ಅವರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಐಡೆಂಟಿಟಿ (ತ) + ಐಡೆಂಟಿಟಿ (ಮ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುಐ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವನವಾಸ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗನ ಅಂಡ್ ರೋಜಸ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುಐ (ಕ)	4 ಪ್ರದರ್ಶನಗಳು
ರಾಜಕಮಲ್	
ವಿಡುದಲೈ–2(ತ)	4 ಪ್ರದರ್ಶನಗಳು
ಸಂಗಂ	
ಮ್ಯಾಕ್ಸ್(ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬೇಬಿಜಾನ್ (ಹಿ)	4 ಪ್ರದರ್ಶನಗಳು
ಪ್ರಭಾ	
ಗನ್ ಅಂಡ್ ರೋಜಸ್(ಕ) + ಪುಷ್ಪ–2 (ಕ)	2+2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಆಫ್ಟರ್ ದಿ ಬ್ರೇಕಪ್ (ಕ): ಬೆ.9.40ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಸಂ.5.20ಕ್ಕೆ, ರಾ.7.45ಕ್ಕೆ, ಯುಐ (2024) (ಕ): ಮ.2.35ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಸೋನಿಕ್ ದಿ ಹೆಡ್ಜಾಗ್ 3(ಇಂ): ಬೆ.11.25ಕ್ಕೆ, ಸಂ.4.30ಕ್ಕೆ, ದೇಶಕ್ಕಾರನ್ (ಮ): ಮ.1.55ಕ್ಕೆ, ಮಾರ್ಕೊ (ಹಿಂ): ರಾ.7ಕ್ಕೆ, ಮಾರ್ಕೊ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಹರಿದಾಸರ ದಿನಚರಿ (ಕ): ಬೆ.10.30ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಮ.1.40ಕ್ಕೆ, ಸಂ.4.30ಕ್ಕೆ, ಎ ಲೆಜೆಂಡ್ (ಇಂ): ರಾ.7.20ಕ್ಕೆ, ಐಡೆಂಟಿಟಿ (ಮ): ರಾ.10.05ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.05ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪುಷ್ಪಾ 2 (ಕ): ಮ.1ಕ್ಕೆ, ಸ್ವೇಚ್ಛಾ (ಕ): ಸಂ.4.40ಕ್ಕೆ, ಯುಐ (ಕ): ಸಂ.6.55ಕ್ಕೆ, ದೇಶಕ್ಕಾರನ್ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಮ್ಯಾಕ್ಸ್ (ಕ): ಮ.1.10ಕ್ಕೆ, ಮ.3.50ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಬೆ.11.25ಕ್ಕೆ, ಯುಐ (ಕ): ಮ.1.45ಕ್ಕೆ, ಮ್ಯಾಕ್ಸ್ (ಕ): ಸಂ.6.25ಕ್ಕೆ.
ಸ್ಕ್ರೀನ್ 4	ಮ್ಯಾಕ್ಸ್ (ಕ): ಬೆ.11ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.1.45ಕ್ಕೆ, ಸಂ.6.55ಕ್ಕೆ, ಕ್ರಾವೆನ್ ದಿ ಹಂಟರ್ (ಇಂ): ಸಂ.4.25ಕ್ಕೆ, ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಬೆಂಗಳೂರಿನಲ್ಲಿ ಕಸದ ಲಾರಿ ಹರಿದು ಇಬ್ಬರ ಸಹೋದರಿಯರ ದುರ್ಮರಣ

ಬೆಂಗಳೂರು: ಬಿಬಿಎಂಪಿ ಕಸದ ಲಾರಿ ಹರಿದು ಇಬ್ಬರು ಸಾವನ್ನಪ್ಪಿರುವ ಘಟನೆ ಥಣಿಸಂದ್ರ ಮುಖ್ಯರಸ್ತೆಯ ಸಾರಾಯಿಪಾಳ್ಯದಲ್ಲಿ ಶನಿವಾರ ನಡೆದಿದೆ.

ಗೋವಿಂದಪುರ ನಿವಾಸಿಗಳಾದ ನಾಜಿಯಾ ಸುಲ್ತಾನ್, ನಾಜಿಯಾ ಇರ್ಫಾನ್ ಮೃತ ಸಹೋದರಿಯರು. ದ್ವಿಚಕ್ರ ವಾಹನದಲ್ಲಿ ಸಾಗುತ್ತಿದ್ದಾಗ ಅಪಘಾತ ಸಂಭವಿಸಿದೆ.

ದ್ವಿಚಕ್ರ ವಾಹನದಲ್ಲಿ ಸಾಗುತ್ತಿದ್ದ ಸಹೋದರಿಯರು, ಎಡಬದಿಯಿಂದ ಬಿಬಿಎಂಪಿ ಕಸದ ಲಾರಿಯನ್ನು ಓವರ್‌ಟೇಕ್ ಮಾಡಲು ಹೋಗಿದ್ದಾರೆ. ಈ ವೇಳೆ ಲಾರಿ ಡಿಕ್ಕಿ ಹೊಡೆದಿದ್ದು, ಸವಾರರ ಮೇಲೆ ಹರಿದು ಹೋಗಿದೆ. ಪರಿಣಾಮ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಪಘಾತದ ಬೆನ್ನಲ್ಲೇ ಹೆಣ್ಣೂರು ಸಂಚಾರಿ ಪೊಲೀಸರು ಕಸದ ಲಾರಿ ಚಾಲಕನನ್ನು ವಶಕ್ಕೆ ಪಡೆದಿದ್ದು, ಮೃತದೇಹಗಳನ್ನು ಯಲಹಂಕ ಸರ್ಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ.

ತಮಿಳುನಾಡಿನ ಪಟಾಕಿ ತಯಾರಿಕಾ ಘಟಕದಲ್ಲಿ ಸ್ಫೋಟ; ಆರು ಕಾರ್ಮಿಕರ ಸಾವು

ವಿರುದುನಗರ: ತಮಿಳುನಾಡಿನ ವಿರುದುನಗರ ಬಳಿಯ ಪಟಾಕಿ ತಯಾರಿಕಾ ಘಟಕದಲ್ಲಿ ಶನಿವಾರ ಸಂಭವಿಸಿದ ಸ್ಫೋಟದಲ್ಲಿ 6 ಮಂದಿ ಕಾರ್ಮಿಕರು ಸಾವನ್ನಪ್ಪಿದ್ದಾರೆ.

ಪಟಾಕಿ ತಯಾರಿಕೆ ಪ್ರಕ್ರಿಯೆಯ ಭಾಗವಾಗಿ ಕಾರ್ಮಿಕರು ರಾಸಾಯನಿಕ–ಕಚ್ಚಾ ಸಾಮಗ್ರಿಗಳನ್ನು ಮಿಶ್ರಣ ಮಾಡುವ ಕಾರ್ಯದಲ್ಲಿ ತೊಡಗಿದ್ದಾಗ ಬೆಳಗ್ಗೆ ಸ್ಫೋಟ ಸಂಭವಿಸಿದೆ. ಇದರಿಂದಾಗಿ 6 ಮಂದಿ ಸಾವನ್ನಪ್ಪಿದ್ದು, ಕಾರ್ಖಾನೆಯ ಆವರಣದಲ್ಲಿರುವ 4 ಕೊಠಡಿಗಳು ನೆಲಸಮವಾಗಿವೆ.

ಮೊಹಮ್ಮದ್ ಸುದೀನ್ ಎಂಬ ಕಾರ್ಮಿಕ ಗಾಯಗೊಂಡಿದ್ದು, ಅವರನ್ನು ಸಮೀಪದ ಮಧುರೈನಲ್ಲಿರುವ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಈ ದುರಂತದ ಬಗ್ಗೆ ಆಘಾತ ವ್ಯಕ್ತಪಡಿಸಿರುವ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ಗಾಯಾಳುಗಳಿಗೆ ಮಧುರೈ ಸರ್ಕಾರಿ ಆಸ್ಪತ್ರೆಯಲ್ಲಿ ವಿಶೇಷ ಚಿಕಿತ್ಸೆ ಒದಗಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದ್ದಾರೆ. ಮೃತರ ಕುಟುಂಬಗಳಿಗೆ ತಲಾ ರೂ. 4 ಲಕ್ಷ ಹಾಗೂ ಗಾಯಾಳುಗಳಿಗೆ ರೂ.1 ಲಕ್ಷ ಪರಿಹಾರ ಬಿಡುಗಡೆಗೆ ಆದೇಶ ನೀಡಿದ್ದಾರೆ.

52ನೇ ವಯಸ್ಸಿನಲ್ಲಿ ಸಮುದ್ರದಲ್ಲಿ 150 ಕಿ.ಮೀ ಈಜಿ ದಾಖಲೆ ನಿರ್ಮಿಸಿದ ವೃದ್ಧೆ




ಕಾಕಿನಾಡ: ಮೂವತ್ತರ ಹರೆಯಕ್ಕೆ ಜೀವನದ ಉತ್ಸಾಹ ಕಳೆದುಕೊಳ್ಳುವ ಕೆಲವರ ನಡುವೆ ಆಂಧ್ರ ಪ್ರದೇಶದ ಹಿರಿಯ ಮಹಿಳೆಯೊಬ್ಬರು ತಮ್ಮ 52ನೇ ವಯಸ್ಸಿನಲ್ಲಿ ಸಮುದ್ರದಲ್ಲಿ ಬರೊಬ್ಬರಿ 150ಕಿ.ಮೀ ಈಜಿ ದಾಖಲೆ ನಿರ್ಮಿಸಿದ್ದಾರೆ.

ಕಾಕಿನಾಡ ಜಿಲ್ಲೆಯ ಶಾಮಲಾ ಎಂಬ ವೃದ್ಧೆ ತಮ್ಮ 52ನೇ ವಯಸ್ಸಿನಲ್ಲೂ ಜೀವನದ ಅತಿ ದೊಡ್ಡ ಸಾಹಸ ಮಾಡಿದ್ದು, ಬಂಗಾಳ ಕೊಲ್ಲಿಯಲ್ಲಿ ಬರೋಬ್ಬರಿ 150 ಕಿಲೋಮೀಟರ್ ದೂರ ಈಜಿ ದಾಖಲೆ ಬರೆದಿದ್ದಾರೆ. ವಿಶಾಖಪಟ್ಟಣಂನಿಂದ ಆರಂಭವಾದ ಅವರ ಈಜಿನ ಸಾಹಸ ಗಾಥೆ ಅವರ ಹುಟ್ಟೂರಾದ ಕಾಕಿನಾಡದಲ್ಲಿ ಅಂದರೆ ಸುಮಾರು 150 ಕಿ.ಮೀ ದೂರದಲ್ಲಿ ಕೊನೆಗೊಂಡಿದೆ.

ಕೋರಮಂಡಲ್ ಒಡಿಸ್ಸಿ ಸಾಗರ ಈಜು ಸಂಸ್ಥೆಯ ಆಶ್ರಯದಲ್ಲಿ ಕಳೆದ ತಿಂಗಳು 28ರಂದು ವಿಶಾಖಪಟ್ಟಣಂ ಕರಾವಳಿಯಿಂದ ಕಾಕಿನಾಡ ಕರಾವಳಿವರೆಗೆ ಯಾತ್ರೆ ಆರಂಭಿಸಲಾಗಿತ್ತು. ಈ ಯಾತ್ರೆಯಲ್ಲಿ ಶಾಮಲಾ ಅವರು 2024ರ ಡಿಸೆಂಬರ್ 28ರಂದು ತಮ್ಮ ಈಜಿನ ಜರ್ನಿಯನ್ನು ವಿಶಾಖಪಟ್ಟಣಂನ ಆರ್ ಕೆ ಬೀಚ್‌ನಲ್ಲಿ ಆರಂಭಿಸಿದ್ದರು. ಸಮುದ್ರದಲ್ಲಿ ದಿನಕ್ಕೆ 30 ಕಿ.ಮೀ.ನಂತೆ 150 ಕಿ.ಮೀ ದೂರ ಈಜಿ ಜನವರಿ 4ರಂದು ಆಂಧ್ರಪ್ರದೇಶದ ಕಾಕಿನಾಡದ ಸೂರ್ಯ ರಾವ್ ಬೀಚ್ ತಲುಪಿದ್ದಾರೆ. ಅಚ್ಚರಿ ಎಂದರೆ ಶಾಮಲಾ ಅವರು ಸಮುದ್ರದಲ್ಲೇ ಈಜುತ್ತಾ ಹೊಸ ವರ್ಷಾಚರಣೆ ಮಾಡಿದ್ದು ವಿಶೇಷ.

ಪ್ರಕೃತಿ, ಆಧ್ಯಾತ್ಮ ಕುರಿತು ಶರಣರು ವಚನಗಳ ಮೂಲಕ ಜಗತ್ತಿಗೆ ಸಂದೇಶ ನೀಡಿದ್ದಾರೆ

ಸಂಸ್ಕೃತಿ ಚಿಂತಕ ಲಕ್ಷ್ಮೀಶ ತೋಳ್ಪಾಡಿ ಅಭಿಮತ



ಪ್ರಕೃತಿ ಮತ್ತು ಆಧ್ಯಾತ್ಮ' ವಿಶೇಷ ಉಪನ್ಯಾಸದಲ್ಲಿ ಸಂಸ್ಕೃತಿ ಚಿಂತಕ ಲಕ್ಷ್ಮೀಶ ತೋಳ್ಪಾಡಿ ಅವರು 2025ರ ಟೇಬಲ್ ಕ್ಯಾಲೆಂಡರ್ ಬಿಡುಗಡೆಗೊಳಿಸಿದರು.

ಮೈಸೂರು, ಜ.4(ಎಸ್‌ಪಿಎನ್)– 12ನೇ ಶತಮಾನದ ಶರಣರು, ಪ್ರಕೃತಿ ಮತ್ತು ಆಧ್ಯಾತ್ಮ ಕುರಿತು ತಮ್ಮ ವಚನಗಳ ಮೂಲಕ ಜಗತ್ತಿಗೆ ಸಂದೇಶ ನೀಡಿದ್ದಾರೆ ಎಂದು ಸಂಸ್ಕೃತಿ ಚಿಂತಕ ಲಕ್ಷ್ಮೀಶ ತೋಳ್ಪಾಡಿ ಅಭಿಪ್ರಾಯಪಟ್ಟರು.

ಮೈಸೂರು ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜು ಆವರಣದ ನವಜ್ಯೋತಿ ಸಭಾಂಗಣದಲ್ಲಿ ಮುದ್ದುರಾಮ ಪ್ರತಿಷ್ಠಾನ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮೀಜಿ ಸ್ಮಾರಕ ವತಿಯಿಂದ ಏರ್ಪಡಿಸಿದ್ದ ಎರಡು ದಿನಗಳ 'ಪ್ರಕೃತಿ ಮತ್ತು ಆಧ್ಯಾತ್ಮ' ವಿಷಯ ಕುರಿತು ಮಾತನಾಡಿದರು.

ಪ್ರಕೃತಿಯಲ್ಲಿರುವ ಎಲ್ಲಾ ಅಂಶಗಳ ಬಗ್ಗೆ ಈ ನಾಡಿನ ಶರಣರು, ದಾಸರು, ವಿದ್ವಾಂಸರು, ಕವಿಗಳು, ಯತಿಗಳು ಹಾಗೂ ಚಿಂತಕರು ಎಲ್ಲಾ ಸತ್ಯಸಂಗತಿಗಳನ್ನು ಸಮಾಜಕ್ಕೆ ಹೇಳಿದ್ದಾರೆ. ಪ್ರಸ್ತುತ ಅದರ ಅನುಷ್ಠಾನ ಮಾತ್ರ ಬಾಕಿ ಉಳಿದಿದೆ. ಅಲ್ಲದೆ, ಪ್ರಕೃತಿಯಲ್ಲಿರುವ ಎಲ್ಲಾ ವಿಷಯಗಳು ಬಹಿರಂಗಗೊಂಡಿವೆ. ಆದರೆ, ಅದರ ಸತ್ಯ ತಿಳಿದುಕೊಂಡವರು ಎಷ್ಟು ಮಂದಿ ಎಂಬುದು ಸಮಾಜದ ಮುಂದಿರುವ ಪ್ರಶ್ನೆ ಎಂದರು.

ಪ್ರಕೃತಿ ಮತ್ತು ಆಧ್ಯಾತ್ಮ ಹಲವು ಚಮತ್ಕಾರಗಳನ್ನು ಒಳಗೊಂಡಿದೆ. ಅತೀಂದ್ರಿಯತೆಯು ಒಬ್ಬ ವ್ಯಕ್ತಿ ಗ್ರಹಿಸಿದ ಅನುಭವಿಸುವ ಕ್ರಿಯೆಗಳನ್ನು ಒಳಗೊಳ್ಳುತ್ತದೆ ಮತ್ತು ಸಾಮಾನ್ಯವಾಗಿ ನಂಬಿಕೆ ನಿರ್ದಿಷ್ಟ ಸಿದ್ಧಾಂತವನ್ನು ಒಳಗೊಂಡಿರುತ್ತದೆ ಎಂಬುದು ಎಲ್ಲರ ಭಾವನೆ. ಸಜ್ಜುಗೊಂಡ ಮನಸ್ಸು, ಅಂತಃಕರಣ, ಮಾನವ ಜೀವನ ಸತ್ಯ ಎಲ್ಲರಿಗೂ ಈ ವೇಳೆಗಾಗಲೇ ತಿಳಿಯಬೇಕಾಗಿತ್ತು. ಆದರೆ, ಪ್ರಕೃತಿಯ ಜೀವನ ಸತ್ಯ ತಿಳಿದುಕೊಂಡವರು ಎಷ್ಟು ಎಂಬುದು ಪ್ರಸ್ತುತ ಎಲ್ಲರ ಮುಂದಿರುವ ಪ್ರಶ್ನಾರ್ಥಕ ಎಂದರು.

ಓರ್ವ ಗಣ್ಯವ್ಯಕ್ತಿ ನಿಧನರಾದರೆ ಪಂಚಭೂತಗಳಲ್ಲಿ ಲೀನ ಎಂಬ ಪದ ಪ್ರಯೋಗ ಸಾಮೂಹಿಕವಾಗಿರುತ್ತದೆ. ಆದರೆ, ಅವರು ಆ ವ್ಯಕ್ತಿ ಬದುಕಿದ್ದಾಗಲೇ ನೀರು, ಗಾಳಿ, ಆಹಾರ ಸೇವಿಸಿ ಬದುಕಿರಲಿಲ್ಲವೇ? ಇಲ್ಲದಿದ್ದರೆ ಅವರು ಬದುಕಿರಲು ಸಾಧ್ಯವಿತ್ತೇ ಎಂಬುದು ಸಮಾಜದ ಪ್ರಶ್ನೆ. ಏಕೆಂದರೆ ಇತ್ತೀಚೆಗೆ ಮಾಜಿ ಪ್ರಧಾನಮಂತ್ರಿಯೊಬ್ಬರು ನಿಧನರಾದಾಗ ಮಾಧ್ಯಮಗಳಲ್ಲಿ ಪಂಚಭೂತಗಳಲ್ಲಿ ಲೀನ ಎಂಬ ಪದ ಪ್ರಯೋಗ ಹೆಚ್ಚಾಗಿ ಕಂಡುಬಂತು. ಇದು ಎಷ್ಟರಮಟ್ಟಿಗೆ ಸರಿ ಎಂದು ಪ್ರಶ್ನಿಸಿದರು.

ಭಾಷೆ ಕುರಿತು ನಮ್ಮೊಳಗೆ ಭಿನ್ನದನಿ ಇರುತ್ತದೆ. ಆದರೆ, ಅದು ಸಮಾಜಕ್ಕೆ ಗೊತ್ತಾಗುವುದಿಲ್ಲ. ನಾವು ಮಾತನಾಡುವ ಭಾಷೆಯಲ್ಲೇ ಪರ–ವಿರುದ್ಧ, ಮಂಡನೆ, ಒಪ್ಪಿಗೆ, ತಿರಸ್ಕಾರ, ಸ್ವೀಕಾರ ಎಲ್ಲಾ ಅಂಶಗಳನ್ನು ಕಾಣಬಹುದು. ಇದು ಒಂಥರ ಬಹಳ ವಿಚಿತ್ರವೂ ಹೌದು, ವಿಲಕ್ಷಣವೂ ಹೌದು. ಸಮಾಜದಲ್ಲಾಗುವ ಅನುಭವಗಳ ಮೇಲೆ ಪ್ರತಿಯೊಬ್ಬರಿಗೂ ಪ್ರಕೃತಿಯ ದರ್ಶನವಾಗಬೇಕು. ಇದರ ಆಧಾರದ ಮೇಲೆ ಪ್ರಕೃತಿಯಲ್ಲಿ ನಂಬಿಕೆ ಹುಟ್ಟುತ್ತದೆ ಎಂದರು.

ನಾವು ಪ್ರಕೃತಿಯನ್ನು ಗಮನಿಸುವಾಗ ಕಣ್ಣು ಪ್ರಕೃತಿಗೆ ದಾಸವಾಗುತ್ತದೆ. ಅದರಂತೆ ಎಲ್ಲಾ ಇಂದ್ರಿಯಗಳೂ ದಾಸರಾಗುತ್ತವೆ. ಇದು ನಮ್ಮ ಮನಸ್ಸು ಮತ್ತು ಬದುಕನ್ನು ಆಳುತ್ತದೆ. ಹಾಗಾಗಿ ನಮ್ಮ ಆಲೋಚನೆ, ಅದೇ ದೃಶ್ಯವನ್ನು ಮತ್ತೆ ಮತ್ತೆ ಗಮನಿಸುವುದನ್ನು ಬಿಡಬೇಕು. ನಮ್ಮ ಆಲೋಚನೆ ಭಿನ್ನವಾಗಿದ್ದರೆ, ಅದನ್ನು ಇನ್ನೊಬ್ಬರು ಸಹಿಸುವುದಿಲ್ಲ. ಯಾವುದೇ ಸಿದ್ಧಾಂತಗಳನ್ನು ಒಪ್ಪಿಕೊಳ್ಳುವ ಪ್ರಮೇಯವೂ ಇರುವುದಿಲ್ಲ ಎಂದರು.

ಈ ವೇಳೆ ಚಾಮರಾಜನಗರದ ದೀನಬಂಧು ಟ್ರಸ್ಟ್ ಕಾರ್ಯದರ್ಶಿ ಜಿ.ಎಸ್.ಜಯದೇವ, ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ.ಎನ್.ಎಂ.ತಳವಾರ್ ಸೇರಿದಂತೆ ಇತರರಿದ್ದರು.

ಜಮ್ಮು–ಕಾಶ್ಮೀರದಲ್ಲಿ ಪ್ರಪಾತಕ್ಕೆ ಬಿದ್ದ ಸೇನಾ ವಾಹನ, ನಾಲ್ವರು ಯೋಧರು ಹುತಾತ್ಮ

ಬಂಡಿಪೋರಾ: ಕೇಂದ್ರಾಡಳಿತ ಪ್ರದೇಶ ಜಮ್ಮು–ಕಾಶ್ಮೀರದಲ್ಲಿ ಸೇನಾ ವಾಹನ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕಳೆದ ವಾರ ಪೂಂಚ್ ಬಳಿ ಸೇನಾ ವಾಹನ ಕಮರಿಗೆ ಬಿದ್ದು ಕರ್ನಾಟಕದ ನಾಲ್ವರು ಸೇರಿದಂತೆ ಒಟ್ಟು ಐವರು ಹುತಾತ್ಮರಾಗಿದ್ದರು.

ಇದು ಮಾಸುವ ಮುನ್ನವೇ ಮತ್ತೆ ಅಂತಹುದೇ ಘಟನೆ ಸಂಭವಿಸಿದ್ದು, ಸೇನಾ ವಾಹನ ಪ್ರಪಾತಕ್ಕೆ ಬಿದ್ದರಿಂದ ನಾಲ್ವರು ಯೋಧರು ಹುತಾತ್ಮರಾಗಿರುವ ಘಟನೆ ಬಂಡಿಪೋರಾ ಜಿಲ್ಲೆಯಲ್ಲಿ ನಡೆದಿದೆ.



ಸೇನಾ ವಾಹನವೊಂದು ರಸ್ತೆಯಿಂದ ಸ್ಕಿಡ್ ಆಗಿ ಉತ್ತರ ಕಾಶ್ಮೀರ ಜಿಲ್ಲೆಯ ಎಸ್‌ಕೆ ಪಾಯೆನ್ ಬಳಿ ಪ್ರಪಾತಕ್ಕೆ ಬಿದ್ದರಿಂದ ಇಬ್ಬರು ಯೋಧರು ಹುತಾತ್ಮರಾಗಿದ್ದಾರೆ. ಘಟನೆಯಲ್ಲಿ ಇತರ ಮೂವರು ಯೋಧರು ಗಾಯಗೊಂಡಿದ್ದು, ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಘಟನೆಯಲ್ಲಿ ಗಾಯಗೊಂಡಿದ್ದ ಮೂವರು ಯೋಧರು ಪ್ರಾಣಾಪಾಯದಿಂದ ಪಾರಾಗಿದ್ದು, ಅವರನ್ನು ಶ್ರೀನಗರಕ್ಕೆ ಹೆಚ್ಚಿನ ಚಿಕಿತ್ಸೆಗಾಗಿ ಕಳುಹಿಸಲಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಮಸ್ರತ್ ಇಕ್ಬಾಲ್ ಸುದ್ದಿಗಾರರಿಗೆ ತಿಳಿಸಿದರು.

ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಅಕ್ರಮ

ರಾಜ್ಯ ಸರ್ಕಾರದ ಬೊಕ್ಕಸಕ್ಕೆ 16.84 ಕೋಟಿ ರೂ. ನಷ್ಟ

ಲೋಕಾಯುಕ್ತ ಪ್ರಾಥಮಿಕ ತನಿಖೆಯಿಂದ ಬಹಿರಂಗ

ಬೆಂಗಳೂರು: ವಿಜಯಪುರದ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ನಿವೇಶನ ರಹಿತರಿಗೆ ನಿವೇಶನ ಹಂಚಿಕೆಯಲ್ಲಿ ಅವ್ಯವಹಾರ ನಡೆದಿದ್ದು, ಇದರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ 16.84 ಕೋಟಿ ರೂಪಾಯಿ ನಷ್ಟವಾಗಿರುವುದು ಲೋಕಾಯುಕ್ತ ತನಿಖೆಯಿಂದ ಬಹಿರಂಗವಾಗಿದೆ.

2024ರ ಡಿಸೆಂಬರ್ 26 ರಂದು ಭ್ರಷ್ಟಾಚಾರ ತಡೆ ಕಾಯ್ದೆ ಮತ್ತು ಐಪಿಸಿಯ ವಿವಿಧ ಸೆಕ್ಷನ್‌ಗಳಡಿ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಅಧಿಕೃತ ಹೇಳಿಕೆಯ ಪ್ರಕಾರ, 2014 ಮತ್ತು 2018 ರ ನಡುವೆ ನಿಜವಾದ ಫಲಾನುಭವಿಗಳಾದ ಕೃಷಿ ಕುಟುಂಬಗಳ ಬಡ ಭೂರಹಿತ ಮಹಿಳೆಯರ ಹೆಸರಿನಲ್ಲಿ ನಕಲಿ ಮಾರಾಟ ಪತ್ರಗಳನ್ನು ಸೃಷ್ಟಿಸಿ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂದು ದೂರುದಾರರು ಆರೋಪಿಸಿದ್ದರು.

ಡಿ.30ರಿಂದ ಐದು ದಿನಗಳ ಕಾಲ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಆಗಿನ ವ್ಯವಸ್ಥಾಪಕಿ ರೇಣುಕಾ ಸಾತರ್ಲೆ, ನಿಗಮದ ಜಿಲ್ಲಾ ವ್ಯವಸ್ಥಾಪಕಿ ರೇಣುಕಾ ಸಾತರ್ಲೆ, ನಿವೃತ್ತ ಜಿಲ್ಲಾ ವ್ಯವಸ್ಥಾಪಕ ಎಸ್.ಎಸ್. ಮಾನಗಿರಿ ಸೇರಿದಂತೆ ಎಂಟು ಅಧಿಕಾರಿಗಳ ಮನೆ ಮತ್ತು ಕಚೇರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳ ದಾಳಿ ನಡೆಸಿದ್ದರು.



ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್.ಪಾಟೀಲ್ ಅವರ ನಿರ್ದೇಶನದ ಮೇರೆಗೆ ನಡೆಸಲಾದ ತನಿಖೆಯಲ್ಲಿ ಆರೋಪಿತ ಅಧಿಕಾರಿಗಳು ಜಮೀನು ಮಂಜೂರಾತಿ ನಿಯಮ ಉಲ್ಲಂಘಿಸಿ, ನಿಗಮದಿಂದ ನಿವೇಶನ ಪಡೆದಿದ್ದರೂ ಆಯಾ ಸಮುದಾಯದ ಮಹಿಳೆಯರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿರುವುದು ಬೆಳಕಿಗೆ ಬಂದಿದೆ. ಇದಲ್ಲದೆ, ಆರೋಪಿ ಅಧಿಕಾರಿಗಳು ಅನರ್ಹರಿಗೆ ಭೂಮಿಯನ್ನು ಹಂಚಿಕೆ ಮಾಡಿದ್ದಾರೆ ಮತ್ತು ಒಂದೇ ಕುಟುಂಬಕ್ಕೆ ಸೇರಿದವರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದಾರೆ.

2012 ರಿಂದ 2018 ರವರೆಗಿನ ನಿಗಮದ 23 ಕಡತಗಳು ನಾಪತ್ತೆಯಾಗಿದ್ದು, 33 ಕಡತಗಳಲ್ಲಿ ನಕಲಿ ಮಾರಾಟ ಪತ್ರಗಳು, ನೋಂದಣಿ ಮತ್ತು ಮುದ್ರಾಂಕ ಶುಲ್ಕದ ರಸೀದಿಗಳು ಪತ್ತೆಯಾಗಿದ್ದು, ಇದರಿಂದ ರಾಜ್ಯದ ಬೊಕ್ಕಸಕ್ಕೆ 16.84 ಕೋಟಿ ರೂಪಾಯಿ ನಷ್ಟವಾಗಿದೆ ಎಂದು ತನಿಖೆಯಿಂದ ತಿಳಿದುಬಂದಿದೆ. ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಲೋಕಾಯುಕ್ತ ಕಚೇರಿ ಪ್ರಕಟಣೆ ತಿಳಿಸಿದೆ.

ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣ

ಸಚಿವ ಪ್ರಿಯಾಂಕ್ ಖರ್ಗೆ ವಜಾಕ್ಕೆ ಬಿಜೆಪಿ ಮುಖಂಡ ಭಾಸ್ಕರ್ ರಾವ್ ಆಗ್ರಹ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಭಾಸ್ಕರ್ ರಾವ್ ಮಾತನಾಡುತ್ತಿರುವುದು

ಮೈಸೂರು,ಜ.4(ಎಂಟಿವೈ)– ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಹೆಸರು ಪ್ರಸ್ತಾಪವಾಗಿರುವುದರಿಂದ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವ ಸಂಪುಟದಿಂದ ಕೈ ಬಿಡಬೇಕು ಎಂದು ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಹಾಗೂ ಬಿಜೆಪಿ ಮುಖಂಡ ಭಾಸ್ಕರ್ ರಾವ್ ಒತ್ತಾಯಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ದುರಾಡಳಿತದ ಫಲವಾಗಿ ಸರ್ಕಾರಿ ಅಧಿಕಾರಿಗಳ ಆತ್ಮಹತ್ಯೆ ಪ್ರಕರಣ ಹೆಚ್ಚಾಗುತ್ತಿದೆ. ಅದರಲ್ಲಿ ಕಲಬುರ್ಗಿಯ ಗುತ್ತಿಗೆದಾರ ಸಚಿನ್ ಪಾಂಚಾಲ ಪ್ರಕರಣವೂ ಒಂದಾಗಿದ್ದು, ಡೆತ್‌ನೋಟ್‌ನಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಹೆಸರು ಉಲ್ಲೇಖವಾಗಿದೆ. ಡೆತ್‌ನೋಟ್ ನೋಡಿದರೆ ಸರ್ಕಾರವೇ ಸುಪಾರಿ ನೀಡಿದಂತೆ ಅನುಮಾನವಾಗುತ್ತಿದೆ. ರಿಪಬ್ಲಿಕ್ ಆಫ್ ಕಲಬುರ್ಗಿಯಲ್ಲಿ ನಡೆಯುತ್ತಿರುವ ಅನಾಚಾರಗಳನ್ನು ತಡೆಗಟ್ಟಬೇಕಾದರೆ, ಸಂಪುಟದಿಂದ ಪ್ರಿಯಾಂಕ್ ಖರ್ಗೆ ಕೈ ಬಿಡಬೇಕು ಎಂದರು.

ಕಾಂಗ್ರೆಸ್ ರಾಷ್ಟ್ರಾಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಮಗನ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಕಾಂಗ್ರೆಸ್ ರಾಜ್ಯ ನಾಯಕರಿಗೆ ಹೆದರಿಕೆ. ಆ ಕಾರಣದಿಂದಲೇ ಪ್ರಿಯಾಂಕ್ ಖರ್ಗೆ ಎಲ್ಲಾ ಇಲಾಖೆಗಳಲ್ಲೂ ಮೂಗು ತೂರಿಸುತ್ತಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರನ್ನು ಮೂಲೆಗುಂಪು ಮಾಡಲಾಗಿದೆ. ಪರಮೇಶ್ವರ್ ಅವರನ್ನು ಕೇವಲ ಸಭೆಯಲ್ಲಿ ಗೋಡಂಬಿ, ದ್ರಾಕ್ಷಿ ತಿಂದು, ಗಾರ್ಡ್ ಆಫ್ ಹಾನರ್ ಪಡೆದು ಎಸ್ಕಾರ್ಟ್‌ನಲ್ಲಿ ಓಡಾಡುವುದಕ್ಕೆ ಮಾತ್ರ ಸೀಮಿತಗೊಳಿಸಿದ್ದಾರೆ. ಇದರಿಂದ ಗೃಹ ಇಲಾಖೆಯಲ್ಲಿ ಏನಾಗುತ್ತಿದೆ ಎಂದು ಅವರಿಗೆ ತಿಳಿಯುತ್ತಿಲ್ಲ. ಆ ಕಾರಣದಿಂದ ರಾಜ್ಯದಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಆರೋಪಿಸಿದರು.

ಬಹುಮತ ದುರುಪಯೋಗ: ರಾಜ್ಯ ಸರ್ಕಾರಕ್ಕೆ ಬಹುಮತ ಸಿಕ್ಕಿದೆ ಎಂದು ದುರುಪಯೋಗ ಮಾಡಿಕೊಳ್ಳುತ್ತಿದೆ. ಜನರ ಕಷ್ಟಕ್ಕೆ ಸ್ಪಂದಿಸುತ್ತಿಲ್ಲ. ವಿಪಕ್ಷಗಳ ಹೋರಾಟವನ್ನು ಉಡಾಫೆಯಿಂದ ನೋಡುತ್ತಿದೆ ಎಂದು ಕಿಡಿಕಾರಿದರು.

ದುರಹಂಕಾರದ ರಾಜಧಾನಿ ಮೈಸೂರು: ರಾಜ್ಯದಲ್ಲಿ ದುರಹಂಕಾರದ ಆಡಳಿತ ನಡೆಯುತ್ತಿದೆ. ಬಹುಮತ ಇದೆ ಎಂಬ ಕಾರಣಕ್ಕೆ ದರ್ಪದ ರಾಜಕಾರಣ ನಡೆಯುತ್ತಿದೆ. ದುರಹಂಕಾರದ ರಾಜಧಾನಿ ಮೈಸೂರು ಎಂದು ಪರೋಕ್ಷವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ದುರಹಂಕಾರಿ ಎಂದು ಟೀಕಿಸಿದ ಭಾಸ್ಕರ್‌ರಾವ್, ಮುಡಾ ಪ್ರಕರಣದಲ್ಲಿ ನಿವೇಶನ ಹಿಂದಿರುಗಿಸಿದ್ದು, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡಂತಾಗಿದೆ ಎಂದು ಜರಿದರು.

ಸಿಐಡಿ ಕೆಲಸ ಮಾಡುತ್ತಿಲ್ಲ: ರಾಜ್ಯದಲ್ಲಿ ಸರ್ಕಾರಿ ಅಧಿಕಾರಿಗಳ ಆತ್ಮಹತ್ಯೆ ಪ್ರಕರಣಗಳ ಬಗ್ಗೆ ಸಿಐಡಿ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಬೀಸುವ ದೊಣ್ಣೆಯಿಂದ ಪಾರಾಗಲು ಸರ್ಕಾರ ಸಿಐಡಿಯನ್ನು ಬಳಸಿಕೊಳ್ಳುತ್ತಿದೆ. ಕೆಲವು ಪ್ರಕರಣಗಳ ಬಗ್ಗೆ ಚಾರ್ಜ್‌ಶೀಟ್ ಸಲ್ಲಿಸುವುದಕ್ಕೂ ಮುಂದಾಗಿಲ್ಲ. ಪ್ರಕರಣದ ತನಿಖಾ ಪ್ರಗತಿಯನ್ನು ಕುಟುಂಬಸ್ಥರಿಗೂ ನೀಡುತ್ತಿಲ್ಲ ಎಂದು ವಾಗ್ದಾಳಿ ನಡೆಸಿದರು.

ಹಿಂದಿನದ್ದು ಮಾತಾಡಲ್ಲ: ಪ್ರಸ್ತುತ ಸಿಐಡಿ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಆರೋಪಿಸಿದ ಭಾಸ್ಕರ್ ರಾವ್ ಅಮ್ರು, ಈ ಹಿಂದೆ ನೀವೆ ಸಿಐಡಿ ಮುಖ್ಯಸ್ಥರಾಗಿದ್ದೀರಿ, ಆ ಅವಧಿಯಲ್ಲೂ ಸಿಐಡಿ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲವೇ ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಭಾಸ್ಕರ್‌ರಾವ್, ನಾನು ವರ್ತಮಾನದ ಬಗ್ಗೆ ಮಾತ್ರ ಮಾತನಾಡುತ್ತಿದ್ದೇನೆ. ಈ ಹಿಂದಿನದರ ಬಗ್ಗೆ ಮಾತನಾಡುವುದಿಲ್ಲ ಎಂದು ಹೇಳುವ ಮೂಲಕ ತಮ್ಮ ಆಡಳಿತಾವಧಿಯಲ್ಲೂ ಸಿಐಡಿ ಕಾರ್ಯವೈಖರಿ ಬಗ್ಗೆ ಪರೋಕ್ಷವಾಗಿ ಅಸಮಾಧಾನ ವ್ಯಕ್ತಪಡಿಸಿದಂತೆ ಸುಮ್ಮನಾದರು.

ಸುದ್ದಿಗೋಷ್ಠಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹಾದೇವ ಸ್ವಾಮಿ, ರಾಜ್ಯ ವಕ್ತಾರ ಎಂ.ಜಿ.ಮಹೇಶ್, ಮಹೇಶ್ ಅರಸ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಬಿ.ಎಂ.ರಘು, ಕೇಬಲ್ ಮಹೇಶ್ ಇದ್ದರು.

> ಪೊಲೀಸ್ ಠಾಣೆಯಲ್ಲಿ ದೂರು ನೀಡಲು ಬಂದ ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿದ ಪ್ರಕರಣ ತಲೆ ತಗ್ಗಿಸುವಂತದ್ದು. ಗೃಹ ಸಚಿವರ ಕ್ಷೇತ್ರ(ರಾಜ್ಯ) ಮಧುಗಿರಿಯಲ್ಲಿ ಬೆಸ್ಟ್ ಪೊಲೀಸ್ ಅಧಿಕಾರಿಗಳಿರಬೇಕು. ಸಮವಸ್ತ್ರದಲ್ಲಿಯೇ ನೀಚ ಕೆಲಸ ಮಾಡಿದ್ದಾರೆ. ಸಮವಸ್ತ್ರ ಪವಿತ್ರವಾದುದು. ಅವರ ವಿರುದ್ಧ ಸರಿಯಾದ ಕ್ರಮ ಕೈಗೊಂಡಿದ್ದಾರೆ. ಆದರೆ, ಗೃಹ ಸಚಿವರು ಒಂದೂ ಹೇಳಿಕೆ ನೀಡಿಲ್ಲ. ಹಣ ಪಡೆದು ಪೋಸ್ಟಿಂಗ್ ಮಾಡುತ್ತಿರುವ ಪರಿಣಾಮ ಇಂತಹ ಅಧಿಕಾರಿಗಳು ಆಯಾಕಟ್ಟಿನ ಜಾಗಗಳಲ್ಲಿ ನಿಯೋಜನೆಗೊಳ್ಳುತ್ತಿದ್ದಾರೆ.
> – ಭಾಸ್ಕರ್ ರಾವ್, ನಿವೃತ್ತ ಪೊಲೀಸ್ ಅಧಿಕಾರಿ, ಬಿಜೆಪಿ ಮುಖಂಡ

ರಿಂಗ್‌ರಸ್ತೆ ರೈಲ್ವೆ ಅಂಡರ್ ಪಾಸ್ ಕಾಮಗಾರಿ ಪರಿಶೀಲಿಸಿದ ಮಾಜಿ ಸಂಸದ ಪ್ರತಾಪಸಿಂಹ



ರೈಲ್ವೆ ಅಂಡರ್ ಪಾಸ್ ಕಾಮಗಾರಿ ನಡೆಯುವ ಸ್ಥಳಕ್ಕೆ ಮಾಜಿ ಸಂಸದ ಪ್ರತಾಪ ಸಿಂಹ ಶನಿವಾರ ಭೇಟಿ ನೀಡಿ, ಕಾಮಗಾರಿ ವೀಕ್ಷಿಸಿದರು.

ಮೈಸೂರು, ಜ.4(ಎಸ್‌ಪಿಎನ್)– ಮೈಸೂರು ರಿಂಗ್‌ರಸ್ತೆಯ ಆರ್‌ಬಿಐ ಮತ್ತು ಜೆ.ಪಿ.ನಗರದ ಬಳಿ ನಿರ್ಮಾಣಗೊಳ್ಳುತ್ತಿರುವ ರೈಲ್ವೆ ಅಂಡರ್ ಪಾಸ್ ಕಾಮಗಾರಿ ನಡೆಯುವ ಸ್ಥಳಕ್ಕೆ ಮಾಜಿ ಸಂಸದ ಪ್ರತಾಪ ಸಿಂಹ ಶನಿವಾರ ಭೇಟಿ ನೀಡಿ, ಕಾಮಗಾರಿ ವೀಕ್ಷಿಸಿದರು.

ಅಲ್ಲದೆ ರಿಂಗ್ ರಸ್ತೆಯ ಕೆಆರ್‌ಎಸ್ ಜಂಕ್ಷನ್ ಹಾಗೂ ಬೆಂಗಳೂರು–ಮೈಸೂರು ಲೈನ್ ಜಂಕ್ಷನ್ ಬಳಿಯ ಕಾಮಗಾರಿ ಪೂರ್ಣಗೊಳ್ಳಲು ಕನಿಷ್ಟ ಇನ್ನಾರು ತಿಂಗಳು ಬೇಕಾಗಬಹುದು. ಹಾಗಾಗಿ ರೈಲ್ವೆ ಅಂಡರ್ ಪಾಸ್ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಸಾರ್ವಜನಿಕ ವಾಹನಗಳ ಸಂಚಾರಕ್ಕೆ ಅನುವು ಮಾಡಿಕೊಂಡುವಂತೆ ಸಂಬಂಧಪಟ್ಟವರಲ್ಲಿ ಮನವಿ ಮಾಡಿದ್ದಾರೆ.

ಪ್ರತಾಪ ಸಿಂಹ ಸಂಸದರಾಗಿದ್ದ ಅವಧಿಯಲ್ಲಿ ಮುಡಾ ನಿಯಂತ್ರಣದಲ್ಲಿದ್ದ ಮೈಸೂರು ರಿಂಗ್‌ರಸ್ತೆಯನ್ನು ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಹೆದ್ದಾರಿ ಜಾಲಕ್ಕೆ ಸೇರ್ಪಡೆ ಮಾಡಿದ್ದರು. ಜತೆಗೆ ರಿಂಗ್‌ರಸ್ತೆ ಸಂಪೂರ್ಣ ಡಾಂಬರೀಕರಣಕ್ಕೆ 142 ಕೋಟಿ ಅನುದಾನ ಬಿಡುಗಡೆಗೊಳಿಸುವಲ್ಲಿ ಶ್ರಮಿಸಿದ್ದರು.

ಈ ನಡುವೆ 43.5 ಕಿ.ಮೀ ರಿಂಗ್ ರಸ್ತೆಯಲ್ಲಿ ನಾಲ್ಕು ಕಡೆ ರೈಲ್ವೆ ಅಂಡರ್ ಪಾಸ್‌ಗಳಿದ್ದು, ಅವುಗಳನ್ನು ವಿಸ್ತರಣೆ ಮಾಡಬೇಕಾದಂತಹ ಅನಿವಾರ್ಯತೆ ಇತ್ತು. ಸಾರ್ವಜನಿಕ ವಲಯದಿಂದಲೂ ಆಗ್ರಹವಿತ್ತು. ಈ ಕಾಮಗಾರಿ ಹಮ್ಮಿಕೊಳ್ಳಲು ರೈಲ್ವೆ ಇಲಾಖೆ ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅನುಮತಿ ಬೇಕಿತ್ತು. ಸದರಿ ಕಾಮಗಾರಿ ಕೈಗೊಳ್ಳುವ ಸಂಬಂಧ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಲ್ಲಿ ಮನವಿ ಮಾಡಿ, ಅನುದಾನ ಬಿಡುಗಡೆಗೊಳಿಸಲು ಶ್ರಮಿಸಿದ್ದರು.

ರೈಲ್ವೆ ಅಂಡರ್ ಪಾಸ್ ಕಾಮಗಾರಿ ಪ್ರಾರಂಭಿಸಲು ರೈಲ್ವೆ ಇಲಾಖೆಯಿಂದ ವಿನ್ಯಾಸ ನಕ್ಷೆಗೆ ಅನುಮೋದನೆ ಹಾಗೂ ನೂತನ ಕಾಮಗಾರಿ ಆಗಿದ್ದರಿಂದ ಟೆಂಡರ್ ನಿಗದಿಯಾಗಿ ಎರಡು ವರ್ಷ ಪೂರೈಸಿದರೂ ಕಾಮಗಾರಿ ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ.

ಪ್ರಸ್ತುತ ಆರ್‌ಬಿಐ ಮತ್ತು ಜೆ.ಪಿ.ನಗರದ ಬಳಿ ರೈಲ್ವೆ ಅಂಡರ್ ಪಾಸ್‌ನ ವಿಸ್ತರಿಕರಣ ಕಾಮಗಾರಿಯು ಪ್ರಗತಿಯಲ್ಲಿದ್ದು, ಮುಂದಿನ ಒಂದು ತಿಂಗಳಲ್ಲಿ ಪೂರ್ಣಗೊಳಿಸಿ ಸಂಚಾರಕ್ಕೆ ಮುಕ್ತವಾಗುವ ವಿಶ್ವಾಸವನ್ನು ಪ್ರತಾಪ ಸಿಂಹ ವ್ಯಕ್ತಪಡಿಸಿದ್ದಾರೆ.

ಬಸ್ ಪ್ರಯಾಣ ದರ ಏರಿಕೆಗೆ ಎಸ್‌ಡಿಪಿಐ ಖಂಡನೆ



ಮೈಸೂರು,ಜ.4(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿ ಬಸ್ ಟಿಕೆಟ್ ದರ ಶೇ 15ರಷ್ಟು ಏರಿಕೆ ಮಾಡಿ ರಾಜ್ಯ ಸರ್ಕಾರದ ನಿರ್ಧಾರಕ್ಕೆ ಎಸ್‌ಡಿಪಿಐ ಖಂಡನೆ ವ್ಯಕ್ತಪಡಿಸಿದೆ.

ಕೆಎಸ್‌ಆರ್‌ಟಿಸಿ ಸಾರಿಗೆ ಬಸ್ ಟಿಕೆಟ್ ಹೆಚ್ಚಳ ಮಾಡಿರುವುದರಿಂದ ಕಾರ್ಮಿಕ ವರ್ಗ, ವಿದ್ಯಾರ್ಥಿಗಳು ಮತ್ತು ಸಾರ್ವಜನಿಕ ಸಾರಿಗೆಯನ್ನು ಅವಲಂಬಿಸಿರುವ ದೈನಂದಿನ ಪ್ರಯಾಣಿಕರಿಗೆ ದೊಡ್ಡ ಹೊರೆಯಾಗಲಿದೆ. ಜನರು ಈಗಾಗಲೇ ಬೆಲೆ ಏರಿಕೆ ಮತ್ತು ಹೆಚ್ಚುತ್ತಿರುವ ಜೀವನ ನಿರ್ವಹಣಾ ವೆಚ್ಚಗಳಿಂದ ಹೆಣಗಾಡುತ್ತಿದ್ದಾರೆ. ಅದರ ಜೊತೆಗೆ ಈ ಬೆಲೆ ಏರಿಕೆ ಅವರನ್ನು ಆರ್ಥಿಕವಾಗಿ ಮತ್ತಷ್ಟು ಸಂಕಷ್ಟಕ್ಕೆ ದೂಡಲಿದೆ ಎಂದು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಆತಂಕ ವ್ಯಕ್ತಪಡಿಸಿದ್ದಾರೆ.

NEW YEAR SALE
BUY 2 GET 1 FREE 2+1 OFFER *T&C Apply
ON GENTS & LADIES FOOTWEAR
OFFER TILL 21ST JAN* ON ALL IN-HOUSE BRANDS
RUSH — PICK THE BEST FOR YOUR FEET
SHOE WORLD™ ESTD.1998
Best Brands at Your Feet...
Only At
• RAMASWAMY CIRCLE, 100 FT RD, MYSORE PH: 0821-2424252

MUDA APPROVED — Vee2 Developers
NEW YEAR OFFER
₹20 Lakhs Only
(20 x 30 Site)
HERITAGE CITY
Uttanahalli, Mysuru
PRM/KA/RERA/1268/PR/160124/006555
READY FOR REGISTRATION
Available Plots 20x30 & 30x40
8055 004 400

5ನೇ ವರ್ಷದ ಪುಣ್ಯಸ್ಮರಣೆ

ಅಮ್ಮ–ಜೀವ ಭಾವದ ಅಮೃತ ನೀನು, ನಿನಗಿಂತ ಶ್ರೇಷ್ಠ ಇನ್ನಿಲ್ಲ, ನಿನ್ನ ದಿವ್ಯ ಚೇತನಕ್ಕೆ ನಮನ
ಜೆ.ದೇವಮ್ಮ
ಇಂತಿ ದುಃಖತಪ್ತರು:
ಲಿಂಗರಾಜು ಮತ್ತು ಕುಟುಂಬ ವರ್ಗದವರು

ಸೈಟ್ ಮಾರಾಟಕ್ಕಿದೆ
30x50 South Face
ಸರ್ಕಾರಿ ನೌಕರರ ಬಡಾವಣೆ
ಮೇಗಳಾಪುರ/ಮೈದನಹಳ್ಳಿ
ಚಿಕ್ಕನಹಳ್ಳಿ ರಸ್ತೆ, ಇಲವಾಲ
7338445412

ತಕ್ಷಣವೇ ಬೇಕಾಗಿದ್ದಾರೆ
ವಿಜಯನಗರ 3ನೇ ಹಂತದಲ್ಲಿ ಮನೆ ಕೆಲಸ ಮತ್ತು ಅಡುಗೆ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
8088176638


Hi! TAXI
ONLY ONE WAY TAXI CHARGE
MYSORE to BANGALORE City drop or Pick up
BANGALORE to MYSORE Airport drop or Pick up MYSURU
9611177599

ಹೊಸ ಮನೆ ಮಾರಾಟಕ್ಕಿದೆ
3 BHK, 30x40
EAST FACE
MUDA APPROVED
Near St. Joseph School, Yelwala, Mysore
Mob: 8217851695

ಆಸ್ಪತ್ರೆ ಕಟ್ಟುವವರು
A ನಿಂದ Z ಮತ್ತು
ನವೀಕರಣ / ಆಸ್ಪತ್ರೆ / ವಾಣಿಜ್ಯ / ವಸತಿ ಕಟ್ಟಡ ಇತ್ಯಾದಿ.
Mob: 9448037696

Aquaguard & Kent
Water Purifier
Sales & Service
9901200444
#319, Near Mega Medical Store, Kuvempunagar

ಜಮೀನುಗಳು ಮಾರಾಟಕ್ಕಿದೆ
ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಹಾರೋಹಳ್ಳಿಯಲ್ಲಿ 12 ಗುಂಟೆ, ಮದ್ದೂರು ಹುಂಡಿಯಲ್ಲಿ 32 ಗುಂಟೆ, ಮದ್ದೂರಲ್ಲಿ 25 ಗುಂಟೆ, ಮಾವಿನಹಳ್ಳಿಯಲ್ಲಿ 3 ಎಕರೆ 7ಗುಂಟೆ, ಮತ್ತು ಮುರಡಗಳ್ಳಿ ಮುಖ್ಯರಸ್ತೆಯಲ್ಲಿ 1 ಎಕರೆ 4 ಗುಂಟೆ, ದೂರಗ್ರಾಮದಲ್ಲಿ 19 ಗುಂಟೆ ಜಮೀನುಗಳು ಮಾರಾಟಕ್ಕಿದೆ.
9945661696
9742666049, 9663793666

2.5 BHK
HOME INTERIORS @ ₹ 2.5 Lakh*
Home Space Mart *T&C Apply
91089 23123

ಹಸಿರು ನಮ್ಮ ಉಸಿರು

JOB OPPORTUNITY
Exclusively for Retire Officials / State / Central Govt. / VRS / Housewives, join Hands for second innings of Life and Grab the Opportunity for Creating Wealth with Fixed Salary + PF + Incentives, Seminor on 06/01/2025, @ Mourya Resident Hotels @ 11am for details
9449068132

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಲೇಟ್ ಮೈಸೂರು ಸಿಟಿ ಮನಸಾರ ರಸ್ತೆ, 6ನೇ ಕ್ರಾಸ್ ಇಟ್ಟಿಗೆಗೂಡು ಮನೆ ನಂ.258ರಲ್ಲಿ ವಾಸವಾಗಿರುವ ಲೇಟ್ ಮಂಜುನಾಥ್ ಮತ್ತು ಲೇಟ್ ಎಂ.ಶಕುಂತಲ ರವರ ಮಕ್ಕಳಾದ ಎಂ. ಭಾಗ್ಯ ಮತ್ತು ಎಂ.ಶಶಿ ಅವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತು ಅವರಿಗೆ ಅವರ ತಂದೆ ಮಂಜುನಾಥ್ ರವರಿಂದ ವಾರಸುದಾರಿಕೆ ಮೂಲಕ ಬಂದ ಸ್ವತ್ತಾಗಿರುತ್ತದೆ. ಈ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಯಾರಿಗಾದರೂ ಯಾವುದೇ ತಂಟೆತಕರಾರು ಇದ್ದಲ್ಲಿ ಈ ಪ್ರಕಟಣೆ ದಿನಾಂಕದಿಂದ 7 ದಿವಸಗಳೊಳಗೆ ಈ ಕೆಳಕಂಡ ವಿಳಾಸದಾರರಿಗೆ ಯಾವುದೇ ವ್ಯಕ್ತಿಗಳು ದಾಖಲೆಸಹಿತ ತಕರಾರು ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಮುಂದೆ ನಮ್ಮ ಕಕ್ಷಿದಾರರು ಕೆಳಕಂಡ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ತಂಟೆ–ತಕರಾರು ಇಲ್ಲವೆಂದು ತಿಳಿದು ವ್ಯವಹರಿಸುತ್ತಾರೆ ಎಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್

ಮೈಸೂರು ಸಿಟಿ ನಜರ್ಬಾದ್ ಮೊಹಲ್ಲಾ, ಸಿದ್ಧಾರ್ಥನಗರ ಬಡಾವಣೆಯಲ್ಲಿರುವ ಸ್ವತ್ತಿನ ಸಂಖ್ಯೆ 610 ವಿಸ್ತೀರ್ಣ ಪೂರ್ವ ಪಶ್ಚಿಮ: 30 ಅಡಿ ಉತ್ತರ ದಕ್ಷಿಣ: 40 ಅಡಿಗಳು ಒಟ್ಟು 1200 ಚದರಡಿಗಳು ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ ನಿವೇಶನ ನಂ.609, ಪಶ್ಚಿಮಕ್ಕೆ : ನಿವೇಶನ ನಂ.611, ಉತ್ತರಕ್ಕೆ ನಿವೇಶನ ನಂ.583, ದಕ್ಷಿಣಕ್ಕೆ : ರಸ್ತೆ.

ಸಹಿ/– ಎಸ್. ಉಮೇಶ್ ಮತ್ತು ವಾಣಿ ಎಂ.ಎಸ್, ವಕೀಲರು,
ನಂ.369, ಮಾಧವ ಭವನ,
ಜೆ.ಎಲ್.ಬಿ ರಸ್ತೆ, ಮೈಸೂರು
ದೂ.:0821–2429670,
ಮೊ: 9448342572

ಬ್ರಾಹ್ಮಣ ಧರ್ಮ ಸಹಾಯ ಸಭಾ (ರಿ).
ಕಲ್ಯಾಣ ಭವನ, ತ್ಯಾಗರಾಜ ರಸ್ತೆ, ಮೈಸೂರು
ದೂರವಾಣಿ: 8496070311, 0821–2446498
ಬೇಕಾಗಿದ್ದಾರೆ
ನಮ್ಮ ಸಹಾಯ ಸಭಾ ವತಿಯಿಂದ ಶಾಂತಿವನ ಹಾಗೂ ವೈದೀಕ ಭವನ ಇತರೆಗಳಲ್ಲಿ ಪಿತೃಕಾರ್ಯ ಹಾಗೂ ಕರ್ಮಾಂತರ ವಿಧಿ–ವಿಧಾನಗಳನ್ನು ನಡೆಸುತ್ತಿದ್ದು, ಸಹಾಯಕರಾಗಿ/ ಸಂಯೋಜಕರಾಗಿ ಕೆಲಸ ಮಾಡಲು ಸಿಬ್ಬಂದಿಗಳ ಅವಶ್ಯಕತೆಯಿದ್ದು, ಆಸಕ್ತ ಅಭ್ಯರ್ಥಿಗಳು ತಕ್ಷಣವೇ ಕೆಳಕಂಡ ಮೊಬೈಲ್ ಸಂಖ್ಯೆಗೆ ಅಥವಾ ಮೇಲಿನ ವಿಳಾಸದಲ್ಲಿರುವ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಗೌ॥ ಕಾರ್ಯದರ್ಶಿ



MYSORE INTERNATIONAL SCHOOL
Affiliated to CBSE DELHI AFF.NO.830550
#92/1-3, D.Salundi, H D Kote Main Road, Mysuru-570008
Contact No: 0821-2971010/8884414356/8884300400
Website: www.mysoreinternationalschool.com
A PRESTIGIOUS CBSE SCHOOL OF MYSORE
WE ARE HIRING!!!
QUALIFIED CANDIDATES WITH EXPERIENCE
DATE: 12.01.2025(SUNDAY)
TIMINGS: 10:00AM – 3:00PM
Excellent job opportunities & Career growth await right candidates with sound subject knowledge and good communication skill.
- Teachers – Kindergarten : Candidates with NTT/Montessori Training/D.Ed. (Preferably Lady Teachers)
- Teachers – Grade I - X : Candidates with B.A/M.A/B.Sc/M.Sc with B.Ed Degree for English, Kannada, Hindi, Mathematics, Science, Social Science and Computer Science.

ELIGIBILITY:
- Candidates should be fluent in communicative English and resourceful in their subject area and should be prepared for a demo on the same day.
- Preference will be given to the candidates who have experience in developing team spirit in organizing Co-Curricular activities.
- Salary is not a constraint for the deserving candidates.
- Apply to the Office with CV, Passport size photograph and photo copies of the testimonials on or before 8th January 2025 either by Hand / E-Mail.

Email ID: admin@mysoreinternationalschool.com
ADMISSION OPEN 2025-26
NURSERY ONWARDS
(LIMITED SEATS ONLY)


18ನೇ ವರ್ಷದ ಸವಿನೆನಪು

ನಿಧನ : 05-01-2007
ಕೆ.ಎಸ್.ಆರ್.ಟಿ.ಸಿ. ಎಂ.ವಿ. ಗೋವಿಂದರಾಜು
ವಸಂತ, ಕಾವ್ಯಶ್ರೀ, ಅಶ್ವತ್‌ಗೌಡ, ಮೈದನಹಳ್ಳಿ
ನೀವು ನಮ್ಮನ್ನಗಲಿ ಹದಿನೆಂಟು ವರ್ಷ ಕಳೆದರೂ ನಿಮ್ಮ ಸವಿನೆನಪು ಸದಾ ನಮ್ಮ ಮನದಲ್ಲಿ ಹಚ್ಚಹಸಿರಾಗಿರುತ್ತದೆ.ನಿಮ್ಮ ದಿವ್ಯ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುವ
ಅಕ್ಕ ಭಾವ ಮತ್ತು ಬಂಧು–ಮಿತ್ರರು

NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

NEWLY LAUNCHED PROJECT IN YELWALA
"PARISARA SIRI" - MYSORE
RESIDENTIAL PLOTS
@ JUST Rs. 675/- Sqft.,
2 KMS FROM YELWALA,
1 KM FROM NH 275
NEAR HORTICULTURE UNIVERSITY
MADIKERI – MYSORE HIGHWAY
DIMENSION
"30x40" "30x50" "40x60"
Contact: 9740391228

45 ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಬಾಧ್ಯಸ್ಥರಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು



ತುರ್ತು ಬಸ್ ಚಾಲಕರು ಬೇಕಾಗಿದ್ದಾರೆ
ನಂಜನಗೂಡು
KSRTC ಡಿಪೋದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸಲು ವಾಹನ ಚಾಲಕರು ತಕ್ಷಣ ಬೇಕಾಗಿದ್ದಾರೆ
ವೇತನ : ರೂ. 22,000/–
ಇ.ಎಸ್.ಐ. ಮತ್ತು ಇಪಿಎಫ್ ಸೌಲಭ್ಯವಿರುತ್ತದೆ
ಅರ್ಹತೆ: 1) ಹೆವಿ ಮೋಟರ್ ವಾಹನ ಚಾಲಕರಾಗಿ 2 ವರ್ಷಗಳ ಅನುಭವ ಹೊಂದಿರಬೇಕು. ಕರ್ನಾಟಕ ಮಾನ್ಯತೆ ಪಡೆದಿರುವ ಸರಕು ವಾಹನ ಬ್ಯಾಡ್ಜ್ ಹೊಂದಿರಬೇಕು.
2) 7ನೇ ತರಗತಿ ಉತ್ತೀರ್ಣರಾಗಿರಬೇಕು.
ಪೂಜ್ಯಾಯ ಸೆಕ್ಯೂರಿಟಿ ಸರ್ವಿಸಸ್ 63614 32128

HP IMPERIAL CITY
Mega Residential Villa Township
Mysuru - Hunsur Main Road, Mysuru
MUDA LIMITS
Just 4 km from Ilavala Satellite Bus Stand
Just ₹749/ per Sq.ft.
BOOKING OPEN
Easy 4 Instalment Facility
30x40 | 30x50 | 40x60 | 50x80
Sites with all facilities
HYLAND PROPERTIES 95133 01854
Kalidasa Road, Vijayanagara 1st Stage, Mysuru 90713 86615

SITES FOR SALE OR JV
North Facing Available
10,000sqft (Attached 3 sites)
40ft road, Roopa Nagar
Attached to SBM Layout, Bogadi
Just ₹ 3,999/- Sqft
Suitable for Schools, Apartments, Hotels, Malls, Educational Institutions
Contact : 8073300783 / 88846 16461

ಏಸ್ ಇನ್ಫ್ರಾ ಟೆಕ್ — ACE INFRA TECH
CONCRETE PRODUCTS WITH GERMAN TECHNOLOGY
ಜರ್ಮನ್ ತಂತ್ರಜ್ಞಾನದಿಂದ ತಯಾರಿಸಲ್ಪಟ್ಟ ಉತ್ಕೃಷ್ಟ ಗುಣಮಟ್ಟದ ಕಾಂಕ್ರೀಟ್ ಉತ್ಪನ್ನಗಳು ನಿಮ್ಮ ಕೈಗೆಟುಕುವ ದರದಲ್ಲಿ
ಫ್ಯಾಕ್ಟರಿ: ಸರ್ವೆ ನಂ. 102/3,4,5, ಕಡಕೊಳ, ಮೈಸೂರು – ನಂಜನಗೂಡು ರಸ್ತೆ, ಮೈಸೂರು ಜಿಲ್ಲೆ – 571311
MYSURU | BANGALORE | TAMILNADU | KERALA
Scan & Visit Our Website
9008609666 | 9535207443
ಬೇಕಾಗಿದ್ದಾರೆ
ಮಾರ್ಕೇಟಿಂಗ್ ಎಕ್ಸಿಕ್ಯೂಟೀವ್ಸ್ – 5 ಹುದ್ದೆಗಳು
Mail your resume to : aceinframys@gmail.com